೭. ನಿಯಮ ೬೯ರ ಮೇರೆಗೆ

ನೀರಾ ಇಳಿಸುವುದು ಮತ್ತು ನುಸಿ ರೋಗದ ಕುರಿತು ಮುಂದುವರಿದ ಚರ್ಚೆ.

+ ಶ್ರೀ ಕೆ.ಬಿ.ಮಲ್ಲಿಕಾರ್ಜುನ್(ಬೀರೂರು): ಮಾನ್ಯ ಉಪಾಧ್ಯಕ್ಷರೆ, ಕಳೆದ ಹತ್ತು ದಿವಸಗಳಿಂದ ತೆಂಗಿನ ಮರದಿಂದ ನೀರಾ ಇಳಿಸುವ ಬಗ್ಗೆ ಚರ್ಚೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದರೂ ಸಹ ಸರ್ಕಾರ ಯಾವುದೋ ಕಾರಣದಿಂದ ನೀರಾ ವಿಷಯವನ್ನು ನೀರಸಗೊಳಿಸುವಂಥ ಕೆಲಸವನ್ನು ಬಹಳ ವ್ಯವಸ್ಥಿತವಾಗಿ ಮಾಡುತ್ತಿದೆ. ಇದಕ್ಕೆ ಕಾರಣವೇನು ಎನ್ನುವಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಸರ್ಕಾರ ತೆಂಗಿನ ಮರದಿಂದ ನೀರಾ ಇಳಿಸುವ ಬಗ್ಗೆ ಅದರ ಒಂದು ಮುಖವನ್ನು ನೋಡುತ್ತಿದೆಯೇ ಹೊರತು ಅದರ ಇನ್ನೊಂದು ಮುಖವನ್ನು ನೋಡಲಿಕ್ಕೆ ತಯಾರಿಲ್ಲ. ಇಲ್ಲಿ ಒಂದು ವಿಷಯದ ಬಗ್ಗೆ ನಾನು ಸರ್ಕಾರದಿಂದ ಸ್ಪಷ್ಟೀಕರಣವನ್ನು ಅಪೇಕ್ಷಿಸುತ್ತೇನೆ. ತೆಂಗಿನ ಮರದಿಂದ ನೀರಾ ಇಳಿಸುವ ಕುರಿತು ಚರ್ಚೆಯನ್ನು ಈ ಸದನದಲ್ಲಿ ಕಳೆದ ಎರಡು ದಿವಸಗಳಿಂದ ನಾವು ಪ್ರಾರಂಭ ಮಾಡಿದೆವು. ಸದರಿ ವಿಷಯ ನಿಯಮ ೬೯ರ ಮೇರೆಗೆ ಸದನದ ಮುಂದಿದೆ. ಇಲ್ಲಿ ಏನು ಚರ್ಚೆಯಾಗುತ್ತದೆ, ಏನು ಆಗುವುದಿಲ್ಲ ಎನ್ನುವುದು ಇನ್ನೂ ಸರ್ಕಾರಕ್ಕೆ ಗೊತ್ತಿಲ್ಲ. ಸದನದ ಮುಂದೆ ಈ ವಿಷಯ ಇದ್ದರೂ ಸಹಿತ ನಿನ್ನೆ ಸಂಪುಟ ಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿ ಒಂದು ಅಂತಿಮವಾಗಿರತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿರುವುದನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಈ ಸದನದ ಸಾರ್ವಭೌಮತೆಯನ್ನು ಕಡಿಮೆ ಮಾಡತಕ್ಕಂಥ ಪ್ರಯತ್ನ ಇದು ಎನ್ನತಕ್ಕಂಥ ನನ್ನ ಅಭಿಪ್ರಾಯವನ್ನು ಇಲ್ಲಿ ಹೇಳುತ್ತಾ, ಸದನದಲ್ಲಿ ಸದರಿ ವಿಷಯ ಇದ್ದಾಗ ಸಂಪುಟದಲ್ಲಿ ಚರ್ಚೆ ಆಗಬಾರದೆಂದು ನಾನು ಹೇಳುವುದಿಲ್ಲ. ಆದರೆ ಯಾವುದೇ ಒಂದು ವಿಷಯದ ಮೇಲೆ ಸರ್ಕಾರದ ಭಾವನೆಗಳನ್ನು, ಸರ್ಕಾರದ ನಿಯಮಗಳನ್ನು ಮೊದಲು ಸದನದಲ್ಲಿ ವ್ಯಕ್ತಪಡಿಸಬೇಕಾಗುತ್ತದೆ. ಅದನ್ನು ಬಿಟ್ಟು ಇವತ್ತು ಏನಾಗಿದೆ ಎಂದರೆ- 'ನೀರಾ ಇಳಿಸುವುದಕ್ಕೆ ನಾವು ಸಧ್ಯಕ್ಕೆ ಅನುಮತಿ ಕೊಡುವುದಿಲ್ಲ'. ಎಂದು ಪತ್ರಿಕೆಯಲ್ಲಿ ಈಗಾಗಲೇ ಬಂದಿದೆ. ಆದ್ದರಿಂದ ಈ ಸದನದ ಗೌರವ ಕಡಿಮೆಯಾಗಿದೆ ಎನ್ನುವಂಥ ಭಾವನೆಯನ್ನು ನಾನು ಇಲ್ಲಿ ವ್ಯಕ್ತ ಮಾಡಲೇಬೇಕಾಗುತ್ತದೆ. ಇನ್ನು 'ನಾವು ಮೂರು ವರ್ಷ ತೆಂಗಿನ ಮರವನ್ನು ಬೆಳೆಸುತ್ತೇವೆ, ಅದು ೧೦೦ ವರ್ಷ ನಮ್ಮನ್ನು ಕಾಪಾಡುತ್ತದೆ' ಎನ್ನುವಂಥದ್ದು ತಮಗೆಲ್ಲಾ ತಿಳಿದಿರುವಂಥ ವಿಷಯವಾಗಿದೆ. ತೆಂಗಿನ ಮರಗಳನ್ನು ಸಾವಿರಾರು ವರ್ಷಗಳಿಂದ ಬೆಳೆಸಿಕೊಂಡು ಬಂದಿದ್ದೇವೆ. ಕಳೆದ ೧೦ ವರ್ಷಗಳಿಂದ ತೆಂಗಿನ ಮರಗಳಿಗೆ ದೊಡ್ಡ ರೋಗ ತಗುಲಿದೆ. ಮೊದಲನೆಯದಾಗಿ ಕಪ್ಪುತಲೆ ಹುಳದ ರೋಗವನ್ನು ಕಾಣುತ್ತಿದ್ದೇವೆ. ಕಳೆದ ಎರಡು ವರ್ಷಗಳಿಂದ ನುಸಿಪೀಡೆ ರೋಗವನ್ನು ನಾವು

ಕಾಣುತ್ತಿದ್ದೇವೆ. ಈ ಎರಡು ರೋಗಗಳನ್ನು ನಿಯಂತ್ರಣ ಮಾಡಲಿಕ್ಕೆ ಎಲ್ಲಾ ಸರ್ಕಾರಗಳು ಬಹಳಷ್ಟು ಪ್ರಯತ್ನಗಳನ್ನು ಮಾಡಿವೆ. ಈ ಬಗ್ಗೆ ನಾನು ಸರ್ಕಾರದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಆದರೂ ಈ ರೋಗಗಳ ಬಾಧೆ ತನ್ನ ಅಂತ್ಯವನ್ನು ಕಾಣಲಿಲ್ಲ. ಇದರಿಂದಾಗಿ ತೆಂಗಿನ ಮರಗಳಿಂದ ನೀರಾವನ್ನು ಇಳಿಸಬೇಕು ಎನ್ನುವಂಥ ಪ್ರಯತ್ನವನ್ನು ಜನರು ಮಾಡುತ್ತಿದ್ದಾರೆ. ತೆಂಗಿನ ಮರ ಯಾವತ್ತಿನಿಂದ ಹುಟ್ಟಿತ್ತೋ ಆವತ್ತಿನಿಂದ ಸಹಿತ ನೀರಾ ಇಳಿಸುವಂಥಾದ್ದು ರೈತರಿಗೆ ಗೊತ್ತಿರತಕ್ಕಂಥ ವಿಚಾರ. ಇದನ್ನು ಸರ್ಕಾರ ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಆದರೆ ಕಳೆದ ಒಂದು ವರ್ಷದಿಂದ ನೀರಾವನ್ನು ಇಳಿಸಬೇಕು, ನೀರಾ ತೆಗೆಯಲಿಕ್ಕೆ ಸರ್ಕಾರ ಅನುಮತಿಯನ್ನು ಕೊಡಬೇಕು ಎನ್ನುವಂಥ ಒತ್ತಾಯವನ್ನು ಏಕೆ ರೈತರು, ಜನಗಳು ಮಾಡುತ್ತಿದ್ದಾರೆನ್ನುವಂಥಾದ್ದು ಇವತ್ತಿನ ಚರ್ಚೆಯ ಪ್ರಮುಖವಾಗಿರುವಂಥ ವಿಷಯ. ನಾನು ರೈತನಾಗಿ ಹೇಳುವುದಾದರೆ, ತೆಂಗಿನ ಮರದಿಂದ ನೀರಾ ಇಳಿಸುವುದಕ್ಕೆ ರೈತರಿಗೆ ಆಗತಕ್ಕಂಥ ಕಷ್ಟ ಅಷ್ಟಿಷ್ಟಲ್ಲ. ಆದರೂ ಸಹಿತ ಆ ಅನಿವಾರ್ಯತೆ ರೈತರಿಗೆ ಬಂದಿದೆ. ನೀರಾ ಕಟ್ಟಬೇಕೆಂದರೆ ತೆಂಗಿನ ಮರದಲ್ಲಿರುವಂಥ ಎಲ್ಲಾ ಗರಿಗಳನ್ನು ಕಡಿದು ಹಾಕಬೇಕು. ತೆಂಗಿನ ಮರದಲ್ಲಿರತಕ್ಕಂಥ ಎಲ್ಲಾ ಕಾಯಿಗಳನ್ನು ಬೀಳಿಸಬೇಕು. ಅದಾದಮೇಲೆ ಹೊಂಬಾಳೆಯನ್ನು ಕುಯ್ದು ಮಡಕೆಯನ್ನು ಅಲ್ಲಿಗೆ ಕಟ್ಟಬೇಕು. ನೀರಾ ಕಟ್ಟತಕ್ಕಂಥ ತೋಟದಲ್ಲಿ ಹೋದರೆ ಒಂದು ನಿಮಿಷ ಕೂಡ ಅಲ್ಲಿ ಇರುವುದಕ್ಕೆ ಮನಸ್ಸು ಬಾರದಂಥ ಒಂದು ಹೀನಾಯವಾಗಿರುವಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾದರೂ ಸಹಿತ ಇವತ್ತಿನ ದಿವಸ ನೀರಾವನ್ನು ಇಳಿಸಬೇಕೆಂದು, ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಿರುವಂಥಾದ್ದಕ್ಕೆ ಅವರು ಇರುವ ಇವತ್ತಿನ ಪರಿಸ್ಥಿತಿಯೇ ಕಾರಣವಾಗಿದೆ. ಮೊದಲ ಕಾರಣ ಅವರ ಆರ್ಥಿಕ ಪರಿಸ್ಥಿತಿ. ತೆಂಗಿನ ಮರದಿಂದ ಇವತ್ತು ಅವರು ಜೀವನ ಮಾಡುವುದಕ್ಕೆ ಆಗದಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಎರಡನೆಯದು ಏನೆಂದರೆ ಎಷ್ಟೇ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ನಿಯಂತ್ರಣವಾಗದೇ ಇರುವಂಥ ನುಸಿಪೀಡೆ ರೋಗ ಮತ್ತು ಕಪ್ಪುತಲೆ ಹುಳದ ರೋಗ ನಮ್ಮ ರಾಜ್ಯದಲ್ಲಿ ಸುಮಾರು ೭ ಕೋಟಿ ತೆಂಗಿನ ಮರಗಳಿದ್ದು ಇದರಿಂದ ವರ್ಷಕ್ಕೆ ಸುಮಾರು ೩೧೨ ಕೋಟಿ ತೆಂಗಿನ ಕಾಯಿಗಳನ್ನು ಪ್ರತಿವರ್ಷ ಬೆಳೆಯುತ್ತಿದ್ದೆವು. ನಾಲ್ಕಾರು ವರ್ಷಗಳಿಂದ ಈ ತೆಂಗಿನ ಕಾಯಿಯ ಬೆಲೆ ಕಡಿಮೆಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಕಪ್ಪುತಲೆ ಹುಳ ಮತ್ತು ನುಸಿ ರೋಗಕ್ಕೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂಬುದನ್ನು ಇಲ್ಲಿ ಹೇಳಬೇಕಾಗುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ೧೯೯೯-೨೦೦೦ ಇಸವಿಯಲ್ಲಿ ಸುಮಾರು ೧೫ ಲಕ್ಷ ೮೮ ಸಾವಿರ ರೂಪಾಯಿಗಳನ್ನು ನುಸಿ ರೋಗ ಮತ್ತು ಕಪ್ಪುತಲೆ ಹುಳದ ರೋಗವನ್ನು ಹತೋಟಿಗೆ ತರಲಿಕ್ಕೆ ಖರ್ಚು ಮಾಡಲಾಗಿದೆ. ೨೦೦೦-೨೦೦೧ರಲ್ಲಿ ೩೧ ಲಕ್ಷದ ೪೫ ಸಾವಿರ ರೂಪಾಯಿಗಳನ್ನು ಖರ್ಚು

ಮಾಡಲಾಗಿದೆ. ಈ ವರ್ಷಕ್ಕೆ ೬೩ ಲಕ್ಷದ ೬೬ ಸಾವಿರ ರೂಪಾಯಿಗಳು ಇದ್ದು ಇದು ಖರ್ಚಾದ ಮೇಲೆ ಇನ್ನೂ ಹೆಚ್ಚಿಗೆ ಹಣವನ್ನು ಕೊಡುತ್ತೇವೆಂದು ಅನೇಕ ಸಂದರ್ಭದಲ್ಲಿ ಮಾನ್ಯ ತೋಟಗಾರಿಕೆ ಸಚಿವರು ಹೇಳುತ್ತಿದ್ದಾರೆ. ಶೇಕಡ ೧೦ರಷ್ಟು ತೆಂಗಿನ ಮರಗಳಿಗೆ ನುಸಿರೋಗ ತಗುಲಿದ್ದರೆ ಶೇಕಡ ೨೦ರಷ್ಟು ಮರಗಳಿಗೆ ಕಪ್ಪುತಲೆ ಹುಳದ ಬಾಧೆಯನ್ನು ನಾವು ಕಾಣುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ೭೦ ಲಕ್ಷ ತೆಂಗಿನ ಮರಗಳಿಗೆ ನುಸಿ ರೋಗ ತಗುಲಿರುವುದನ್ನು ನಾವು ನೋಡುತ್ತಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ೨.೨೦ಲಕ್ಷ ಮರಗಳಿಗೆ ಈ ರೋಗ ಬಂದಿದೆ. ಕಳೆದ ಒಂದು ವರ್ಷದಲ್ಲಿ ೨ ಲಕ್ಷದ ೨೦ ಸಾವಿರ ತೆಂಗಿನ ಮರಗಳಿಗೆ ೨೩೬೦ ಲೀಟರ್ ನೂವಾಕ್ರಾನ್ ಕೊಟ್ಟಿದ್ದೇವೆ. ೧೧೬೦ ಲೀಟರ್ ಡೈಕ್ರೋಟೋಫಾಸ್ ನಾವು ಕೊಟ್ಟಿದ್ದೇವೆ. ಕಳೆದ ಹತ್ತು ವರ್ಷಗಳಿಂದ ಈ ಗಿಡಗಳಿಗೆ ಔಷಧಿಗಳನ್ನು ಬೇರಿನ ಮೂಲಕವಾಗಲಿ ಅಥವಾ ಕಾಂಡವನ್ನು ಕೊರೆದು ಹಾಕತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ನಾವು ಬಹಳ ಹೆಮ್ಮೆಯಿಂದ ತೆಂಗಿನ ಮರಗಳನ್ನು ಕಲ್ಪವೃಕ್ಷ ಕಲ್ಪತರು ಎಂದು ಹೇಳುತ್ತಿದ್ದೆವು. ಕಳೆದ ಹತ್ತು ವರ್ಷಗಳಿಂದ ಈ ರೋಗಕ್ಕೆ ಸ್ವಲ್ಪ ಸ್ವಲ್ಪ ಔಷಧಿಯನ್ನು ಹಾಕುತ್ತಲೇ ಬಂದಿರುವುದರಿಂದ ಮತ್ತು ಮುಂದೆ ಸಹ ಇದೇ ರೀತಿ ತೆಂಗಿನ ಮರಗಳಿಗೆ ಟ್ರೀಟ್‌ಮೆಂಟ್ ಕೊಡುತ್ತಾ ಹೋದರೆ ಈ ಕಲ್ಪವೃಕ್ಷ ಎಂದು ನಾವು ಏನು ಹೇಳುತ್ತಿದ್ದೆವು ಅದು ಕೊನೆಗೆ ಒಂದು ದಿವಸ ವಿಷವೃಕ್ಷ ಆಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದನ್ನು ತಪ್ಪಿಸಬೇಕಾದಂಥ ದೃಷ್ಟಿಯಿಂದ ಇವತ್ತಿನ ದಿವಸ ಒಂದು ಭಾಗದಲ್ಲಿ ನೀರಾ ಇಳಿಸುವುದಕ್ಕೆ ನಾವು ಅನುಮತಿ ಕೇಳಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ರೈತರಿಗೆ ಆರ್ಥಿಕ ತೊಂದರೆ ಬರುವುದಕ್ಕೆ ಕಾರಣವೇನೆಂದರೆ, ಒಂದನೆಯದಾಗಿ ಎಳೆನೀರಿನ ವ್ಯಾಪಾರ ಕಡಿಮೆಯಾಗಿದೆ. ನಾವು ಔಷಧಿಯನ್ನು ಬೇರಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಮರ ವಿಷ ಆಗುತ್ತಿದೆ, ಎಳೇನಿರು ವಿಷವಾಗುತ್ತಿದೆಯೆಂದು ಹೇಳಿ ಎಳೆನೀರು ಮಾರಾಟ ನಿಂತು ಹೋಯಿತು. ಅಂದರೆ ೩ ಕೋಟಿ ಎಳೆನೀರು ಏನು ವ್ಯಾಪಾರ ಆಗುತ್ತಿತ್ತು ಅದು ನಿಂತು ಹೋಯಿತು. ತೆಂಗಿನ ಮರಕ್ಕೆ ರೋಗವಾಗಿರುವುದರಿಂದ ಅದರ ಎಳೆನೀರನ್ನು ಕುಡಿದರೆ ಜನರಿಗೆ ಇನ್ನೂ ಹೆಚ್ಚಿನ ರೋಗ ಬರುತ್ತದೆ ಎನ್ನುವ ದೃಷ್ಟಿಯಿಂದ ಮೊದಲನೇ ಹಂತದಲ್ಲಿ ಎಳೆನೀರಿನ ವ್ಯಾಪಾರ ಸ್ಥಗಿತವಾಗಿ ರೈತರಿಗೆ ಎಳೆನೀರಿನ ಬೆಲೆ ಸಿಗುತ್ತಿಲ್ಲ. ಇನ್ನು ತೆಂಗಿನ ಕಾಯಿಯ ಬೆಲೆ ವಿಷಯದಲ್ಲಿ ಹೇಳುವಾಗ ಈ ಡಬ್ಲ್ಯುಟಿಒ ಅಗ್ರಿಮೆಂಟ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗುತ್ತದೆ. ತೆಂಗಿನ ಕಾಯಿ ಬೆಲೆ ಕಡಿಮೆಯಾಗುವುದಕ್ಕೆ ನಾವು ಕಾರಣವನ್ನು ನೋಡುವುದಾದರೆ, ತೆಂಗಿನ ಕಾಯಿಯನ್ನು ಆಮದು ಮಾಡಿಕೊಳ್ಳುವುದಕ್ಕೆ ಡಬ್ಲ್ಯುಟಿಒನಲ್ಲಿ ಒಂದು ಅವಕಾಶ ಇದೆ. ನಮ್ಮ ರಾಷ್ಟ್ರಕ್ಕೆ ತೆಂಗಿನ ಕಾಯಿ, ಅದರ ತುರಿ ಮತ್ತು ಇತರ ಭಾಗ ಸೇರಿ ಸುಮಾರು ೮೦ ಲಕ್ಷ ಮೆಟ್ರಿಕ್ ಟನ್‌ನಷ್ಟು ಅಗತ್ಯ ಇದೆ. ನಮ್ಮಲ್ಲಿ ಸುಮಾರು ೭೦ ಲಕ್ಷ ಮೆಟ್ರಿಕ್ ಟನ್‌ನಷ್ಟು ಉತ್ಪಾದನೆ

ಇದೆ. ಉಳಿದ ೧೦ ಲಕ್ಷ ಮೆಟ್ರಿಕ್ ಟನ್‌ನಷ್ಟು ನಮಗೆ ಅಗತ್ಯ ಇರತಕ್ಕಂಥಾದ್ದನ್ನು ನಾವು ಕಾಣುತ್ತಿದ್ದೇವೆ. ನನಗೆ ಇರತಕ್ಕಂಥ ಮಾಹಿತಿ ಪ್ರಕಾರ ಡಬ್ಲ್ಯುಟಿಒ ಒಪ್ಪಂದದಂತೆ ಎಷ್ಟು ಆಮದು ಮಾಡಿಕೊಂಡಿದ್ದಾರೆಂದರೆ, ೧೯೯೩-೯೪ರಲ್ಲಿ ೫೮೭ ಲಕ್ಷ ತೆಂಗಿನಕಾಯಿ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಭಾಗವನ್ನು ಆಮದು ಮಾಡಿಕೊಂಡಿದ್ದಾರೆ. ೧೯೯೪-೯೫ರಲ್ಲಿ ೭೮೬ ಲಕ್ಷ ಮೆಟ್ರಿಕ್ ಟನ್‌ನಷ್ಟು ಆಮದು ಮಾಡಿಕೊಂಡಿದ್ದಾರೆ. ೧೯೯೫-೯೬ರಲ್ಲಿ ೮೧೦ ಲಕ್ಷ ಮೆಟ್ರಿಕ್ ಟನ್, ೧೯೯೬-೯೭ರಲ್ಲಿ ಗರಿಷ್ಠ ೧೨೯೮ ಲಕ್ಷ ಟನ್‌ನಷ್ಟು ಆಮದು ಮಾಡಿಕೊಳ್ಳಲಿಕ್ಕೆ ಸರ್ಕಾರ ಅನುಮತಿ ಕೊಟ್ಟು ಆ ಎಲ್ಲಾ ಪ್ರಾಡಕ್ಟ್ಸ್ ಸಹಿತ ನಮ್ಮ ದೇಶಕ್ಕೆ ಬಂದಿದೆ. ಜೊತೆಗೆ ನಾವು ರಫ್ತು ಮಾಡುವುದರಲ್ಲಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ೧೯೯೮-೯೯ ಮತ್ತು ೨೦೦೦-೨೦೦೧ನೇ ಇಸವಿಯ ಅಂಕಿಅಂಶಗಳು ನನ್ನ ಹತ್ತಿರ ಇಲ್ಲ. ಆದರೆ ಈ ಆಮದು ಮಾಡಿಕೊಂಡಂಥ ಸಂದರ್ಭದಲ್ಲಿ ಯಾವಯಾವುದನ್ನು ಆಮದು ಮಾಡಿಕೊಂಡಿದ್ದಾರೆಂದರೆ - ಡೈನೆಟ್ಸ್, ಕೊಬ್ಬರಿ, ತೆಂಗಿನ ಎಣ್ಣೆ, ಆಯಿಲ್‌ಕೇಕ್, ಕೊಬ್ಬರಿ ತುರಿ ಇವೆಲ್ಲವನ್ನೂ ಸಹಿತ ಮೀಲ್ ಎಂದು ಹೇಳುತ್ತೇವೆ. ಅದನ್ನು ಕೂಡ ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. ಇಂಪೋರ್ಟ್ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಡಬ್ಲ್ಯುಟಿಒ-ನಲ್ಲಿ ಏನಿದೆ ಎಂದರೆ ೩ ಪರ್ಸೆಂಟ್ ತೆಂಗಿನ ಪದಾರ್ಥಗಳನ್ನು ನಾವು ಇಂಪೋರ್ಟ್ ಮಾಡಿಕೊಳ್ಳಲಿಕ್ಕೆ ಅವಕಾಶವಿದೆ. ಅಂದರೆ. ನಾವು ಇಂಪೋರ್ಟ್ ಮಾಡಿಕೊಳ್ಳಬೇಕಾಗಿರತಕ್ಕಂಥದ್ದು ೨.೭೪ ಲಕ್ಷ ಟನ್‌ನಷ್ಟು ಮಾತ್ರ. ನಾವು ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಡಬ್ಲ್ಯುಟಿಒ ಪ್ರಕಾರ ಅನುಮತಿ ಇರತಕ್ಕಂಥಾದ್ದು ಹಾಗೆ. ಆದರೆ ನಾವು ಆಮದು ಮಾಡಿಕೊಳ್ಳುತ್ತಿರುವುದು ಎಷ್ಟು ಎಂದರೆ ೧೯೯೮-೯೯ರಲ್ಲಿ ೨೬.೨೨ ಲಕ್ಷ ಮೆಟ್ರಿಕ್ ಟನ್, ೧೯೯೯-೨೦೦೦ದಲ್ಲಿ ೪೧.೯೬ ಲಕ್ಷ ಮೆಟ್ರಿಕ್ ಟನ್, ೨೦೦೦-೨೦೦೧ರಲ್ಲಿ ೩೯.೭೫ ಲಕ್ಷ ಮೆಟ್ರಿಕ್ ಟನ್. ೨.೭೪ ಲಕ್ಷ ಮೆಟ್ರಿಕ್ ಟನ್ ಆಮದು ಮಾಡಿಕೊಳ್ಳಲು ಅನುಮತಿ ಇರುವಾಗ ಇವತ್ತು ೩೫ ರಿಂದ ೪೦ ಲಕ್ಷ ಮೆಟ್ರಿಕ್ ಟನ್ ಆಮದು ಮಾಡಿಕೊಂಡರೆ ತೆಂಗಿನ ಬೆಲೆ ಕುಸಿಯುವುದಿಲ್ಲವೇ? ತೆಂಗಿನ ಪದಾರ್ಥಗಳ ಬೆಲೆಗಳು ಕುಸಿಯುವುದಿಲ್ಲವೇ ಎಂಬ ಬಗ್ಗೆ ಸರ್ಕಾರ ಮನಗಾಣಬೇಕು. ಡಬ್ಲ್ಯೂ.ಟಿ.ಒ. ಒಪ್ಪಂದದ ಪ್ರಕಾರ ಆಮದು ಪದಾರ್ಥಗಳ ಮೇಲೆ ೩೦೦ ಪರ್‌ಸೆಂಟ್ ತೆರಿಗೆಯನ್ನು ಹಾಕಬಹುದು. ಆದರೆ ಇವತ್ತು ೫೫ ರಿಂದ ೮೫ ಪರ್‌ಸೆಂಟ್ ಮಾತ್ರ ತೆರಿಗೆ ಹಾಕಿ ಆಮದು ಮಾಡಿಕೊಳ್ಳುವ ಪ್ರಯತ್ನವಾಗುತ್ತಿದೆ. ಇದರ ಜೊತೆಗೆ ಡ್ರೈ-ಫ್ರೂಟ್ಸ್ ಎಂಬ ಹೆಸರಿನಲ್ಲಿ ಮಲೇಷಿಯಾದಿಂದ ತೆಂಗಿನ ಕಾಯಿ ಬರುತ್ತಿದೆ. ಅದು ಕಳ್ಳತನದಲ್ಲಿ ಸಹ ಬರುತ್ತಿದೆ, ಜೊತೆಗೆ ಡ್ರೈ-ಫ್ರೂಟ್ಸ್‌ಗೆ ತೆರಿಗೆ ವಿನಾಯಿತಿ ಇರುವುದರಿಂದ ಅದರ ಹೆಸರಿನಲ್ಲಿ ಬರುತ್ತಿದೆ. ಗಾಯದ ಮೇಲೆ ಬರೆ ಎಳೆದ ಹಾಗೆ ಮತ್ತೆ ಹತ್ತು ಪರ್‌ಸೆಂಟ್ ಆಮದು ಡ್ಯೂಟಿಯನ್ನು ತೆಂಗಿನ ಪದಾರ್ಥಗಳ ಮೇಲೆ ಕಡಿಮೆ ಮಾಡುವುದಾಗಿ ಮೊನ್ನೆ ಪ್ರಧಾನ

ಮಂತ್ರಿಗಳು ಹೇಳಿದ್ದಾರೆ. ಈಗಲೇ ನಾವು ಹಾಳಾಗಿ ಹೋಗಿದ್ದೇವೆ. ಅದರ ಮೇಲೆ ಇನ್ನೂ ಎಕ್ಸಂಪಷನ್ ಕೊಟ್ಟು ಇನ್ನೂ ಇಂಪೋರ್ಟ್ ಜಾಸ್ತಿ ಮಾಡತಕ್ಕ ವ್ಯವಸ್ಥೆ ನಡೆಯುತ್ತಿದೆ. ತೆಂಗಿನ ಬೆಳೆಗಾರ ಏಕೆ ಸಂಕಷ್ಟಕ್ಕೆ ಸಿಕ್ಕಿದ್ದಾನೆಂದರೆ, ಮೊದಲನೆಯದಾಗಿ ಕಲ್ಪವೃಕ್ಷ ವಿಷ ವೃಕ್ಷವಾಗುತ್ತಿರತಕ್ಕಂಥದ್ದು, ಎರಡನೆಯದಾಗಿ ತೆಂಗಿನ ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತಿರುವುದು, ಮೂರನೆಯದಾಗಿ ಎಳನೀರು ವಿಷವಾಗಿದೆಯೆಂಬ ದೃಷ್ಟಿಯಿಂದ ಮಾರಾಟವಾಗದಿರತಕ್ಕದ್ದು. ಜೊತೆಗೆ ಸರ್ಕಾರ ಮರಕ್ಕೆ ಬಂದಿರುವ ರೋಗವನ್ನು ನಿವಾರಣೆ ಮಾಡುವುದಕ್ಕೆ ಆಗುತ್ತಿಲ್ಲ. ಸರ್ಕಾರ ಸರ್ವ ಪ್ರಯತ್ನ ಮಾಡಿ ರೋಗ ನಿವಾರಣೆ ಮಾಡಲು ಕ್ರಮ ತೆಗೆದುಕೊಳ್ಳುತ್ತಿದೆ, ಆದರೆ ರೋಗದ ನಿವಾರಣೆಯಾಗುತ್ತಿಲ್ಲ. ೧೯೯೬-೯೭ರಲ್ಲಿ ಆಮದು ಕಡಿಮೆ ಇತ್ತು, ರಫ್ತು ಜಾಸ್ತಿ ಇತ್ತು. ಆ ಸಂದರ್ಭದಲ್ಲಿ ಒಂದು ಎಕರೆಗೆ ನಲವತ್ತು ತೆಂಗಿನ ಗಿಡವಿದ್ದರೆ ನೂರು ಕಾಯಿಗಳಂತೆ ನಾಲ್ಕು ಸಾವಿರ ಕಾಯಿಗಳಿಗೆ ಒಂದಕ್ಕೆ ಐದು ರೂಪಾಯಿಗಳಂತೆ ೨೦ ಸಾವಿರ ರೂಪಾಯಿಗಳ ಆದಾಯ ಬರುತ್ತಿತ್ತು. ನಾಲ್ಕು ಸಾವಿರ ರೂಪಾಯಿಗಳು ಖರ್ಚಾಗುತ್ತಿತ್ತು. ಒಬ್ಬ ರೈತನಿಗೆ ಒಂದು ಎಕರೆ ತೆಂಗಿನ ಮರಕ್ಕೆ ೧೪ ಸಾವಿರ ರೂ. ಉಳಿಯುತ್ತಿತ್ತು. ೧೯೯೮-೯೯ರಲ್ಲಿ ಅದೇ ಮರಗಳಿಗೆ ಖರ್ಚನ್ನು ಕಳೆದು ೧೪ ಸಾವಿರ ರೂ. ಉಳಿತಾಯವಾಗುತ್ತಿತ್ತು. ಈಗ ನುಸಿ ರೋಗ, ಇತರೆ ರೋಗಗಳು ಬಂದ ಮೇಲೆ ಇಳುವರಿ ಕಡಿಮೆಯಾಗಿ ನಲವತ್ತು ಗಿಡಗಳಲ್ಲಿ ಒಂದು ಗಿಡಕ್ಕೆ ಕೇವಲ ೨೫ ಕಾಯಿಗಳು ಬರುತ್ತಿದೆ. ಬೆಲೆ ಒಂದು ಕಾಯಿಗೆ ೨ರೂ ೫೦ ಪೈಸೆ ಇದೆ. ಆದರಿಂದ ನಮಗೆ ಈಗ ಎರಡೂವರೆ ಸಾವಿರ ರೂಪಾಯಿಗಳ ಆದಾಯ ಬಂದರೆ ಖರ್ಚು ಎಂಟು ಸಾವಿರ ರೂಪಾಯಿ ಆಗುತ್ತದೆ. ಒಂದು ಎಕರೆ ತೆಂಗಿನ ತೋಟವಿದ್ದರೆ ಕೈಯಿಂದ ಐದೂವರೆ ಸಾವಿರ ರೂಪಾಯಿ ಹಣ ಖರ್ಚು ಮಾಡಿ ತೋಟವನ್ನು ಉಳಿಸಿಕೊಳ್ಳುವ ಪರಿಸ್ಥಿತಿ ಈಗ ಬಂದಿದೆ. ರಾಷ್ಟ್ರೀಯ ಕೃಷಿ ಮಾರಾಟ ಮಂಡಳಿಯಿಂದ ನಮ್ಮ ಕಡೂರು ತಾಲ್ಲೂಕಿಗೆ ೩ ಕೋಟಿ ರೂಪಾಯಿಗಳಷ್ಟು ಬಿಡುಗಡೆ ಮಾಡಿ ಕೊಬ್ಬರಿಯನ್ನು ಖರೀದಿ ಮಾಡಿ ಎಂದು ಹೇಳಿದ್ದರು. ಆ ಕೆಲಸವೂ ಆಗುತ್ತಿಲ್ಲ. ತೆಂಗಿನ ಬೆಳೆಗಾರರಿಗೆ ಯಾವುದೇ ವ್ಯವಸ್ಥೆ ಆಗದಿರುವುದರಿಂದ ಇವರುಗಳೆಲ್ಲಾ ಬಹಳ ಹೀನ ಸ್ಥಿತಿಗೆ ತಲುಪಿದ್ದಾರೆ. ತೆಂಗಿನ ಸಿಪ್ಪೆ ಸುಲಿದರೆ ಅದರಿಂದ ನಾರು ಬರುತ್ತಿತ್ತು, ಅದನ್ನು ಬಹಳಷ್ಟು ಕಡೆ ವ್ಯಾಪಾರ ಮಾಡುತ್ತಿದ್ದೆವು. ಆದರೆ ನುಸಿ ರೋಗ ಬಂದ ಮೇಲೆ ತೆಂಗಿನ ಹೊಸ ಭಾಗವಾದ ಮಟ್ಟೆ ಏನಿದೆ ಅದರಲ್ಲಿ ನಾರೇ ಬಾರದಿರುವ ಸ್ಥಿತಿಯಾಗಿದೆ. ಬರಗಾಲದಲ್ಲಿ ಅಧಿಕ ಮಾಸವೆಂಬಂತೆ ಎಲ್ಲಾ ಒಂದೇ ಸರ್ತಿ ತೆಂಗಿನ ಬೆಳೆಗಾರರ ಮೇಲೆ ಗಧಾ ಪ್ರಹಾರ ಆಗುತ್ತಿದೆ. ಪ್ರಕೃತಿ, ಸರ್ಕಾರ ಎಲ್ಲವೂ ತೆಂಗಿನ ಬೆಳೆಗಾರರ ಮೇಲೆ ಬೀಳುವ ವ್ಯವಸ್ಥೆಯಾಗಿ ತೆಂಗಿನ ಬೆಳೆಗಾರರು ಬಹಳ ಹೀನ ಸ್ಥಿತಿಯಲ್ಲಿರುವುದನ್ನು ಕಾಣುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ: ತಮ್ಮ ತಾಲ್ಲೂಕಿನಲ್ಲಿ ಎಷ್ಟು ತೆಂಗಿನ ಮರಕ್ಕೆ ರೋಗ

ಬಂದಿದೆ?

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ನನ್ನ ಕಡೂರು ಕ್ಷೇತ್ರದಲ್ಲಿ ಒಟ್ಟು ೬ ಲಕ್ಷ ಮರಗಳು ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಒಬ್ಬ ಮನುಷ್ಯ ಒಂದು ದಿನಕ್ಕೆಷ್ಟು ಮರಗಳಿಂದ ಶೇಂದಿಯನ್ನು ಇಳಿಸಲು ಸಾಧ್ಯ ಎಂಬುದು ಗೊತ್ತಿದೆಯೆ? ಆರು ಲಕ್ಷ ಮರಕ್ಕೆ ಎಷ್ಟು ಜನ ಬೇಕಾಗಬಹುದು ಯೋಚನೆ ಮಾಡಿ.

ಶ್ರೀ ಎಂ.ಚಂದ್ರಪ್ಪ: ತಮಗೆ ಅದರ ಬಗ್ಗೆ ಹೆಚ್ಚು ಗೊತ್ತಿರುವುದರಿಂದ ಅದರ ಬಗ್ಗೆ ತಾವೇ ಸದನಕ್ಕೆ ಹೇಳಿದರೆ ಒಳ್ಳೆಯದು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಉಪಾಧ್ಯಕ್ಷರೆ, ಅವರು ಈ ರೀತಿ ಪ್ರಶ್ನೆ ಕೇಳುತ್ತಾರೆ ಎಂದು ನಾವು ಮೊದಲೇ ನಿರೀಕ್ಷಿಸಿದ್ದೆವು. ನಮ್ಮ ಕಡೂರು ತಾಲ್ಲೂಕಿನಲ್ಲಿ ಆರು ಲಕ್ಷ ಮರಗಳು ಇದೆಯೆಂಬ ಮಾಹಿತಿ ನಮ್ಮ ಬಳಿ ಇದೆ. ಅದರಲ್ಲಿ ಒಂದರಿಂದ ಒಂದೂವರೆ ಲಕ್ಷ ಮರಗಳಿಗೆ ನುಸಿ ರೋಗ ಬಂದಿದೆ. ಮೂರರಿಂದ ಮೂರು ಲಕ್ಷದ ಇಪ್ಪತ್ತು ಸಾವಿರ ಮರಗಳಿಗೆ ಕಪ್ಪುತಲೆ ಹುಳುವಿನ ರೋಗ ಬಂದಿದೆ. ನೀರಾವನ್ನು ಇಳಿಸಲು ಏಕೆ ಅನುಮತಿ ಕೊಡಬೇಕೆಂದು ಕೇಳುತ್ತಿದ್ದೇವೆಂದರೆ, ಗರಿಯನ್ನು ಕಡಿದರೆ ಕಪ್ಪುತಲೆ ಹುಳು ಹೋಗುತ್ತದೆ, ನುಸಿ ರೋಗವು ಕಾಯಿಗೆ ಬರುವುದರಿಂದ ನೀರಾವನ್ನು ಕಟ್ಟುವ ಸಂದರ್ಭದಲ್ಲಿ ಕಾಯಿಗಳೆಲ್ಲವನ್ನೂ ಕಿತ್ತು ಹಾಕಿ ಹೊಂಬಾಳೆಯಲ್ಲಿ ನೀರಾವನ್ನು ಇಳಿಸುತ್ತಾರೆ. ಈ ರೀತಿ ಮಾಡಿದರೆ ಇರತಕ್ಕಂಥ ರೋಗವು ಪೂರ್ಣಮಟ್ಟದಲ್ಲಿ ಹತೋಟಿಗೆ ಬರುತ್ತದೆ ಎಂಬ ಒಂದೇ ಕಾರಣದಿಂದ ನೀರಾ ಇಳಿಸಲು ಅನುಮತಿಯನ್ನು ಕೋರುತ್ತಿದ್ದೇವೆ. ನೀರಾ ಇಳಿಸುವುದರಿಂದ ಎಷ್ಟು ಆದಾಯ ಬರುತ್ತದೆಯೆಂದು ಕೇಳಿದರು. ಇವತ್ತು ನೀರಾವನ್ನು ಕಟ್ಟಲು ಪ್ರಾರಂಭ ಮಾಡಿದರೆ ಇಪ್ಪತ್ತೊಂದು ದಿವಸಗಳ ನಂತರ ನೀರಾ ಬರಲು ಪ್ರಾರಂಭವಾಗುತ್ತದೆಂಬ ಮಾಹಿತಿ ಇದೆ. ಒಂದು ವರ್ಷದಲ್ಲಿ ಸುಮಾರು ೧೮೦ ದಿವಸಗಳು ನೀರಾ ಬರುತ್ತದೆ. ಉಳಿದ ದಿವಸಗಳಲ್ಲಿ ನೀರಾ ಬರುವುದಿಲ್ಲ. ಒಂದು ಮರಕ್ಕೆ ನಾವು ಎಲ್ಲಾ ಖರ್ಚು ಕಳೆದರೂ ಹತ್ತು ರೂಪಾಯಿಗಳು ಸಿಗುತ್ತದೆ. ಒಂದು ಮರಕ್ಕೆ ಒಂದರಿಂದ ಎರಡು ಲೀಟರ್‌ಗಳವರೆಗೆ ನೀರಾ ಬರುತ್ತದೆ. ಆವರೇಜ್ ಒಂದು ಲೀಟರ್‌ಗೆ ೨೦ ರೂಪಾಯಿಗಳು ಎಂದರೂ ಹತ್ತು ರೂಪಾಯಿಗಳ ಖರ್ಚು ಹೋದರೆ ಹತ್ತು ರೂಪಾಯಿಗಳು ಸಿಗುತ್ತದೆ. ಕೊನೆಯಪಕ್ಷ ಐದು ರೂಪಾಯಿಗಳು. ಐದು ರೂಪಾಯಿಗಳು ಸಿಕ್ಕಿದರೂ ಒಂದು ಎಕರೆಗೆ ೩೬ ಸಾವಿರ ರೂಪಾಯಿಗಳನ್ನು ಉಳಿಸಬಹುದು. ಇದರಿಂದ ಆರ್ಥಿಕವಾಗಿ ರೈತರಿಗೆ ಅನುಕೂಲವಾಗುತ್ತದೆ ಎಂಬ

ದೃಷ್ಟಿಯಿಂದ ನೀರಾವನ್ನು ಇಳಿಸಲು ಅನುಮತಿ ಕೊಡಬೇಕೆಂದು ಕೇಳುತ್ತಿದ್ದೇವೆ. ಬೆಳಿಗ್ಗೆ ಆರು ಗಂಟೆಯೊಳಗೆ ನೀರಾವಾಗಿರುತ್ತದೆ, ಅನಂತರ ಹೆಂಡವಾಗಿರುತ್ತದೆ ಎಂಬುದು ಸತ್ಯ. ಪ್ರಪಂಚದಲ್ಲಿ ಏನೇನೋ ಕಂಡು ಹಿಡಿದಿದ್ದಾರೆ. ಆದ್ದರಿಂದ ಇದರ ಬಗ್ಗೆ ಒಂದು ಸಂಶೋಧನೆಯಾಗಬೇಕು. ಬೆಳಿಗ್ಗೆ ಆರು ಗಂಟೆಯ ನಂತರ ನೀರಾವನ್ನು ನೀರಾವಾಗಿಯೇ ಉಳಿಸುವ ಸಂಶೋಧನೆಯ ಪ್ರಯತ್ನವಾಗಿದೆ. ನೀರಾವನ್ನು ಕುಡಿದರೆ ಜನರಿಗೆ ಏನೂ ತೊಂದರೆಯಾಗುವುದಿಲ್ಲ. ಆದರೆ ಅದಕ್ಕೆ ಕ್ಲೋರೋ ಹೈಡ್ರೈಡ್‌ನ್ನು ಹಾಕಿ ಕಲಬೆರಿಕೆ ಮಾಡುತ್ತಾರೆ ಎಂಬುದು ನಮ್ಮ ಗಮನದಲ್ಲಿದೆ. ನೀರಾವನ್ನು ಇಳಿಸಲು ಅನುಮತಿ ಕೊಟ್ಟರೆ ಪ್ರತಿಯೊಬ್ಬ ರೈತನೂ ನೀರಾವನ್ನು ಇಳಿಸಲು ಪ್ರಯತ್ನ ಮಾಡುವುದಿಲ್ಲ. ಯಾರ ತೋಟದಲ್ಲಿ ರೋಗವಿದೆ, ಯಾರು ಆರ್ಥಿಕವಾಗಿ ಈ ರೋಗ ಬಂದಿದ್ದರಿಂದ ಸಂಕಷ್ಟಕ್ಕೆ ಒಳಗಾಗಿದ್ದಾರೆ ಅಂಥವರು ಮಾತ್ರ ನೀರಾವನ್ನು ಇಳಿಸಲು ಪ್ರಯತ್ನ ಮಾಡುತ್ತಾರೆ. ಏಕೆಂದರೆ ನೀರಾ ಇಳಿಸಬೇಕೆಂದರೆ ಮರಗಳನ್ನು ನೋಡಿ ಕೈಕಾಲುಗಳೆಲ್ಲಾ ಕಡಿದಂತಾಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರೇನು ರಾಜ್ಯದಲ್ಲಿರುವ ಏಳು ಕೋಟಿ ಮರಗಳಿಗೂ ನೀರಾವನ್ನು ಕಟ್ಟುತ್ತಾರೆ ಎನ್ನುವ ಭಾವನೆ ಇಟ್ಟುಕೊಂಡಿದ್ದಾರೆ ಅದು ಆಗುವುದಿಲ್ಲ. ಆ ಗಾಬರಿ ಪಡಬೇಕಾಗಿಲ್ಲ, ಹಣಕ್ಕಾಗಿ ಬೆಳೆದಿರುವ ಮರಗಳನ್ನು ಕಡಿಯಲು ಯಾವ ರೈತನೂ ಹೋಗುವುದಿಲ್ಲ. ಒಂದು ವೇಳೆ ಊಟವಿಲ್ಲದೇ ಸಾಯುತ್ತಾರೆಯೇ ಹೊರತು ಇವತ್ತಿನ ದಿವಸ ಮರವನ್ನು ಕಡಿದು ಅದರಿಂದ ನೀರಾ ಇಳಿಸತಕ್ಕಂಥ ಕೆಲಸವನ್ನು ಯಾವ ರೈತನೂ ಕೂಡ ಮಾಡುವುದಿಲ್ಲ. ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ನೋಡಬೇಕಾದರೆ ಒಂದು ತೋಟಕ್ಕೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಇವತ್ತಿನ ದಿವಸ ಯಾವ ರೈತರಿಗೆ ಅನಿವಾರ್ಯವಾಗಿ ಅಂತಹ ವಾತಾವರಣ ನಿರ್ಮಾಣವಾಗಿದೆಯೋ ಅಂಥ ರೈತ ಮಾತ್ರ ನೀರಾ ಇಳಿಸುವುದಕ್ಕೆ ಪ್ರಯತ್ನ ಮಾಡುತ್ತಾನೆ. ಆದ್ದರಿಂದ ಈ ಒಂದು ಸಂಕಷ್ಟದಲ್ಲಿರತಕ್ಕಂಥ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಮತ್ತು ಈ ರೋಗ ನಿವಾರಣೆಯಾಗುವುದಕ್ಕೋಸ್ಕರ ನೀರಾ ಇಳಿಸುವುದಕ್ಕೆ ಸರ್ಕಾರದ ಅನುಮತಿಯನ್ನು ನಾವು ಕೋರುತ್ತಿದ್ದೇವೆ. ಹಾಗೆಯೇ ಇದರ ಬಗ್ಗೆ ಒಂದು ಸಂಶೋಧನೆಯನ್ನು ಮಾಡಿಸಬೇಕೆಂಬ ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಯಾವ ರೈತ ಕಾನೂನಿಗೆ ಹೆದರಿಕೊಂಡಿದ್ದಾನೆಯೋ ಆತ ನೀರಾ ಇಳಿಸತಕ್ಕಂಥ ಕೆಲಸವನ್ನು ಮಾಡುತ್ತಿಲ್ಲ. ನೀರಾ ಇಳಿಸುವುದಕ್ಕೆ ಸರ್ಕಾರ ಯಾವಾಗ ಅನುಮತಿ ಕೊಡುತ್ತದೆಂದು ಸರ್ಕಾರದ ಕಡೆ ನೋಡುತ್ತಾ ಕುಳಿತುಕೊಂಡಿದ್ದಾರೆ. ಹಾಗೆಯೇ ಶಾಸಕರು ಮತ್ತು ಲೋಕಸಭಾ ಸದಸ್ಯರು ಬಂದಾಗ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ ಮತ್ತು ಮಂತ್ರಿಗಳು ಬಂದಾಗ ನೀರಾ ಇಳಿಸುವುದಕ್ಕೆ ಅನುಮತಿಯನ್ನು ಕೊಡಿ ಎಂದು ಕೈಮುಗಿದು ಅವರಿಗೆ ಹೂವಿನ ಹಾರವನ್ನು ಹಾಕುತ್ತಿದ್ದಾರೆಯೇ ಹೊರತು ಇವರ್‍ಯಾರೂ ಕೂಡ ನೀರಾ ಇಳಿಸುವಂಥ

ಕೆಲಸವನ್ನು ಮಾಡುತ್ತಿಲ್ಲ. ಆದರೆ ಇವತ್ತಿನದಿವಸ ಯಾರ್‍ಯಾರು ಕಾನೂನನ್ನು ಕೈಗೆ ತೆಗೆದುಕೊಂಡಿದ್ದಾರೋ ಅಂಥವರೆಲ್ಲಾ ನೀರಾ ಇಳಿಸಿ ಮಾರಾಟ ಮಾಡಿ ಜೀವನ ನಡೆಸುತ್ತಿದ್ದಾರೆ. ಇದರ ಮಧ್ಯೆ ಅಬ್ಕಾರಿ ಮತ್ತು ಪೋಲೀಸ್ ಇಲಾಖೆಯವರ ಲಾಭಿ ಹೆಚ್ಚಾಗಿದೆ. ಇವತ್ತಿನ ದಿವಸ ಯಾರ್‍ಯಾರು ಅಬ್ಕಾರಿ ಗುತ್ತಿಗೆಯನ್ನು ತೆಗೆದುಕೊಂಡಿರುವವರು ಇದ್ದಾರೆ, ಅವರು ದುಡ್ಡು ಕೊಟ್ಟು ಇಂಥ ಕಡೆ ಹೋಗಿ ರೈಡ್ ಮಾಡಿ ಮತ್ತು ಅಲ್ಲಿರತಕ್ಕಂಥ ರೈತರನ್ನು ಹಿಡಿದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಈ ಗುತ್ತಿಗೆದಾರರಿಗೆ ಪ್ರತಿದಿವಸ ಇದೊಂದು ವೃತ್ತಿಯಾಗಿದೆ. ಇವರು ಅಬ್ಕಾರಿ ಮತ್ತು ಪೋಲೀಸ್ ಸ್ಟೇಷನ್ ಹೋಗುವುದು; ಸ್ಥಳಕ್ಕೆ ಬಂದು ನೀರಾ ಇಳಿಸುವುದಕ್ಕೆ ಇಟ್ಟಿರತಕ್ಕಂಥ ಮಡಿಕೆಯನ್ನು ಒಡೆದು ಹಾಕುವುದು ಮತ್ತು ರೈತರ ಮೇಲೆ ದೌರ್ಜನ್ಯ ಮಾಡುವುದು ಹಾಗೂ ಮಕ್ಕಳನ್ನು ಮತ್ತು ಹೆಣ್ಣುಮಕ್ಕಳನ್ನು ಹಿಡಿದುಕೊಂಡು ಹೋಗಿ ಪೊಲೀಸರಿಗೆ ಒಪ್ಪಿಸತಕ್ಕಂಥ ಕೆಲಸ ನಡೆಯುತ್ತಿದೆ. ಇಂಥ ಪರಿಸ್ಥಿತಿ ಎಲ್ಲಾ ಕಡೆ ನಿರ್ಮಾಣವಾಗಿದೆ. ಈ ಪರಿಸ್ಥಿತಿ ಏತಕ್ಕಾಗಿ ಆಗಬೇಕು? ಆದ್ದರಿಂದ ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ, ಇವತ್ತಿನ ದಿವಸ ಯಾರು ಸಂಕಷ್ಟದಲ್ಲಿದ್ದಾರೆ ಅಂಥವರಿಗೆ ಕಾನೂನು ಅಡಿಯಲ್ಲಿ ಒಂದು ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಒಂದು ಸಾರಿ ಅವಕಾಶಕೊಟ್ಟು ನೋಡಬೇಕು. ಇದರಿಂದ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ಇವತ್ತಿನ ದಿವಸ ನೀರಾ ಇಳಿಸುವುದಕ್ಕೆ ಒಂದು ಮರಕ್ಕೆ ಇಷ್ಟೆಂದು ತೆರಿಗೆ ನಿಗದಿ ಮಾಡಿದ ಪಕ್ಷದಲ್ಲಿಯೂ ಕೂಡ ರೈತರು ತೆರಿಗೆ ಕಟ್ಟಿ ನೀರಾ ಇಳಿಸತಕ್ಕಂಥ ಕೆಲಸ ಮಾಡುತ್ತಾರೆ. ಇವತ್ತಿನ ದಿವಸ ನೀರಾಗೆ ಅನುಮತಿ ಕೊಟ್ಟರೆ ನಮ್ಮ ರಾಜ್ಯದಲ್ಲಿರತಕ್ಕಂಥ ೭ ಕೋಟಿ ಮರಗಳಿಂದ ನೀರಾ ಇಳಿಸಿದರೆ ದೇಶದ ಮಕ್ಕಳೆಲ್ಲಾ ಹೆಂಡ ಕುಡಿಯುತ್ತಾರೆ ಎನ್ನತಕ್ಕಂಥ ಭಾವನೆ ಸರ್ಕಾರಕ್ಕೆ ಇರಬಹುದು. ಇದು ತಪ್ಪೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇವತ್ತಿನ ದಿವಸ ನಿರ್ಗತಿಕರಾಗಿರತಕ್ಕಂಥ ರೈತರು ಅಥವಾ ಆರ್ಥಿಕ ಪರಿಸ್ಥಿತಿಯಲ್ಲಿ ತೊಂದರೆ ಇರತಕ್ಕಂಥ ಹಾಗೂ ನುಸಿರೋಗವನ್ನು ವಾಸಿ ಮಾಡುವುದಕ್ಕೆ ಆಗದೇ ಇರತಕ್ಕಂಥ ರೈತರು ನೀರಾ ಇಳಿಸುವಂಥ ಕೆಲಸದಿಂದ ಅವರ ಜೀವನವನ್ನು ಹಸನು ಮಾಡಿಕೊಳ್ಳುತ್ತಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇರತಕ್ಕಂಥ ಸೇಂದಿಯಿಂದ ಮತ್ತು ಶರಾಬ್‌ನಿಂದ ಎಷ್ಟು ಅನ್ಯಾಯವಾಗುತ್ತಿದೆ ಎನ್ನತಕ್ಕಂಥಾದ್ದನ್ನು ಮತ್ತು ನೀರಾ ಇಳಿಸುವುದರಿಂದ ಎಷ್ಟು ಅನ್ಯಾಯವಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಇದನ್ನು ಪ್ರಯೋಗ ಮಾಡಿಸಿ ನೋಡಿದಾಗ ನೀರಾದಿಂದ ಮಾಡಿದಂಥ ಸೇಂದಿಯಿಂದ ಅಷ್ಟೇನೂ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುವುದಿಲ್ಲ ಎನ್ನತಕ್ಕಂಥಾದ್ದು ಗೊತ್ತಾಗಿದೆ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡಿದ ನಂತರ ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಏಕೆಂದರೆ ಅವರಿಗಿಂತ ಹೆಚ್ಚು ತೆಂಗಿನ ಮರಗಳು ನಮ್ಮ ಹತ್ತಿರ ಇವೆ. ಹಾಗೆಯೇ ನೀರಾ ಇಳಿಸುವುದರಿಂದ ಏನೇನು ಆಗುತ್ತದೆ ಎನ್ನತಕ್ಕಂಥಾದ್ದನ್ನು ನಾನು ಹೇಳುತ್ತೇನೆ. ಮಾನ್ಯ ಸದಸ್ಯರು ನಮ್ಮ ಜೊತೆ ಇದ್ದಂಥ ಸಂದರ್ಭದಲ್ಲಿ ಇದರಿಂದ ಬಹಳ ಅನ್ಯಾಯವಾಗುತ್ತದೆಂದು ಹೇಳುತ್ತಾರೆ. ಆದರೆ ಇಲ್ಲಿ ಬಂದು ನೀರಾ ಇಳಿಸುವುದಕ್ಕೆ ಅನುಮತಿ ಕೊಡಿ ಎಂದು ಕೇಳುತ್ತಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಸರಿಯಾದ ಉತ್ತರವನ್ನು ನಾನು ಹೇಳುತ್ತೇನೆ. ನನಗೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಉಪಾಧ್ಯಕ್ಷರೆ, ಇದ್ದುದ್ದನ್ನು ಮತ್ತು ಇಲ್ಲದೇ ಇರತಕ್ಕಂಥಾದ್ದನ್ನು ಸೇರಿಸಿ ಹೇಳತಕ್ಕಂಥ ಅವರ ಭ್ರಮೆಗೆ ನಾವು ಔಷಧಿ ಕೊಡುವುದಕ್ಕೆ ಆಗುವುದಿಲ್ಲ. ಅವರಿಗೆ ಇರತಕ್ಕಂಥ ಔಷಧಿ ಯಾವುದೆಂದರೆ, ನೀರಾ ಇಳಿಸಿ ಇದನ್ನು ಮೂರು ದಿವಸಗಳವರೆಗೆ ಹಾಗೆಯೇ ಇಟ್ಟು, ಅನಂತರ ಆಗತಕ್ಕಂಥ ಹೆಂಡವನ್ನು ಕುಡಿಸಿದರೆ ಸ್ವಲ್ಪ ಸರಿಯಾಗಬಹುದು.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ರಾಜಕೀಯ ಲಾಭಕ್ಕೋಸ್ಕರ ಅನುಮತಿ ಕೊಡಿ ಎಂದು ಹೇಳುತ್ತಿದ್ದಾರಷ್ಟೆ. ಆದರೆ, ಖಂಡಿತ ಅವರಿಗೆ ನೀರಾ ಇಳಿಸುವುದಕ್ಕೆ ಒಪ್ಪಿಗೆ ಇಲ್ಲ. ನೀರಾ ಇಳಿಸತಕ್ಕಂಥಾದ್ದನ್ನು ಹೆಂಡ ಮಾಡುವುದಕ್ಕೋಸ್ಕರ ಅವರು ಅನುಮತಿ ಕೊಡಬೇಕೆಂದು ಹೇಳುತ್ತಿದ್ದಾರಷ್ಟೆ. ಆದ್ದರಿಂದ ಮಾನ್ಯ ಸದಸ್ಯರು ಮಾತನಾಡಿದ ನಂತರ ನನಗೆ ಅವಕಾಶ ಕೊಡಿ. ಇದಕ್ಕೆ ಸಂಬಂಧಪಟ್ಟಂತೆ ವಿವರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಈಗ ಹೆಂಡ ಕುಡಿದು ಬಂದಿದ್ದಾರೆ ನೀರಾ ಕುಡಿದು ಬಂದಿಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಎಲ್ಲರೂ ನೀರಾ ಇಳಿಸುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂಥ ಪರಿಸ್ಥಿತಿಯಲ್ಲಿಯೂ ಕೂಡ ಸರ್ಕಾರ ಹಠ ಮಾಡದೆ ನೀರಾ ಇಳಿಸುವುದಕ್ಕೆ ಅನುಮತಿ ಕೊಟ್ಟರೆ, ಇದರಿಂದ ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ ಮತ್ತು ನುಸಿ ರೋಗ ಕೆಲವು ಭಾಗ ಕಡಿಮೆಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಈ ರೋಗದಿಂದ ಬೇಸತ್ತ ರೈತರು ದಂಗೆ ಏಳತಕ್ಕಂಥ ಪರಿಸ್ಥಿತಿ ಬಂದಿದೆ.

(ಗೊಂದಲ)

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಸದಸ್ಯರು ಪ್ರಚೋದನೆಯ ಮಾತುಗಳನ್ನು ಹೇಳುತ್ತಿದ್ದಾರೆ. ಇದಕ್ಕೆ ಅವರು ಒಪ್ಪುವುದಿಲ್ಲ ಮತ್ತು ಬಿಜೆಪಿ ಸದಸ್ಯರೂ ಕೂಡ ಒಪ್ಪುವುದಿಲ್ಲ. ಆದರೆ, ಇವರು ಸುಮ್ಮನೆ ಏನೇನೋ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು: ಅನಂತರ ನಿಮಗೂ ಕೂಡ ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಬಹುದು.

ಶ್ರೀ ಎಂ.ಚಂದ್ರಪ್ಪ: ಮಾನ್ಯ ಉಪಾಧ್ಯಕ್ಷರೇ, ಅವರಿಗೆ ಹೆಂಡದ ದೊರೆಗಳು ಹೇಳಿ ಕಳುಹಿಸಿರಬಹುದು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಒಬ್ಬ ಮನುಷ್ಯ ಒತ್ತಡಕ್ಕೆ ತಡೆಯಲಾರದಂಥ ಸಂದರ್ಭದಲ್ಲಿ ದಂಗೆ ಏಳತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಇವತ್ತಿನ ದಿವಸ ತೆಂಗು ಬೆಳೆಗಾರರೂ ಕೂಡ ಈ ಪರಿಸ್ಥಿತಿ ತಲುಪಿದ್ದಾರೆ. ತೆಂಗಿನ ಮರಕ್ಕೆ ಒಂದು ಕಡೆ ನುಸಿರೋಗ, ಹಾಗೆಯೇ ಕಪ್ಪು ತಲೆ ಹುಳವನ್ನು ಹತೋಟಿ ಮಾಡಲಿಕ್ಕೆ ಆಗದೇ ಇರತಕ್ಕಂಥ ವಾತಾವರಣ ಉಂಟಾಗಿದೆ. ಸುಮಾರು ೧೦ ವರ್ಷಗಳಿಂದ ತೆಂಗಿನ ಮರಕ್ಕೆ ಬಿದ್ದಿರತಕ್ಕಂಥ ಕೆಲವು ರೋಗವನ್ನು ನಿವಾರಣೆ ಮಾಡುವುದಕ್ಕೆ ಆಗಿಲ್ಲ. ಮಾನ್ಯ ತೋಟಗಾರಿಕೆ ಸಚಿವರಿಗೆ ಕೆಲವು ತೋಟಗಳನ್ನು ತೋರಿಸಿದ್ದೇವೆ. ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಇದನ್ನು ನಿಯಂತ್ರಣ ಮಾಡುವುದಕ್ಕೆ ಆಗುತ್ತಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ನೀರಾ ಇಳಿಸುವುದಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಆರು ರೂಪಾಯಿನ ತೆಂಗಿನಕಾಯಿ ಎರಡೂವರೆ ರೂಪಾಯಿಗೆ ಕುಸಿದಿದೆ. ಇಂಥ ಹೀನ ಪರಸ್ಥಿತಿಯಲ್ಲಿರತಕ್ಕಂಥ ರೈತರಿಗೆ ಇವತ್ತಿನ ದಿವಸ ಆತ್ಮಹತ್ಯೆ ಮಾಡಿಕೊಳ್ಳಬೇಕು ಅಥವಾ ದಂಗೆ ಏಳತಕ್ಕಂಥ ಪರಿಸ್ಥಿತಿ ಬಂದಿದೆ. ಆತ್ಮಹತ್ಯೆ ಎಲ್ಲರೂ ಮಾಡಿಕೊಳ್ಳುವುದಿಲ್ಲ, ಆದರೆ ದಂಗೆ ಏಳತಕ್ಕಂಥ ವಾತಾವರಣ ನಿರ್ಮಾಣವಾಗುತ್ತದೆ. ಅದಕ್ಕೋಸ್ಕರ ಸರ್ಕಾರ ಇವೆಲ್ಲವನ್ನೂ ಕೂಡ ಪರಿಗಣನೆ ಮಾಡಿ ನೀರಾ ಇಳಿಸುವುದಕ್ಕೆ ರೈತರಿಗೆ ಅನುಮತಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಈ ಒಂದು ಗಂಭೀರವಾದಂಥ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆ ಪ್ರಾರಂಭವಾಗಿದೆ. ಈ ನುಸಿ ರೋಗ ನೀರಾ ಇಳಿಸುವಂಥಾದ್ದಕ್ಕೆ ಒಂದಕ್ಕೊಂದು ಸಂಬಂಧ ಇರತಕ್ಕಂಥ ವಿಚಾರವಾಗಿದೆ. ನುಸಿ ರೋಗದ ಬಗ್ಗೆ ಮತ್ತು ರೈತರ ಸಮಸ್ಯೆ ಹಾಗೂ ಅವರಿಗೆ ಇರತಕ್ಕಂಥ ಕಷ್ಟದ ಬಗ್ಗೆ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ

ಮಲ್ಲಿಕಾರ್ಜುನ್‌ರವರು ಏನು ಈ ಸದನಕ್ಕೆ ತಿಳಿಸಿದ್ದಾರೆ, ಅದನ್ನು ನಾನು ಅನುಮೋದನೆ ಮಾಡುತ್ತಾ ಈ ವಿಷಯಕ್ಕೆ ತಾವು ೫.೩೦ ಗಂಟೆಯವರೆಗೆ ಸಮಯವನ್ನು ನಿಗದಿ ಮಾಡಿರುವುದನ್ನು ನಾನು ಪರಿಜ್ಞಾನದಲ್ಲಿ ಇಟ್ಟುಕೊಂಡು ಆದಷ್ಟು ಬೇಗ ನನ್ನ ಎರಡು ಅಭಿಪ್ರಾಯಗಳನ್ನು ಈ ಸದನದ ಮುಂದೆ ಮಂಡಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಿಜವಾಗಿಯೂ ಕೂಡ ಬಹಳ ನೋವು ಆಗತಕ್ಕಂಥ ವಿಚಾರವೆಂದರೆ, ನಮ್ಮ ರಾಜ್ಯದಲ್ಲಿರತಕ್ಕಂಥ ಸುಮಾರು ೧೬ ಜಿಲ್ಲೆಗಳಲ್ಲಿ ತೆಂಗು ಬೆಳೆಯತಕ್ಕಂಥ ರೈತರು ಹಿಂದೆ ಎಂದೂ ಕಾಣದಂಥ ಸಂಕಷ್ಟಕ್ಕೆ ಈಡಾಗಿದ್ದಾರೆ. ಇವತ್ತಿನ ದಿವಸ ಬ್ರಾಂದಿ ಮತ್ತು ವಿಸ್ಕಿ ಹಾಗೂ ಸಾರಾಯಿಯ ಪರಿಣಾಮ ಏನಾಗಿದೆ, ಅದರ ಜೊತೆಗೆ ನೀರಾ ಇಳಿಸಿ ಇದರ ಜೊತೆಗೆ ಸೇರಿಸಬೇಕೆಂಬುದು ರೈತರ ಮತ್ತು ನಮ್ಮ ಮನೋಭಾವನೆಯಲ್ಲ. ಆದರೆ ಇವತ್ತು ಪರಿಸ್ಥಿತಿ ಆ ರೀತಿಯಾಗಿ ಕ್ರಿಯೇಟ್ ಆಗಿರುವುದರಿಂದ ನುಸಿ ರೋಗವನ್ನು ಹೋಗಲಾಡಿಸುವುದಕ್ಕೋಸ್ಕರ ನೀರಾ ಇಳಿಸತಕ್ಕಂಥಾದ್ದು ಬಹು ಮುಖ್ಯವಾಗಿರುವುದರಿಂದ ನೀರಾ ಇಳಿಸುವುದಕ್ಕೆ ಸರ್ಕಾರ ಅನುಮತಿ ಕೊಡಬೇಕೆಂದು ನಾವೂ ಒತ್ತಾಯ ಮಾಡುತ್ತಿದ್ದೇವೆ. ಏಕೆಂದರೆ, ಎಲ್ಲಾ ಕಡೆ ಕೂಡ ರೈತರು ಪ್ರತಿಭಟನೆ ಮಾಡುತ್ತಿರುವ ವಿಷಯ ಹಲವಾರು ಪತ್ರಿಕೆಗಳಲ್ಲಿ ಬಂದಿದೆ. ಹಾಗೆಯೇ ಜಿಲ್ಲಾಧಿಕಾರಿಗಳು ಸರ್ಕಾರದ ಗಮನಕ್ಕೂ ಕೂಡ ತಂದಿದ್ದಾರೆ. ಇವತ್ತಿನ ದಿವಸ ಕೆಲವು ರೈತರು ನೀರಾ ಇಳಿಸುವ ಕಡೆ ಅಬ್ಕಾರಿ ಮತ್ತು ಪೊಲೀಸರು ಅಬ್ಕಾರಿ ಗುತ್ತಿಗೆದಾರರ ಜೊತೆಯಲ್ಲಿ ರೈತರ ತೋಟಗಳಿಗೆ ಹೋಗಿ ರೈತರ ಮೇಲೆ ದಬ್ಬಾಳಿಕೆ ಮಾಡಿ ಅವರಿಗೆ ಹಿಂಸೆ ನೀಡುತ್ತಿದ್ದಾರೆ. ಹಾಗೆಯೇ ಮಡಿಕೆಗಳನ್ನು ಒಡೆಯುವುದು ಮತ್ತು ಹೊಂಬಾಳೆಯನ್ನು ಕಟ್ ಮಾಡುವುದರ ಮೂಲಕ ಅಲ್ಲಿನ ಪ್ರಾಪರ್ಟಿಯನ್ನೂ ಕೂಡ ನಷ್ಟ ಮಾಡಿದ್ದಾರೆ. ಇದು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬಹು ಭಾಗದ ರೈತರ ಬೆಂಬಲದಿಂದ ಮತ್ತು ಆಶೀರ್ವಾದದಿಂದ ಈ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಇದನ್ನು ಯಾರೂ ಮರೆಯಬಾರದು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರತಕ್ಕಂಥ ರೈತರು ಕಂಗಾಲಾಗಿ ಸಾಯುತ್ತಿರುವಂಥ ಪರಿಸ್ಥಿತಿಯಲ್ಲಿ ರೈತರ ಸರ್ಕಾರ ಎಂದು ಅನ್ನಿಸಿಕೊಂಡಿದ್ದಂಥ ಕಾಂಗ್ರೆಸ್ ಸರ್ಕಾರ ಹಾಗೂ ರಾಜ್ಯದ ಮುಖ್ಯಮಂತ್ರಿಯಾಗಿರತಕ್ಕಂಥ ಸನ್ಮಾನ್ಯ ಎಸ್.ಎಂ.ಕೃಷ್ಣರವರು ರೈತರ ಕಷ್ಟಕ್ಕೆ ಭಾಗಿ ಆಗದೇ ಇರತಕ್ಕಂಥಾದ್ದು ಮತ್ತು ಅವರ ಸಮಸ್ಯೆಗೆ ಸ್ಪಂದಿಸದೇ ಇರತಕ್ಕಂತಾದ್ದು ನಿಜವಾಗಿಯೂ ಕೂಡ ನೋವು ಉಂಟು ಮಾಡತಕ್ಕಂಥ ಪರಿಸ್ಥಿತಿಯಾಗಿದೆ. ಸನ್ಮಾನ್ಯ ಮಲ್ಲಿಕಾರ್ಜುನರವರು ಹೇಳಿರತಕ್ಕಂಥ ಮಾತನ್ನು ನಾನು ಮತ್ತೊಮ್ಮೆ ಹೇಳಬೇಕಾಗುತ್ತದೆ.

೪.೩೦ ಪಿಎಂ

ಇವತ್ತು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ನಿಯಮ ೬೯ರ ಪ್ರಕಾರ ನೀರಾ ಇಳಿಸುವ ಬಗ್ಗೆ ನುಸಿರೋಗದ ಬಗ್ಗೆ ಚರ್ಚೆ ಮಾಡಲಿಕ್ಕೆ ನಮಗೆ ಅವಕಾಶ ಕೊಡಬೇಕೆಂದು ಹೇಳಿ, ನಾವೆಲ್ಲರೂ ಕೂಡ ಸಹಿ ಮಾಡಿ ತಮಗೆ ಮನವಿ ಸಲ್ಲಿಸಿದ್ದೇವೆ. ಅತ್ಯುತ್ತಮವಾದ ಈವೊಂದು ಸದನದಲ್ಲಿ, ಉನ್ನತಮಟ್ಟದ ಈ ಸದನದಲ್ಲಿ ರೈತರ ಭೀಕರವಾಗಿರತಕ್ಕ ಸಮಸ್ಯೆಯ ಬಗ್ಗೆ ಚರ್ಚೆ ನಡೆಯಬೇಕಾಗಿರತಕ್ಕ ಕಾಲದಲ್ಲಿ ನಿಜವಾಗಲೂ ಬಹಳ ಮನನೊಂದು ನಾನು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣಾರವರಿಂದ ನಾನು ಮಾತ್ರ ಇದನ್ನು ಎಕ್ಸ್‌ಪೆಕ್ಟ್ ಮಾಡಿರಲಿಲ್ಲ. ಮೂರು ದಿವಸಗಳಿಂದಲೂ ಮೊದಲನೆಯ ಸಬ್ಜೆಕ್ಟ್ ನೀರಾ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುತ್ತೇವೆ, ನುಸಿರೋಗದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ತಾವು ಭರವಸೆಯನ್ನು ಕೊಟ್ಟಿದ್ದಿರಿ, ಆದರೆ ಬೆಳಿಗ್ಗೆ ಪತ್ರಿಕೆಯನ್ನು ನೋಡಿದಾಗ ನನಗೆ ಬಹಳ ನೋವಾಯಿತು. ನೀರಾ ಇಳಿಸಲಿಕ್ಕೆ ಅನುಮತಿ ಕೊಡಲಿಕ್ಕೆ ಸಾಧ್ಯವಿಲ್ಲವೆನ್ನತಕ್ಕ ಸಚಿವ ಸಂಪುಟದ ತೀರ್ಮಾನ ಮಾಡಿರತಕ್ಕದ್ದನ್ನು ನಾನಂತೂ ಖಂಡಿಸುತ್ತೇನೆ. ನಿಜವಾಗಲೂ ಕೂಡ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನೀವು ತೆಗೆದುಕೊಂಡಿರತಕ್ಕ ಈ ತೀರ್ಮಾನ ಸರಿಯಾದುದಲ್ಲ. ಸದನ ನಡೆಯತಕ್ಕ ಸಂದರ್ಭದಲ್ಲಿ ಸದನದಲ್ಲಿ ಆ ವಿಚಾರದ ಬಗ್ಗೆ ಚರ್ಚೆ ನಡೆಯುವಂತಹ ಕಾಲದಲ್ಲಿ, ಉನ್ನತ ಅಧಿಕಾರವನ್ನು ಹೊಂದಿರತಕ್ಕ ಸದನದಲ್ಲಿ ರೈತರ ಬಗ್ಗೆ ಕಾಳಜಿಯನ್ನು ಹೊಂದಿರತಕ್ಕ ಸರ್ಕಾರ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿತ್ತು. ರೈತ ಪ್ರತಿನಿಧಿಗಳಾದ ಸದಸ್ಯರು ಏನು ತಮ್ಮ ಅಹವಾಲುಗಳನ್ನು ರೈತರ ಪರವಾಗಿ ಹೇಳುತ್ತಾರೆ ಅದನ್ನು ಕೇಳುವಂತಹ ಸೌಜನ್ಯವನ್ನಾದರೂ ಸರ್ಕಾರ ತೋರಿಸಬೇಕಾಗಿತ್ತು. ಯಾವುದನ್ನೂ ಕೇಳದೆ ಕ್ಯಾಬಿನೆಟ್ ಡಿಸಿಷನ್ ಮಾಡಿರತಕ್ಕದ್ದನ್ನು ಈ ಸಂದರ್ಭದಲ್ಲಿ ನಾನು ಖಂಡಿಸುತ್ತೇನೆ. ನುಸಿ ಅಂದರೆ ನಮಗೆಲ್ಲರಿಗೂ ಗೊತ್ತಿದೆ. ಅದರ ಸಮಸ್ಯೆ ಬಹುಪಾಲು ಎಲ್ಲಾ ಸದಸ್ಯರಿಗೂ ಗೊತ್ತಿರತಕ್ಕ ವಿಚಾರ. ಈಗಾಗಲೇ ಕೃಷಿ ಮಂತ್ರಿಗಳಾದ ಮಾನ್ಯ ಜಯಚಂದ್ರರವರು ಏನೇನೋ ಔಷಧಿಗಳೆಲ್ಲವನ್ನೂ ಕೊಟ್ಟರು, ಎಲ್ಲವನ್ನೂ ರೈತರು ಸಿಂಪಡಿಸಿದ್ದಾರೆ. ಆದರೆ ರೋಗ ಮಾತ್ರ ನಿವಾರಣೆಯಾಗಲಿಲ್ಲ. ರೋಗ ಜಾಸ್ತಿಯಾಗುತ್ತಾ ಬಂತು. ಅದರಲ್ಲೂ ಕೂಡ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಬಹುಪಾಲು ಎಲ್ಲಾ ತೆಂಗಿನಮರಗಳಿಗೆ ನುಸಿರೋಗ ಬಂದಿರತಕ್ಕದ್ದನ್ನು ನಾವು ಕಾಣುತ್ತೇವೆ. ಇದು ಏಕೆ ಬರುತ್ತಿದೆ? ತೆಂಗಿನಕಾಯಿಯನ್ನು ಮಾರ್ಕೆಟ್‌ನಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡಲಿಕ್ಕೆ ಏನಾಗಿದೆ ಎಂಬುದರ ಬಗ್ಗೆ ಮತ್ತು ಡಬ್ಲ್ಯು.ಟಿ.ಓ. ಬಗ್ಗೆ ಮಾನ್ಯ ಮಲ್ಲಿಕಾರ್ಜುನ್‌ರವರು ಮಾತನಾಡಿದ್ದಾರೆ. ಅದು ಒಂದು ರೂಪಾಯಿಗೆ ಒಂದು ಕಾಯಿ ಮಾರಾಟವಾಗಲಿ, ನಮಗೆ ಬರತಕ್ಕದ್ದು ಕೂಡ ಬರುತ್ತಿಲ್ಲ. ತೆಂಗಿನಕಾಯಿ ಫಲ ತೆಗೆದುಕೊಳ್ಳಲಿಕ್ಕೆ ಇವತ್ತು ಆಗುತ್ತಿಲ್ಲ. ತೆಂಗಿನಕಾಯಿಯಿಂದ ಬೇಡ, ಎಳನೀರು ತೆಗೆದುಕೊಳ್ಳೋಣವೆಂದರೆ ಅದರಿಂದಲೂ ಆಗುತ್ತಿಲ್ಲ. ಕಾರಣ

ಏನೆಂದರೆ ತೆಂಗಿನ 'ಕುರುವೆ' ಅಂದರೆ ಏನು ಹೊಂಬಾಳೆ ಬರುತ್ತದೆ, ಅದು ಬಂದಂತಹ ಸ್ಟೇಜ್‌ನಲ್ಲಿ ಕುರುವೆಯಾಗಿರತಕ್ಕ ಸಂದರ್ಭದಲ್ಲಿ ನುಸಿರೋಗ ಅಟ್ಯಾಕ್ ಆಗತಕ್ಕದ್ದು ಇದೆ ಅದು ಯಾವ ರೀತಿ ಅಟ್ಯಾಕ್ ಆಗುತ್ತದೆಂದರೆ, ಕುರುವೆಯಲ್ಲಿ ಏನು ತೊಟ್ಟು ಕಾಣಿಸುತ್ತದೆಯಲ್ಲಾ ಮೂರು ತೊಟ್ಟು (ಕಣ್ಣು) ಅದರ ಸಂದಿಯೊಳಗಡೆ ಈ ನುಸಿಹುಳ ಪ್ರವೇಶ ಮಾಡುತ್ತದೆ. ತೊಟ್ಟಿನ ಸಂದಿಯೊಳಗಡೆ ನುಸಿರೋಗದ ಹುಳ ಪ್ರವೇಶ ಮಾಡಿದಾಗ ಅಲ್ಲಿ ಅದು ವಾಸ ಮಾಡಿ ಅಲ್ಲಿ ಮೊಟ್ಟೆ ಹಾಕಿ ಮರಿ ಮಾಡಿಕೊಂಡು ವಂಶಾಭಿವೃದ್ಧಿ ಮಾಡಿಕೊಳ್ಳುತ್ತದೆ. ಬಹುಶಃ ಅದು ಕುರುವೆಯ ಸಂದಿಯೊಳಗಡೆ ಸೇರಿಕೊಂಡಾಗ ನೀವು ಯಾವ ಔಷಧಿಯನ್ನು ಸಿಂಪಡಿಸಿದರೂ ಕೂಡ ಅದು ಹೋಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನುಸಿರೋಗಕ್ಕೆ ವೈಮಾನಿಕವಾಗಿ ಔಷಧಿಯನ್ನು ಸಿಂಪಡಿಸುತ್ತೇವೆ ಎನ್ನುವ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ನೀವು ವೈಮಾನಿಕವಾಗಿ ಔಷಧಿಯನ್ನು ಸಿಂಪಡಿಸಿದರೂ ಕೂಡ ಕಾಯಿಯ ಒಳಗಡೆ ಇರತಕ್ಕ ನುಸಿ ಹುಳಕ್ಕೆ ಯಾವರೀತಿ ಪರಿಣಾಮಕಾರಿಯಾಗಿ ಆ ಔಷಧಿ ಕೆಲಸ ಮಾಡುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ವೈಮಾನಿಕವಾಗಿ ಎಲ್ಲಾ ಔಷಧಿಯನ್ನು ಸಿಂಪಡಿಸಿದರೆ ಇನ್ನಿತರ ಬೆಳೆಗಳು ಇರುತ್ತವೆ, ಪ್ರಾಣಿ, ಪಕ್ಷಿ, ಇತರ ಬೆಳೆಗಳ ಮೇಲೆ ಆ ಔಷಧಿ ಬಿದ್ದು ದೊಡ್ಡ ಅನಾಹುತವಾಗತಕ್ಕ ಒಂದು ಸಂದರ್ಭ ಒದಗಿ ಬರುತ್ತದೆ. ಈ ನುಸಿರೋಗವನ್ನು ಪರಿಣಾಮಕಾರಿಯಾಗಿ ಹೋಗಲಾಡಿಸತಕ್ಕ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಸರ್ಕಾರ ಮತ್ತು ನಾವೆಲ್ಲರೂ ಕೂಡ ವಿಫಲರಾಗಿದ್ದೇವೆ. ಅಂತಹ ಒಂದು ಸೂಕ್ಷ್ಮವಾದ ಸಂದರ್ಭದಲ್ಲಿ ಇವತ್ತು ನುಸಿರೋಗ ನಿವಾರಣೆಯಾಗಬೇಕಾದರೆ ಬೇರೆ ಆಲ್ಟರ್‌ನೇಟಿವ್ ಇಲ್ಲವೇ ಇಲ್ಲ. ಎಳನೀರು ತೆಗೆದರೂ ಕೂಡ ಆ ರೋಗ ಹೋಗುವುದಿಲ್ಲ. ಹೊಂಬಾಳೆಯನ್ನು ಕತ್ತರಿಸಿ ಎರಡು ವರ್ಷಗಳ ಕಾಲ ರೈತರು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. ಯಾವುದೇ ಫಲ ಇಲ್ಲ. ನುಸಿರೋಗವನ್ನು ಹೋಗಲಾಡಿಸಬೇಕಾದರೂ ಎಲ್ಲರೂ ಕೂಡ ಹೊಂಬಾಳೆಯನ್ನು ಕಟ್ ಮಾಡಬೇಕಾಗುತ್ತದೆ. ಯಾರೋ ಒಬ್ಬರು ಕಟ್ ಮಾಡಿದರೆ ರೋಗ ಹೋಗುವುದಿಲ್ಲ. ಪ್ರತಿಯೊಬ್ಬರೂ ಹೊಂಬಾಳೆಯನ್ನು ಕಟ್ ಮಾಡಿದರೆ ಒಂದೆರಡು ವರ್ಷ ಹೀಗೆ ಮಾಡುತ್ತಾ ಹೋದರೆ ಯಾವುದೇ ವಿಧವಾದ ಉತ್ಪತ್ತಿಯಿಲ್ಲ, ಆರ್ಥಿಕವಾಗಿ ರೈತ ಹಿನ್ನಡೆಯಾಗುತ್ತಾನೆ. ತೆಂಗು ಬೆಳೆಗಾರ ಸಂಕಷ್ಟಕ್ಕೆ ಈಡಾಗುತ್ತಾನೆ. ಆದ್ದರಿಂದ ನಾವು ಮತ್ತು ರೈತರು ಕೇಳತಕ್ಕ ಬೇಡಿಕೆಯ ಬಗ್ಗೆ ಸರ್ಕಾರ ಸ್ವಲ್ಪ ಚಿಂತನೆ ಮಾಡಬೇಕಾಗುತ್ತದೆ. ತಮ್ಮದೇ ಆದಂತಹ ಧಾಟಿಯಲ್ಲಿ ಹಠವನ್ನು ಮಾಡತಕ್ಕದ್ದು ಇದು ಸರಿಯಲ್ಲ. ರೈತರ ಸಂಕಷ್ಟದಲ್ಲಿ ಅವರ ಪೊಸಿಷನ್‌ನಲ್ಲಿ ನಾವೇ ಇದ್ದಿದ್ದರೆ ಏನು ಮಾಡುತ್ತಿದ್ದೆವು ಎನ್ನುವ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕೆಂದು ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ. ಮಾನ್ಯ ಎಸ್.ಎಂ. ಕೃಷ್ಣರವರ ಬಗ್ಗೆ ನಮಗೆ ಗೌರವವಿದೆ. ನಿಮಗೆ ೧೫೦ ಜನರ ಬೆಂಬಲ ಇದೆ. ನೀವು ಇಲ್ಲಿ ಬಹಳ ಮೆಜಾರಿಟಿಯಲ್ಲಿ ಇದ್ದೀರಿ, ಜನ

ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ನಮ್ಮ ವಿರೋಧಪಕ್ಷದ ಸದಸ್ಯರನ್ನು ಕಡೆಗಣಿಸಿ ನಿನ್ನೆ ಕ್ಯಾಬಿನೆಟ್ ತೀರ್ಮಾನ ಮಾಡಿದ್ದೀರಲ್ಲಾ ಆ ತರಹ ಮಾಡಿಕೊಳ್ಳತಕ್ಕ ಶಕ್ತಿ ನಿಮಗೆ ಇದೆ. ೧೫೦ ಜನ ನಿಮ್ಮ ಕಡೆಗೆ ಇದ್ದಾರೆ. ಜನ ನಿಮಗೆ ಐದು ವರ್ಷ ಅಧಿಕಾರ ನಡೆಸಲು ಅವಕಾಶ ಕೊಟ್ಟಿದ್ದಾರೆ. ಅದು ಮುಖ್ಯವಲ್ಲ. ವಿರೋಧಪಕ್ಷದವರು ಏನು ಹೇಳುತ್ತಾರೆ ಅದರ ಬಗ್ಗೆ ಸ್ವಲ್ಪ ಗಂಭೀರವಾಗಿ ತಾವು ಚಿಂತನೆ ಮಾಡಿ ಅವರ ಸಲಹೆಯನ್ನು ಸ್ವೀಕಾರ ಮಾಡತಕ್ಕ ದೊಡ್ಡ ಮನಸ್ಸನ್ನು ಮಾಡತಕ್ಕದ್ದು ಅತ್ಯಾವಶ್ಯಕವಾಗಿದೆ. ರೈತರಿಗೆ ಅಷ್ಟು ಕಷ್ಟವಿರತಕ್ಕದ್ದನ್ನು ಇವತ್ತು ನಾವು ಕಾಣುತ್ತಿದ್ದೇವೆ. ನುಸಿರೋಗ ಹೋಗಲಾಡಿಸಲಿಕ್ಕೆ ತಾತ್ಕಾಲಿಕವಾಗಿ ನೀರಾ ಇಳಿಸಲಿಕ್ಕೆ ಅವಕಾಶ ಕೊಡಿ. ಯಾವುದೋ ಒಂದೆರಡು ಜಿಲ್ಲೆಗಳಿಗೆ ಹೆಂಡ ಇಳಿಸಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಎಕ್ಸ್‌ಪೇರಿಮೆಂಟಲ್ ಬೇಸಿಸ್ ಮೇಲೆ ಕೊಟ್ಟರೆ ರೋಗವನ್ನು ನಿಯಂತ್ರಣಕ್ಕೆ ತರಲಿಕ್ಕೆ ಸಾಧ್ಯವಾಗುತ್ತದೆ. ರೈತರು ಬಹಳ ಬೇಜಾರಿನಿಂದ ಇದ್ದಾರೆ. ನಾವೆಲ್ಲರೂ ಕೂಡ ಹಠ ಮಾಡಿ ಧರಣಿ ಕುಳಿತು ಇದನ್ನು ತೆಗೆದುಕೊಳ್ಳದೆ ಬಿಲ್‌ಗಳನ್ನು ಪಾಸ್ ಮಾಡಿಕೊಂಡು ಹೋಗಿದ್ದರೆ, ಇದನ್ನು ಚರ್ಚೆ ಮಾಡದೇ ಹೋಗಿದ್ದರೆ, ರೈತರನ್ನು ನಮ್ಮ ಕ್ಷೇತ್ರಗಳಲ್ಲಿ ಎದುರಿಸತಕ್ಕ ಪರಿಸ್ಥಿತಿ ಇರಲಿಲ್ಲ. ಆದ್ದರಿಂದ ಈ ಬಗ್ಗೆ ಇವತ್ತು ನಾವು ಗಂಭೀರವಾಗಿ ಗಮನ ಸೆಳೆಯುತ್ತಿದ್ದೇವೆ. ತಾತ್ಕಾಲಿಕವಾಗಿಯಾದರೂ ನೀವು ನೀರಾ ಇಳಿಸಲಿಕ್ಕೆ ಅನುಮತಿಯನ್ನು ಕೊಡಬೇಕು. ಒಂದೆರಡು ವರ್ಷಕ್ಕೆ ಎಂದು ಕೊಡಿ. ನಮಗೆ ರೈತರ ಬಗ್ಗೆ ಕಳಕಳಿಯಿದೆ. ನಾವೂ ಮನುಷ್ಯರು ಇದ್ದೇವೆ, ನಿಮಗೂ ಭಯ ಅನ್ನತಕ್ಕದ್ದು ಇದೆ. ತಾತ್ಕಾಲಿಕವಾಗಿ ನೀರಾ ಇಳಿಸಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇವತ್ತು ಸಮಾಜದಲ್ಲಿ ಏನು ನಡೆಯುತ್ತಿದೆ ಎನ್ನುವುದು ನನಗೂ ಗೊತ್ತಿದೆ. **Main resources to the Government is exiuse department** ಎನ್ನುವುದು ನಮಗೂ ಗೊತ್ತಿದೆ. ಇವತ್ತು ಸಾರಾಯಿಯಿಂದ ನಿಮಗೆ ಇನ್‌ಕಂ ಬರುತ್ತದೆ. ಬೀರು, ಬ್ರಾಂದಿ, ವಿಸ್ಕಿ ಇದರಿಂದ ಹೆಚ್ಚು ಆದಾಯ ಸರ್ಕಾರಕ್ಕೆ ಬರುತ್ತಿದೆ ಎನ್ನುವುದು ನಮಗೆ ಗೊತ್ತಿದೆ. ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಮಾಡುತ್ತಿದ್ದೇನೆ, ಇವತ್ತು ನೀವೇನು ಎಕ್ಸೈಜ್ ಡಿಪಾರ್ಟ್‌ಮೆಂಟ್‌ನಿಂದ ಎಕ್ಸೈಜ್ ರೆವಿನ್ಯೂ ಕಲೆಕ್ಟ್ ಮಾಡುತ್ತಿದ್ದೀರಿ ಅದನ್ನು ರೈತರಿಂದ ಮಾಡಿ. ನೀವೇನು ಹಣವನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಳ್ಳುತ್ತಿದ್ದೀರಿ ಒಂದು ತಿಂಗಳಿನಲ್ಲಿ ಆ ಹಣವನ್ನು ನಮ್ಮ ತೆಂಗು ಬೆಳೆಗಾರರು ಸರ್ಕಾರಕ್ಕೆ ಕೊಡುವುದಕ್ಕೆ ತಯಾರಾಗಿದ್ದಾರೆ. ಅದನ್ನು ಕಲೆಕ್ಟ್ ಮಾಡಿ, ಅವರ ಕಷ್ಟಕ್ಕೆ ನೀವು ಹೋಗಿ. ಅವರಿಂದಾಗಿ ನೀವು ಇವತ್ತು ಇಲ್ಲಿ ಕುಳಿತಿದ್ದೀರಿ. ಯಾರೋ ಒಬ್ಬರನ್ನು ಓಲೈಸತಕ್ಕದ್ದು ಬೇಡವೆಂಬುದು ನನ್ನ ಮನವಿ. ತೆಂಗು ಬೆಳೆಗಾರರಿಗೆ ಅಷ್ಟು ಕಷ್ಟವಿದೆ. ನಾವು ದಿನಾ ಬೆಳಿಗ್ಗೆ ನೀರಾ ಇಳಿಸುವ ಬಗ್ಗೆ ಹುತ್ತು ನುಸಿರೋಗ ನಿವಾರಣೆಯ ಬಗ್ಗೆ ಚರ್ಚೆಗೆ ಅವಕಾಶ ಕೊಡಿಯೆಂದು ಹೇಳುತ್ತಿದ್ದುದು ಅದಕ್ಕೋಸ್ಕರ ನೀವು ನಿಮಗೆ ಬರುವ ಆದಾಯವನ್ನು ಲಾಸ್ ಮಾಡಿಕೊಳ್ಳುವುದು ಬೇಡ. ಇವತ್ತು

ಸಾರಾಯಿ ಹೇಗೆ ತಯಾರು ಮಾಡುತ್ತಿದ್ದಾರೆ? ಸಾರಾಯಿ ತಯಾರು ಮಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಎಂಎಸ್‌ಐಎಲ್‌ನವರು, ಅವರು ಇವರು ತೆಗೆದುಕೊಂಡು ಸಪ್ಲೈ ಮಾಡಬೇಕು, ಹಾಗೆ ಮಾಡುತ್ತಿದ್ದಾರೆಯೇ ಸ್ವಾಮಿ? ಯಾವುದೋ ಒಂದು ಬಾವಿಯಲ್ಲಿ ದೊಡ್ಡದಾಗಿ ಕೊಪ್ಪರಿಗೆಯನ್ನು ಇಟ್ಟುಕೊಂಡಿದ್ದಾರೆ, ಮಿಷಿನ್ ಸ್ಟಾರ್ಟ್ ಮಾಡಿ ಅದಕ್ಕೆ ನೀರು ತುಂಬುತ್ತಾರೆ. ಅದಕ್ಕೆ ಯಾವ ಯಾವುದೋ ಕೆಮಿಕಲ್ಸ್ ಬೆರಸಿ ಪ್ಯಾಕೆಟ್ ಮಾಡಿ ಮಾರಾಟ ಮಾಡುವುದನ್ನು ನಾವು ನೋಡುತ್ತಿಲ್ಲವೇ ಸ್ವಾಮಿ? ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರತಕ್ಕ ವಿಚಾರ ಹಾಗೂ ಇದು ಸಂಬಂಧಪಟ್ಟ ಮಂತ್ರಿಗಳಿಗೆ ಸಹ ಗೊತ್ತಿರತಕ್ಕ ವಿಚಾರ. ಇವತ್ತು ಎಷ್ಟು ಕಲಬೆರಕೆ ಮಾಡುತ್ತಿದ್ದಾರೆ ನೋಡಿದ್ದೀರಾ?

ಶ್ರೀ ಎಂ.ಮಹದೇವ್: ಮಾನ್ಯ ಗುರುಸ್ವಾಮಿಯವರೆ, ಮಿಕ್ಸ್ ಮಾಡುವುದು ನನಗೆ ಗೊತ್ತಿಲ್ಲ, ನಿಮಗೇನಾದರೂ ಗೊತ್ತಿದ್ದರೆ ಹೇಳಿ.

ಶ್ರೀ ಸಿ.ಗುರುಸ್ವಾಮಿ: ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಸೆಕೆಂಡ್ಸ್ ಎಷ್ಟು ಮಾರಾಟ ಮಾಡುತ್ತಿದ್ದಾರೆನ್ನುವುದನ್ನು ಗಮನಿಸುತ್ತಿದ್ದೇವೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ನೀವು ಬಹಳ ಆಸಕ್ತಿ ವಹಿಸುತ್ತಿರುವುದನ್ನು ನೋಡಿದರೆ ಇದರ ಬಗ್ಗೆ ನಿಮಗೆ ಇಂಟರೆಸ್ಟ್ ಇರುವ ಹಾಗೆ ಕಾಣುತ್ತದೆ.

ಶ್ರೀ ಎಂ.ಮಹದೇವ್: ನನ್ನದೂ ತೋಟವಿದೆ, ನನ್ನ ತೋಟಕ್ಕೆ ಇನ್ನೂ ನುಸಿರೋಗ ಬಂದಿಲ್ಲ.

ಶ್ರೀ ಸಿ.ಗುರುಸ್ವಾಮಿ: ನೀವು ನಮ್ಮ ಜಿಲ್ಲಾಮಂತ್ರಿಗಳು. ನಮ್ಮ ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ನುಸಿರೋಗ ಬಂದು ರೈತರು ಸಾಯುತ್ತಿದ್ದಾರೆ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಂದ ಇಂತಹ ಉತ್ತರವನ್ನು ನಾನು ನಿರೀಕ್ಷಿಸಿರಲಿಲ್ಲ. ದಯವಿಟ್ಟು ಕ್ಷಮಿಸಬೇಕು. ಅಲ್ಲಿ ತೆಂಗಿನ ಬೆಳೆಗಾರರು ಸಾಯುತ್ತಿದ್ದಾರೆ.

ಶ್ರೀ ಎಂ.ಮಹದೇವ್: ನನಗೆ ರೈತರ ಬಗ್ಗೆ ಸಾಕಷ್ಟು ಕಾಳಜಿ ಇದೆ. ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ಮಿಕ್ಸ್ ಮಾಡುವ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೆಂದು ಹೇಳಿದರು. ಅದಕ್ಕೆ ನನಗೆ ಆ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೆಂದು ಹೇಳಿದರು. ಅದಕ್ಕೆ ನನಗೆ ಆ ವಿಚಾರದಲ್ಲಿ ಅನುಭವವಿಲ್ಲ ಎಂದು ಹೇಳಿದೆ.

ಶ್ರೀ ಸಿ.ಗುರುಸ್ವಾಮಿ: ಇವತ್ತು ಕಲಬೆರಕೆ ಸಾರಾಯಿ ತಯಾರು ಮಾಡಿ ಅದಕ್ಕೆ ಕೆಮಿಕಲ್ಸ್ ಸೇರಿಸಿ ಸಮಾಜದಲ್ಲಿ ಜನರ ಆರೋಗ್ಯವನ್ನು ಹಾಳು ಮಾಡುತ್ತಿರುವುದನ್ನು

ನೋಡುತ್ತಿದ್ದೇವೆ. ನಾವು ಪ್ಯೂರ್ ಆಲ್ಕೋಹಾಲ್ ಕೊಡುತ್ತಿದ್ದೀವಾ ಸ್ವಾಮಿ? ಪ್ಯೂರ್ ವಿಸ್ಕಿ, ಬ್ರಾಂಡಿ ಕೊಡುತ್ತಿದ್ದೀವಾ? ಅದು ಯಾವುದೂ ಬೇಡ, ಎಲ್ಲವನ್ನೂ ಪ್ರಾಹಿಬಿಟೆಡ್ ಎಂದು ತೆಗೆದು ಬಿಡಿ. ನೀರಾ ಯಾವ ರೀತಿಯಲ್ಲಿ ಅದು ಆಲ್ಕೋಹಾಲಿಕ್? ಅದನ್ನು ಬೆಳಿಗ್ಗೆ ಆರು ಗಂಟೆಗೆ ಮುಂಚೆ ಉಪಯೋಗ ಮಾಡಿದರೆ ಆರೋಗ್ಯಕ್ಕೆ ಒಳ್ಳೆಯದು ಎನ್ನುವುದನ್ನು ವರದಿಯಲ್ಲಿ ಹೇಳಿದ್ದಾರೆ. ನಾನು ಟೆಕ್ನಿಕಲ್‌ಮ್ಯಾನ್ ಅಲ್ಲ. ಸುಮ್ಮನೆ ಚರ್ಚೆ ಮಾಡುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ನೀವು ಕಮಿಟಿಯನ್ನು ಮಾಡಿಸಿ ಅಥವಾ ಒಂದು ತಜ್ಞರ ಸಮಿತಿಯನ್ನು ಮಾಡಿಸಿ ಅವರು ಅದರ ಬಗ್ಗೆ ಅಧ್ಯಯನ ಮಾಡಿ ಅವರು ಕೊಟ್ಟ ವರದಿಯನ್ನು ತರಿಸಿ. ನೀರಾ ಆರೋಗ್ಯಕ್ಕೆ ಹಾನಿಕರವೇ ಅಥವಾ ಒಳ್ಳೆಯದೇ? ಇದು ಏಳು ಗಂಟೆ ಮೇಲೆ ಕುಡಿದರೆ ಹೆಂಡ ಆಗುತ್ತದೆಯೇ? ಕಲಬೆರಕೆ ಸಾರಾಯಿಗಿಂತ ಈ ಹೆಂಡ ಕೆಟ್ಟದ್ದೇ ಎನ್ನತಕ್ಕದನ್ನು ಸರ್ಕಾರದವರು ಇವತ್ತು ಪರಿಶೋಧನೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಇದರ ಬಗ್ಗೆ ಸ್ವಲ್ಪ ಗಂಭೀರವಾಗಿ ಚಿಂತನೆ ಮಾಡಿ ಎಂದು ಹೇಳುತ್ತಿದ್ದೇನೆ. ಬರೀ ಆದಾಯ ಒಂದನ್ನೇ ನೀವು ಗಮನದಲ್ಲಿಟ್ಟುಕೊಳ್ಳಬೇಡಿ. ರೈತರ ಕಷ್ಟವನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಹೇಳತಕ್ಕದ್ದು, ಇವತ್ತು ಅನೇಕ ತಜ್ಞರ ವರದಿಗಳು ನನ್ನ ಹತ್ತಿರ ಇವೆ. ನೀರಾದಿಂದ ಬೆಲ್ಲ ಮಾಡತಕ್ಕದ್ದು ವಿನಿಗರ್ ದ್ರವ ತಯಾರು ಮಾಡತಕ್ಕಂಥಾದ್ದು, ಇದೆಲ್ಲಾ ಮಾಡತಕ್ಕಂಥ ಕಾರ್ಯಕ್ರಮಗಳು ಇವೆ. ನೀರಾಬೇಡ, ಹೋಗಲಿ. ನುಸಿರೋಗ ಹೋಗುವುದಕ್ಕಾದರೂ ಏನು ಮಾಡುತ್ತಿದ್ದೀರಿ? ಇನ್ನೆಷ್ಟು ದಿವಸಗಳಲ್ಲಿ ಅದನ್ನು ಹೋಗಿಸುತ್ತೀರಿ? ನೀರಾ ಬೇಡ, ಅದರಿಂದ ವಿನಿಗರೋ ಅಥವಾ ಬೆಲ್ಲವೋ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥಾದ್ದು, ಈ ಬಗ್ಗೆ ಚಿಂತನೆ ಮಾಡಬೇಕೆನ್ನುವಂಥಾದ್ದು ನನ್ನ ಒತ್ತಾಯ. ಇದರಲ್ಲಿ ಯಾವುದೇ ವಿಧವಾದ ಪ್ರತಿಷ್ಠೆ ಇಲ್ಲ. ಆದ್ದರಿಂದ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕೂಡ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದರು. ೩-೬-೨೦೦೧ರಲ್ಲಿ ಇದು ಪತ್ರಿಕೆಯಲ್ಲಿ ಬಂದಿದ್ದು ಅವರು ಹೇಳಿದ್ದಾರೆ -

''.....ನೀರಾ ಇಳಿಸುವುದು ವೈಜ್ಞಾನಿಕವಾಗಿ ಸರಿ ಎಂಬ ಅಭಿಪ್ರಾಯಗಳು ವಿಜ್ಞಾನಿಗಳಿಂದ ವ್ಯಕ್ತವಾಗಿದ್ದಲ್ಲಿ ಸರ್ಕಾರ ನೀರಾಗೆ ಅನುಮತಿ ನೀಡುವ ಬಗ್ಗೆ ಪರಿಶೀಲಿಸಲಾಗುವುದು........''

ಎಂದು ಮುಖ್ಯಮಂತ್ರಿಗಳು ಮಂಡ್ಯಾದಲ್ಲಿ ೩-೬-೨೦೦೧ರಂದು ತಿಳಿಸಿರುತ್ತಾರೆ. ಇವತ್ತು ಯಾರ ತಜ್ಞರ ಅಭಿಪ್ರಾಯವನ್ನು ತಾವು ತೆಗೆದುಕೊಂಡಿದ್ದೀರಿ? ಯಾರನ್ನಾದರೂ ಕನ್ಸಲ್ಟ್ ಮಾಡಿದ್ದೀರಾ? ಈಗಲೂ ಕಾಲ ಮಿಂಚಿಲ್ಲ. ಕ್ಯಾಬಿನೆಟ್

ನಿರ್ಣಯವನ್ನು ರಿವೈಸ್ ಮಾಡಬಹುದು, ಮಾಡಿಫೈ ಮಾಡುವುದು, ಏನು ಬೇಕಾದರೂ ಮಾಡುವಂಥಾದ್ದು ಮಾಡಬಹುದು. ಆದ್ದರಿಂದ ಇವತ್ತು ಈ ಗಂಭೀರವಾಗಿರತಕ್ಕಂಥ ಸಮಸ್ಯೆ ಬಗ್ಗೆ ಸ್ವಲ್ಪ ತಾಳ್ಮೆಯಿಂದ, ಸಿಟ್ಟು ಮಾಡಿಕೊಳ್ಳದೆ ಚಿಂತನೆ ಮಾಡಿ. ನಿನ್ನೆ ಮೊನ್ನೆಯಿಂದ ರೈತರು ಏನು ಎಲ್ಲಾ ಕಡೆ ಪ್ರತಿಭಟನೆ ಮತ್ತು ಹೋರಾಟ ಮಾಡುತ್ತಿದ್ದಾರೆ. ತಾವು ತಾವೇ ನೀರಾ ಕಟ್ಟತಕ್ಕಂಥ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದಾರೆ. ಇದನ್ನು ತಾವು ಗಮನಿಸಬೇಕಾಗುತ್ತದೆ. ಇವತ್ತು ನಾನೂ ಕೂಡ ಒಬ್ಬ ತೆಂಗು ಬೆಳೆಗಾರನಾಗಿ ಇದ್ದುಕೊಂಡು ಒಂದು ವಿಷಯವನ್ನು ಹೇಳುತ್ತಿದ್ದೇನೆ. ಸುಮಾರು ಸಾವಿರಾರು ಜನ ರೈತರು ಸೇರಿಕೊಂಡು ಈಗಾಗಲೇ ನಾಲ್ಕು ತಿಂಗಳ ಹಿಂದೆ ನಮ್ಮ ಚಾಮರಾಜನಗರದ ಜಿಲ್ಲಾಧಿಕಾರಿಗಳಿಗೆ ನಾವೆಲ್ಲಾ ಒಂದು ಮನವಿಯನ್ನು ಕೊಟ್ಟಿದ್ದೆವು. ಅದರಲ್ಲಿ ಏನು ಕೇಳಲಾಗಿತ್ತು ಎಂದರೆ ಈ ರೀತಿಯಾಗಿ ನುಸಿರೋಗ ರಾಜ್ಯದಲ್ಲಿರುವುದರಿಂದ, ನಮ್ಮ ಜಿಲ್ಲೆಯಲ್ಲಿ ಕೂಡ ನುಸಿರೋಗ ಇರುವುದರಿಂದ ನೀರಾ ಇಳಿಸಲಿಕ್ಕೆ ರೈತರಿಗೆ ನೀವು ಅವಕಾಶವನ್ನು ಮಾಡಿಕೊಡಬೇಕು ಎಂದು ಅರ್ಜಿಯನ್ನು ದಾಖಲು ಮಾಡಿದ್ದೇವೆ. ಇದುವರೆಗೂ ಜಿಲ್ಲಾಧಿಕಾರಿಗಳಿಂದ ಒಂದು ಉತ್ತರ ಬಂದಿಲ್ಲ. ನೀರಾ ಇಳಿಸತಕ್ಕದ್ದು ಅಪರಾಧ ಅಥವಾ ನೀರಾ ಇಳಿಸುವುದಕ್ಕೆ ಇಂತಹ ಕಾಯಿದೆ ಪ್ರಕಾರ ಸರ್ಕಾರದ ಆದೇಶದ ಪ್ರಕಾರ ನಾವು ಅನುಮತಿ ಕೊಡುವುದಕ್ಕೆ ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಅವರು ಇನ್ನೂ ಹೇಳಿಲ್ಲ. ಅದನ್ನು ಬಿಟ್ಟು ಇನ್ನೊಂದು ಏನು ಮಾಡುತ್ತಿದ್ದಾರೆ ಎಂದರೆ, ಎಕ್ಸೈಜ್‌ನವರನ್ನು, ಪೊಲೀಸರನ್ನು ಕಟ್ಟಿಕೊಂಡು ಇವರೆಲ್ಲರೂ ಸೇರಿಕೊಂಡು ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಅಕ್ರಮವಾಗಿ ರೈತರ ತೋಟಗಳಿಗೆ ನುಗ್ಗತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದು ನಿಮಗೆ ಗೌರವ ತರತಕ್ಕದ್ದಾ? ಇದು ನೀವು ರೈತರ ಬಗ್ಗೆ ಸ್ಪಂದಿಸತಕ್ಕಂಥ ರೀತಿ ಏನು? ಇದರಿಂದ ನೀವು ರೈತರ ಸರ್ಕಾರ ಎಂದು ಹೇಳುವುದಕ್ಕೆ ಆಗುತ್ತದೆಯೇ? ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುತ್ತ ತಾವು ಬೆಲ್ ಹೊಡೆದ ಮೇಲೆ ಮಾತನಾಡತಕ್ಕದ್ದು ಸರಿಯಲ್ಲ. ನಾನು ಸರ್ಕಾರಕ್ಕೆ ಕೈಮುಗಿದು ಒತ್ತಾಯ ಮಾಡುತ್ತೇನೆ. ತಾತ್ಕಾಲಿಕವಾಗಿಯಾದರೂ ರೈತರಿಗೆ ನೀರಾ ಇಳಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ರೈತರು ಏನು ಸಂಕಷ್ಟದಲ್ಲಿದ್ದುಕೊಂಡು ಶಾಪ ಹಾಕುತ್ತಿದ್ದಾರೆ, ಅವರ ಕಷ್ಟ ಏನಿದೆ ಅದನ್ನು ನೀಗಿಸಿ ಅವರ ಆರ್ಥಿಕಮಟ್ಟ ಸುಧಾರಿಸುವ ಹಾಗೆ ಮಾಡಿ ಅವರ ಕುಟುಂಬಗಳನ್ನು ಕಾಪಾಡಬೇಕು ಎನ್ನತಕ್ಕಂಥ ಮನವಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಮಾನ್ಯ ಚನ್ನಿಗಪ್ಪನವರು ಮಾತನಾಡಲಿ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ: ನಮಗೆ ಸದನದಲ್ಲಿ ನೀರಾ ಬಾಧೆಗಿಂತ ನಿಮ್ಮ ಬಾಧೆಯೇ ಜಾಸ್ತಿಯಾಗಿದೆ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ನೀಲಕಂಠಪ್ಪನವರು ಈ ಸಭೆಯ ಎಲ್ಲರ ಬಾಯಿ ಮುಚ್ಚಿಸುವುದಕ್ಕೆ ಹೊರಟಿದ್ದಾರೆ. ನಾನು ತಮ್ಮ ಅಪ್ಪಣೆ ಕೇಳುತ್ತಾ, ಅವರಿಗೆ ಮೊದಲು ಮಾತನಾಡುವುದಕ್ಕೆ ಅವಕಾಶ ಕೊಡಿ, ನಂತರ ನಾನು ಮಾತನಾಡುತ್ತೇನೆ.

+ ಶ್ರೀ ಬಿ.ಆರ್.ನೀಲಕಂಠಪ್ಪ(ತರೀಕೆರೆ): ಮಾನ್ಯ ಅಧ್ಯಕ್ಷರೇ, ಈ ನುಸಿ ರೋಗದ ಬಗ್ಗೆ ಇವರಿಗಿಂತ ಅತ್ಯಂತ ಹೆಚ್ಚಿನ ಕಾಳಜಿ, ಇವರಿಗಿಂತ ನೂರು ಪಟ್ಟು ಜಾಸ್ತಿ ಆಸಕ್ತಿ ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣಾ ಅವರ ಸರ್ಕಾರಕ್ಕೆ ಹಾಗೂ ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಇದೆ. ಈ ನುಸಿರೋಗವನ್ನು ತಡೆಗಟ್ಟಬೇಕೆಂದು ಅತ್ಯಂತ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಇನ್ನೊಂದು ಆಪಾದನೆ ಇವರು ಏನು ಮಾಡುತ್ತಿದ್ದಾರೆ ಎಂದರೆ ನುಸಿ ರೋಗದ ಬಳಕೆ ಮೂಲಕ ನಾವು ಶಾಮೀಲಾಗಿದ್ದೇವೆ ಎಂದು. ನಾವು ಖಂಡಿತ ಶಾಮೀಲಾಗಿಲ್ಲ. ಅಬ್ಕಾರಿ ಇಲಾಖೆಯವರ ಜೊತೆಗೆ ಶಾಮೀಲಾಗಿರುವುದು ಇವರು, ವಿರೋಧ ಪಕ್ಷದವರು. ಕಾರಣ ಇಷ್ಟೆ, ಇಲ್ಲಿ ಇರತಕ್ಕಂಥ ನಾವು, ನೀವು ಬಹುತೇಕ ಎಲ್ಲರೂ ಸಹ ತೆಂಗು ಬೆಳೆದ ರೈತರು ಇದ್ದೇವೆ. ನೀರಾ ಇಳಿಸುವುದಕ್ಕೆ ಅವಕಾಶ ಕೊಡಬೇಕು ಎಂದರೆ, ಬೆಳಿಗ್ಗೆ ೬ ಗಂಟೆಗೆ ನಾವು ನೀರಾ ಇಳಿಸುವುದಕ್ಕೆ ಹೋಗಬೇಕು ಎಂದರೆ ಹೇಗೆ ಸಾಧ್ಯ? ಇವರು ರೈತರೆಲ್ಲರನ್ನೂ ಸಾಯಿಸಬೇಕೆಂದು ಇದ್ದಾರೆ. ಕಾರಣ ಏನೆಂದರೆ ತೋಟಕ್ಕೆ ಹೋಗಬೇಕು ಎಂದರೆ ಒಂದರಿಂದ ಐದು ಕಿಲೋಮೀಟರ್ ಆಗುತ್ತದೆ. ಅಲ್ಲಿಗೆ ಹೋಗಿ ನೀರಾ ಇಳಿಸಬೇಕಾಗುತ್ತದೆ. ಒಂದು ಮರ ಹತ್ತಿ ನೀರಾ ಇಳಿಸಲಿಕ್ಕೆ ಅರ್ಧ ಗಂಟೆ ಬೇಕಾಗುತ್ತದೆ. ಒಬ್ಬ ಬೆಳೆಗಾರನಿಗೆ ಹತ್ತು ಅಥವಾ ನೂರು ಮರಗಳಲ್ಲಿ ನೀರಾ ಇಳಿಸಲಿಕ್ಕೆ ಅವಕಾಶ ಕೊಟ್ಟರು ಎಂದರೆ, ನೂರು ಮರಗಳಿಂದ ನೀರಾ ಇಳಿಸುವುದಕ್ಕೆ ಅವನು ಅಲ್ಲಿ ರಾತ್ರಿಯೆಲ್ಲಾ ಮಲಗಿರಬೇಕಾಗುತ್ತದೆ. ಹೀಗೆ ಮಾಡಿ ಇವರು ರೈತರನ್ನು ಸಾಯಿಸಬೇಕೆಂದು ಹೇಳುತ್ತಿದ್ದಾರೆ. ನಾನು ಉದಾಹರಣೆ ಕೊಡುತ್ತೇನೆ. ಅದು ಅಲ್ಲವೆಂದು ಇವರು ಹೇಳಲಿ. ನಾನು ತಮಗೆಲ್ಲರಿಗೂ ಚಾಲೆಂಜ್ ಮಾಡುತ್ತೇನೆ ಮತ್ತು ರಾಜೀನಾಮೆ ಬೇಕಾದರೆ ಕೊಡುತ್ತೇನೆ. ರೈತರು ಆರು ಗಂಟೆಯೊಳಗೆ ನೀರಾ ಇಳಿಸಿ ಮಾರಾಟ ಮಾಡುತ್ತಾರೆ ಎಂದು ಅವರು ಹೇಳಲಿ. ನಾನು ಚಾಲೆಂಜ್ ಮಾಡುತ್ತೇನೆ, ಇಲ್ಲವಾದರೆ ನಾನು ರಾಜೀನಾಮೆ ಕೊಟ್ಟು

ಹೋಗುತ್ತೇನೆ. ಏಕೆಂದರೆ ಇವತ್ತು ರೈತನ ಪರಿಸ್ಥಿತಿ ಏನಾಗಿದೆ ಎಂದರೆ ಅವನು ಬೇರೆ ಬೆಳೆ ಬೆಳೆಯಲಿಕ್ಕಾಗದೆ ಅಲ್ಲಿ ಹೋಗಿ ನೇಣು ಹಾಕಿಕೊಳ್ಳಲಿ ಎಂದು ಇವರ ಇಚ್ಛೆ. ಕಾರಣ ಏನೆಂದರೆ ಅವನು ನೀರಾ ಎತ್ತಬೇಕಾದರೆ ರಾತ್ರಿಯೇ ಅಲ್ಲಿ ಹೋಗಿರಬೇಕು. ನಾಲ್ಕು ಗಂಟೆಗೇ ಹೋಗಿ ಅಲ್ಲಿ ಮಲಗಿರಬೇಕು. ಇಷ್ಟಾದರೂ ಅವನು ಎಷ್ಟು ಮರಗಳನ್ನು ಹತ್ತುವುದಕ್ಕೆ ಸಾಧ್ಯ? ಎರಡು ಮರಗಳನ್ನು ಹತ್ತಬಹುದು. ಐದು ಗಂಟೆಯೊಳಗೆ ನೀರಾ ಇಳಿಸಬೇಕು ಮತ್ತು ಆರು ಗಂಟೆಯೊಳಗೆ ಅದನ್ನು ಮಾರಾಟ ಮಾಡಬೇಕು. ತಾಲ್ಲೂಕು ಹೆಡ್‌ಕ್ವಾಟರ್ಸ್‌ನಲ್ಲಿ ಮಾರಾಟ ಮಾಡಬೇಕು ಎಂದರೆ ಅಲ್ಲಿ ಮಾರಾಟ ಮಾಡುವುದಕ್ಕೆ ಹೇಗೆ ಸಾಧ್ಯ? ಅಲ್ಲಿ ಕುಡಿಯುವವರು ಎಷ್ಟು ಜನ ಇದ್ದಾರೆ? ಇವರು ಇನ್‌ಡೈರೆಕ್ಟ್ ಆಗಿ ಎಕ್ಸೈಜ್ ಲಾಬಿಗೆ ಪ್ರೋತ್ಸಾಹ ಕೊಡಬೇಕೆಂದು ಮಾಡುತ್ತಿರುವುದು, ಅದಕ್ಕಾಗಿಯೇ ಇವರು ಹೀಗೆ ಹೇಳುತ್ತಿರುವುದು. ಅವರೆಲ್ಲರೂ ಏನೇನು ಮಾಡಿದ್ದಾರೋ ಗೊತ್ತಿಲ್ಲ. ಅಥವಾ ಇನ್‌ಡೈರೆಕ್ಟ್ ಆಗಿ ಎಷ್ಟು ಜನರ ಹತ್ತಿರ ಮಾತನಾಡಿದ್ದರೋ ಗೊತ್ತಿಲ್ಲ. ಇವರು ಎಕ್ಸೈಜ್ ಲಾಬಿಗೆ ಶಾಮೀಲಾಗಿ ಇನ್‌ಡೈರೆಕ್ಟ್ ಆಗಿ, ನೀರಾವನ್ನು ಸೇಂದಿಯಾಗಿ ಕನ್ವರ್ಟ್ ಮಾಡಿ ರೈತರ ಮುಖಾಂತರ ಮಾರಾಟ ಮಾಡಬೇಕು ಎಂದು ಮಾಡುತ್ತಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ ಎಂದು ನಾನು ಪ್ರಮಾಣ ಮಾಡಿ ಹೇಳುತ್ತೇನೆ. ಏನೆಂದರೆ ಇವರಿಗೆ ಆ ಉದ್ದೇಶ ಇದೆಯೇ ಹೊರತು ರೈತರಿಗೆ ಸಹಾಯ ಮಾಡಬೇಕೆಂಬ ಉದ್ದೇಶ ಖಂಡಿತವಾಗಿಯೂ ಇಲ್ಲ. ಏಕೆಂದರೆ ಈಗ ನೀರಾ ಇಳಿಸಲಿಕ್ಕೆ ಹತ್ತು ಮರಗಳಿಗೆ ಅನುಮತಿ ಕೊಟ್ಟಿರುತ್ತಾರೆ. ಇನ್ನು ಉಳಿದ ನೂರು ಮರಗಳಿಗೆ ನುಸಿರೋಗ ಬಂದರೆ ಏನಾಗುತ್ತದೆ? ಮಾನ್ಯ ಮಲ್ಲಿಕಾರ್ಜುನ್ ಅವರಿಗೆ ಇದು ಗೊತ್ತಿದೆ. ಇನ್‌ಡೈರೆಕ್ಟ್ ಆಗಿ ಹೆಂಡಾ ಇಳಿಸುವುದಕ್ಕೆ ಅನುಮತಿ ಕೊಡಿ ಎನ್ನುವುದಾದರೆ, ಹಾಗೆ ಹೇಳುವುದಾದರೆ ಬೇಕಾದರೆ ಎಲ್ಲರೂ ಕೇಳೋಣ......

ಶ್ರೀ ಸುಭಾಷ್ ಗುತ್ತೇದಾರ್: ಒಂದು ಮರಕ್ಕೆ ಅರ್ಧ ಗಂಟೆ ಬೇಕಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದರು. ನಾನು ಅದೇ ಕಸುಬಿನವನಿದ್ದೇನೆ. ನನಗೆ ಎಲ್ಲಾ ಗೊತ್ತು. ಎರಡು ಅಥವಾ ಮೂರು ನಿಮಿಷದಲ್ಲಿ ಒಂದು ಗಿಡದಿಂದ ನೀರಾ ಇಳಿಸಬಹುದು. ಆಮೇಲೆ ಒಂದು ದಿವಸದಲ್ಲಿ ಒಬ್ಬನು ೨೫ ಮರಗಳನ್ನು ಹತ್ತಿ ಕೆತ್ತುತ್ತಾನೆ, ನೀರಾ ಇಳಿಸುವುದಕ್ಕೆ ಸಾಧ್ಯವಿದೆ.

(ಗೊಂದಲ)

ಶ್ರೀ ಪಿ.ಚನ್ನಿಗಪ್ಪ: ಅವರು ಸರಿಯಾಗಿ ಹೇಳುತ್ತಿದ್ದಾರೆ. ಅವರಿಗೆ ಅದು ಗೊತ್ತಿದೆ.

ಶ್ರೀ ಕೆ.ಶ್ರೀನಿವಾಸಗೌಡ: ಅವರ ಹತ್ತಿರ ಮಾಹಿತಿ ಇಲ್ಲ. ಮಾನ್ಯ ನೀಲಕಂಠಪ್ಪನವರು ಸುಮ್ಮಸುಮ್ಮನೆ ಏಕೆ ಮಾತನಾಡಬೇಕು?

ಶ್ರೀ ಬಿ.ಆರ್.ನೀಲಕಂಠಪ್ಪ: ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಹಾಗೆ ಈಚಲು ಮರ ಹತ್ತುತ್ತಾರೆ, ತೆಂಗಿನ ಮರ ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ನಮ್ಮ ಮಾನ್ಯ ಸುಭಾಷ್ ಗುತ್ತೇದಾರರು ಹೇಳಿದ್ದು ಸರಿ ಇಲ್ಲ. ಎರಡು-ಮೂರು ನಿಮಿಷದಲ್ಲಿ ಒಂದು ಮರಕ್ಕೆ ಕಟ್ಟಿ ಇಳಿಸುವುದಕ್ಕೆ ಆಗುವುದಿಲ್ಲ. ಏಕೆ ಗೊತ್ತೇನು? ಮರ ಹತ್ತಿ ಕಟ್ಟುಗಳನ್ನು ಇಳಿಸಿಕೊಂಡು ಬರುವುದಲ್ಲ. ಸುತ್ತ ಕಟ್ಟಿರುವುದನ್ನು ಬಿಚ್ಚಬೇಕು ಮತ್ತು ಬಿಚ್ಚಿಯಾದ ಮೇಲೆ ಹೆಂಡ ಇಳಿಸಿಕೊಂಡು ಪಟ್ಟಿಗೆ ಹಾಕಿಕೊಂಡು ಮತ್ತೆ ಅದನ್ನು ಒಂದು ರೌಂಡ್ ಕೊಯ್ಯಬೇಕು. ಆಮೇಲೆ ಅದೇ ಟೈಪ್‌ನಲ್ಲಿ ಕಟ್ಟಿ ಟೈಟ್ ಮಾಡಿ, ಆ ಮಡಕೆ ಇಟ್ಟು ಬರಬೇಕು. ಈಚಲು ಮರ ಸುಲಭ, ತೆಂಗಿನ ಮರ ಆ ರೀತಿ ಅಲ್ಲ.

ಶ್ರೀ ಸುಭಾಷ್ ಗುತ್ತೇದಾರ್: ಈಚಲು ಮರಕ್ಕೆ ೨-೩ ನಿಮಿಷ ಬೇಕಾದರೆ, ತೆಂಗಿನ ಮರಕ್ಕೆ ೫ ನಿಮಿಷ ಬೇಕು.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಕಾಗೋಡು ತಿಮ್ಮಪ್ಪನವರು ಈಚಲು ಮರಗಳನ್ನು ಮರೆತಿದ್ದಾರೆ. ಆದ್ದರಿಂದ, ಅವರಿಗೆ ಹಳೆಯದೇ ಜ್ಞಾಪಕ ಇದೆ, ಹೊಸದು ಗೊತ್ತಿಲ್ಲ.

(ಗೊಂದಲ)

ಶ್ರೀ ಬಿ.ಆರ್.ನೀಲಕಂಠಪ್ಪ: ರೈತರೆಲ್ಲಾ ಮನೆಯಲ್ಲಿ ಮಲಗಬಾರದು, ತೋಟದಲ್ಲಿ ಮಲಗಲಿ ಎಂಬುದು ವಿರೋಧ ಪಕ್ಷದವರ ಉದ್ದೇಶ. ಕಾರಣ ಏನೆಂದರೆ, ಎಲ್ಲಾ ರೈತರು ಹಗಲೆಲ್ಲಾ ಬೇಸಾಯ ಮಾಡುವುದು ಬೇಡ. ನೀರಾ ಇಳಿಸಿಕೊಂಡು ಮಾರಾಟ ಮಾಡುವುದಕ್ಕಾಗುವುದಿಲ್ಲ. ಅತ್ಯಂತ ಶೋಚನೀಯವಾದ ಮಾತನ್ನು ಅವರು ಹೇಳುತ್ತಾರೆ. ಅದರಿಂದ ನುಸಿರೋಗ ಇನ್ನೂ ಜಾಸ್ತಿಯಾಗುತ್ತದೆ. ಮತ್ತೆ ಆ ಮರ ಆರೋಗ್ಯಕರವಾಗಿರುವುದಿಲ್ಲ, ಒಂದೆರಡು ವರ್ಷಗಳಲ್ಲಿ ಸಂಪೂರ್ಣವಾಗಿ ನಾಶವಾಗುತ್ತದೆ. ಆ ಪರಿಸ್ಥಿತಿಯೂ ಇದೆ. ಇದರ ಬಗ್ಗೆ ಸರ್ಕಾರವೇ ಆಗಲೀ ಅಥವಾ ಅವರೇ ಆಗಲಿ ವೈಜ್ಞಾನಿಕವಾಗಿ ಚಿಂತನೆ ಮಾಡಿಲ್ಲ. ಅದರ ಬಗ್ಗೆ ವರದಿ ಕೊಟ್ಟಿಲ್ಲ. ಕೇರಳದಲ್ಲೂ ಸಹ ಹೆಂಡ ಇಳಿಸುವುದರಿಂದ ತೆಂಗಿನ ಗಿಡಗಳು ಹೋಗುತ್ತವೆ ಎಂದು ಹೇಳುತ್ತಿದ್ದಾರೆ. ಆ ದೃಷ್ಟಿಯಿಂದ ಇವರು ರಾಜಕೀಯ ಲಾಭಕ್ಕಾಗಿ ಜನರನ್ನು ಪ್ರಚೋದನೆ ಮಾಡುತ್ತಿದ್ದಾರೆ. ಇದರಿಂದ ರೈತರನ್ನು ನೇಣು ಹಾಕತಕ್ಕ ಪರಿಸ್ಥಿತಿಯಾಗುತ್ತದೆ. ರೈತರು ರಾತ್ರಿಯೆಲ್ಲಾ ಹೆಂಡ ಇಳಿಸಿ, ನೀರಾ ಇಳಿಸಿ ಎಂದು ಹೇಳಿದರೆ ರೈತಾಪಿ ಜನರು ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆ. ಇವತ್ತು ಹೆಂಡ ಇಳಿಸಿ ಎಂದು ಹೇಳುವುದು ಅಥವಾ ಇನ್ನೊಂದು ಹೇಳುವುದು, ಒಂದು ತೋಟದಲ್ಲಿ ೧೦ ಮರಗಳಿಗೆ ನೀರಾ ಇಳಿಸಿದರೆ, ಉಳಿದ ಮರಗಳಲ್ಲಿ ನುಸಿರೋಗ

ಹೇಗೆ ತಪ್ಪುತ್ತದೆ? ಆದ್ದರಿಂದ ನೂರಕ್ಕೆ ನೂರು ಇದು ಒಳ್ಳೆಯದಲ್ಲ. ಅವರಿಗೆ ವಿಜ್ಞಾನದ ವ್ಯವಸ್ಥೆ ಗೊತ್ತಿಲ್ಲ. ಅವರಿಗೆ ನುಸಿರೋಗದ ಬಗ್ಗೆ ಜನರನ್ನು ಪ್ರಚೋದನೆ ಮಾಡಬೇಕು ಮತ್ತು ಈಗ ಬೇರೆ ಪಾಯಿಂಟೇ ಇಲ್ಲ. ಅವರು ಪ್ರಚೋದನಕಾರಿ ಹೇಳಿಕೆ ಕೊಡುವ ದೃಷ್ಟಿಯಿಂದ ಹೇಳುತ್ತಿದ್ದಾರೆಯೇ ಹೊರತು ನೂರಕ್ಕೆ ನೂರು ನೀರಾ ಇಳಿಸುವುದಕ್ಕೆ ಆಗುವುದಿಲ್ಲ. ಇವರು ಹೆಂಡದ ದೊರೆಗಳ ಜೊತೆ ಸಹಭಾಗಿಗಳಾಗಿದ್ದಾರೆ. ಇದನ್ನು ನಾನು ನೂರುಸಾರಿ ಹೇಳುತ್ತೇನೆ. ಏಕೆಂದರೆ, ರೈತ ಹೆಂಡ ಇಳಿಸಿಬಿಟ್ಟು ಮಾರಿಕೊಂಡು ಹೋಗಲಿ ಎಂದು ಮಾಡುತ್ತಿದ್ದಾರೆ. ಜನರನ್ನು ಸಂಕಷ್ಟಕ್ಕೆ ಸಿಕ್ಕಿಸತಕ್ಕ ವ್ಯವಸ್ಥೆ ಮಡಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಎಸ್.ಎಂ.ಕೃಷ್ಣಾರವರ ನೇತೃತ್ವದ ಸರ್ಕಾರ ನಮ್ಮ ಜಿಲ್ಲೆಯಲ್ಲಿ ಈ ನುಸಿರೋಗವನ್ನು ನೂರಕ್ಕೆ ನೂರರಷ್ಟು ನಿವಾರಣೆ ಮಾಡಬೇಕೆಂಬ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾ ಪರಿಷತ್ತಿಗೆ ಹಣವನ್ನು ಒದಗಿಸಿಕೊಟ್ಟಿದ್ದಾರೆ. ದಯಮಾಡಿ, ಹೆಂಡ ಇಳಿಸುವುದಕ್ಕೆ ಅವಕಾಶ ಕೊಡಿ, ಒಪ್ಪಿಕೊಳ್ಳುತ್ತೇವೆ. ನೀರಾ ಇಳಿಸುವುದು ಬೇಡ. ಜನಗಳಿಗೆಲ್ಲಾ ಕೊಡಲೇ ಕೊಡಲಿ, ಇಳಿಸಿ ಸಾಹುಕಾರರು ಆಗಿಬಿಡಲಿ. ಇಲ್ಲದೇ ಹೋದರೆ ಸುಮ್ಮನೇ ಏಕೆ ಅರ್ಥಂಬರ್ಥ ಸಾಹುಕಾರನ್ನಾಗಿ ಮಾಡುತ್ತಾರೆ? ಇದರಿಂದ ನುಸಿ ರೋಗವೂ ಹೋಗುವುದಿಲ್ಲ ಮತ್ತು ಅವರು ನೀರಾ ಇಳಿಸಿ ಎಂದು ಹೇಳುವುದು ಬೇಕಿಲ್ಲ. ಆದ್ದರಿಂದ ವಿರೋಧ ಪಕ್ಷದವರು ಹೇಳಿರತಕ್ಕಂಥಾದ್ದಕ್ಕೆ ಮನ್ನಣೆ ಇಲ್ಲ. ಸರ್ಕಾರ, ಜನರ ಅಭಿಪ್ರಾಯಗಳನ್ನು ತಿಳಿದುಕೊಂಡು, ಸಚಿವ ಸಂಪುಟದಲ್ಲಿ ಮಾಡಿರತಕ್ಕ ತೀರ್ಮಾನ ಸ್ವಾಗತಾರ್ಹ. ನಮ್ಮ ಪಕ್ಷದವರು ಮತ್ತು ವಿರೋಧ ಪಕ್ಷದವರು ಇದನ್ನು ಸ್ವಾಗತ ಮಾಡಿ, ರೈತರ ಸಂಕಷ್ಟವನ್ನು ಬೇರೆ ಬೇರೆ ರೀತಿಯಲ್ಲಿ ಬಗೆಹರಿಸತಕ್ಕ ನಿಟ್ಟಿನಲ್ಲಿ ತಾವು ಸೂಚನೆ ಕೊಡಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

\+ ಶ್ರೀ ಸಿ.ಚೆನ್ನಿಗಪ್ಪ (ಕೊರಟಗೆರೆ): ಸನ್ಮಾನ್ಯ ಅಧ್ಯಕ್ಷರೇ, ಸುಮಾರು ೯೦ ಪರ್ಸೆಂಟ್ ಎಲ್ಲಾ ಶಾಸಕರೂ ರೈತ ಕುಟುಂಬದಿಂದ ಬಂದವರು. ಹಳ್ಳಿಯಲ್ಲಿ ಪ್ರತಿಯೊಬ್ಬರೂ ಬೆಳಿಗ್ಗೆ ಅಡಿಕೆ ಅಥವಾ ತೆಂಗಿನ ತೋಟಕ್ಕೆ ಹೋಗಿ ಬಂದರೆ ಸಾಕು, ನಮಗೆ ಯಾವುದೇ ಸ್ವರ್ಗ ಕಣ್ಣಿಗೆ ಕಾಣಬೇಕಾಗಿಲ್ಲ. ಅಷ್ಟರಮಟ್ಟಿಗೆ, ಅಲ್ಲಿ ನಮ್ಮ ಮನಸ್ಸಿಗೆ ಸಂತೋಷವಾಗುವುದನ್ನು ನಾವು ನೋಡಬಹುದು. ವ್ಯವಸಾಯದಲ್ಲಿಯೇ ಜೀವನ ಮಾಡತಕ್ಕ ಪರಂಪರೆಯನ್ನು ಅನುಸರಿಸಿಕೊಂಡು ಬರತಕ್ಕ ಸಂಸಾರಗಳೇನಿವೆ ನಮ್ಮ ರಾಜ್ಯದಲ್ಲಿ, ಈ ರಾಜ್ಯ ಇಡೀ ಪ್ರಪಂಚದಲ್ಲೇ ಅತ್ಯುತ್ತಮವಾದ ರಾಜ್ಯ. ತೆಂಗು, ಬಾಳೆ ಮತ್ತು ಅಡಿಕೆಯಲ್ಲಿ ಮತ್ತು ತರಕಾರಿ ಬೆಳೆಯುವುದರಲ್ಲಿ ಕರ್ನಾಟಕ ರಾಜ್ಯ ಅತ್ಯುತ್ತಮವಾದುದು. ಇತ್ತೀಚೆಗೆ ತೆಂಗಿನ ಮರವನ್ನು ಕಲ್ಪವೃಕ್ಷವೆಂದು ತಿಳಿದು ಬೆಳಿಗ್ಗೆ ಎದ್ದು ನಾವು ಪೂಜೆ ಮಾಡುತ್ತೇವೆ ಮತ್ತು ತೆಂಗಿನ ಮರವನ್ನು ಮನೆ ಮುಂದೆ

ಹಾಕಿಕೊಂಡು ಎದ್ದು ನೋಡಿದರೆ, ನಮಗೆ ಯಾವುದೇ ಅಮಂಗಳವಾಗುವುದಿಲ್ಲವೆಂಬುದು ನಮ್ಮ ಸಂಸ್ಕೃತಿ ಮತ್ತು ಪರಂಪರೆಯಿಂದ ಏನು ಗೊತ್ತಾಗಿತ್ತೋ ಅದು ಇವತ್ತು ಮಾಯವಾಗತಕ್ಕ ಪರಿಸ್ಥಿತಿ ಬಂದಿದೆ. ಉದಾಹರಣೆಗೆ ೧೦ ವರ್ಷಗಳ ಹಿಂದಿನಿಂದ ತೆಂಗಿನ ಮರವನ್ನು ನೋಡಿದಾಗ ಒಂದು ಮರ ೩೦೦-೪೦೦ ಕಾಯಿಗಳನ್ನು ಬಿಡುವುದನ್ನು ನಾವು ನೋಡಿದ್ದೇವೆ. ಕಳೆದ ೧೦ ವರ್ಷಗಳ ನಂತರ, ಪ್ರತಿ ವರ್ಷ ಈ ನುಸಿ ರೋಗ ಮತ್ತು ಕಪ್ಪುತಲೆಯ ಹುಳ ಬಂದು ತೆಂಗಿನ ಮರದ ಗರಿಗಳು ಕೆಂಪಾಗುವುದು ಮತ್ತು ತೆಂಗಿನ ಕಾಯಿಗಳ ಮೇಲೆ ಕಪ್ಪುಕಲೆ ಬಂದು, ಕಾಯಿ ಯೀಲ್ಡ್ ಕಡಿಮೆಯಾಗುವುದು ಮತ್ತು ರೋಗ ತಗಲಿದ ಮೇಲೆ ಆ ಕಾಯಿಯನ್ನು ಮನುಷ್ಯರು ತಿನ್ನುವ ರೀತಿ ಇರುವುದಿಲ್ಲ, ಎಳನೀರು ಕುಡಿಯುವುದಕ್ಕೆ ಮತ್ತು ಕಾಯಿಯನ್ನು ಅಡಿಗೆಗೆ ಉಪಯೋಗಿಸುವುದಕಾಗುವುದಿಲ್ಲ. ಆ ರೀತಿ ಆಗಿರುತ್ತದೆ. ಇದರ ಬಗ್ಗೆ ವೈಜ್ಞಾನಿಕವಾಗಿ ತೀರ್ಮಾನ ಮಾಡಬೇಕಾಗಿದೆ. ನಮ್ಮ ಸರ್ಕಾರ ಬಂದ ಮೇಲೆ ನಾವು ಪರಿಪರಿಯಾಗಿ ವಿನಂತಿ ಮಾಡಿ, ರೋಗವನ್ನು ನಿಯಂತ್ರಣ ಮಾಡಬೇಕು, ಸರ್ಕಾರದ ವತಿಯಿಂದ ಔಷಧಿ ಅಥವಾ ವೈಜ್ಞಾನಿಕವಾಗಿ ಪರೀಕ್ಷೆ ಮಾಡಿಸಬೇಕೆಂದು ನಾವೆಲ್ಲರೂ ಸರ್ಕಾರದವರಲ್ಲಿ ಮನವಿ ಮಾಡಿದೆವು. ನಾವು ಈ ಸರ್ಕಾರವನ್ನೇನೂ ಪೇಚಿಗೆ ಸಿಕ್ಕಿಸಬೇಕಾದ್ದಿಲ್ಲ. ಸರ್ಕಾರ ತನ್ನ ಪಾಲಿನ ಕೆಲಸವನ್ನು ಮಾಡಿದೆ. ಆದರೆ, ಔಷಧಿ ಕೊಡುವ ವಿಚಾರದಲ್ಲಿ, ವೈಜ್ಞಾನಿಕವಾಗಿ ಚಿಂತನೆ ಮಾಡಿ, ಒಳ್ಳೆಯ ತಜ್ಞರನ್ನು ಕರೆಸಿ, ಅವರ ಅಭಿಪ್ರಾಯ ಪಡೆದು ಔಷಧಿ ಹಾಕಿದ್ದರೆ ಏನೂ ಆಗುತ್ತಾ ಇರಲಿಲ್ಲ. ಇವರು ಒಂದು ಎಕರೆಗೆ ೩-೪ ಲೀಟರ್ ಔಷಧಿ ಯನ್ನು ಸಬ್ಸಿಡಿ ರೇಟಿನಲ್ಲಿ ಕೊಟ್ಟರು. ಎಲ್ಲಾ ರೈತರು, ಅದನ್ನು ಮರಗಳಿಗೆ ಪ್ರಯೋಗ ಮಾಡಿದಾಗ, ಕೊನೆಯಪಕ್ಷ ಇಪ್ಪತ್ತು ಪರ್ಸೆಂಟ್ ಕೆಲಸ ಮಾಡಲಿಲ್ಲ. ಆ ಔಷಧಿ ಡೂಪ್ಲಿಕೇಟ್ ಇದೆಯೋ ಅಥವಾ ಒರಿಜನಲ್ ಇದೆಯೋ ನಮಗೆ ಗೊತ್ತಿಲ್ಲ. ಆ ಔಷಧಿ ಉತ್ತಮವಾಗಿ ಕೆಲಸ ಮಾಡಲಿಲ್ಲ ಹಾಗೂ ಆ ರೋಗ ನಿವಾರಣೆಯಾಗಲಿಲ್ಲ. ಇವತ್ತು ನಾವೆಲ್ಲಾ ಕೇಳುವುದು ಇಷ್ಟೆ. ಈ ರೋಗವನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರ ಮುಂದೆ ಬಂದು, ವೈಜ್ಞಾನಿಕ ರೀತಿಯನ್ನು ಅಳವಡಿಸಿಕೊಂಡು ಸಂಪೂರ್ಣ ನಿವಾರಣೆ ಮಾಡಿದರೆ, ನೀರಾ ಇಳಿಸಬೇಕಾಗಿಲ್ಲ. ಅದನ್ನು ನಾವು ಕೇಳಬೇಕಾದ್ದೂ ಇಲ್ಲ. ಈ ರೋಗ ನಿವಾರಣೆಯಾಗದಿದ್ದರೆ ರೈತರಿಗೆ ಆಘಾತವಾಗುತ್ತದೆ, ಅವರ ಹಣಕಾಸಿನ ಪರಿಸ್ಥಿತಿಗೆ ಬಹಳ ತೊಂದರೆಯಾಗುತ್ತದೆ. ಏಕೆಂದರೆ, ಇವತ್ತು ನೂರಕ್ಕೆ ಎಪ್ಪತ್ತು ಪರ್ಸೆಂಟ್ ಜನ ರೈತರೇ ಆಗಿದ್ದಾರೆ. ಇನ್ನು ೩೦-೩೫ ಪರ್ಸೆಂಟ್ ಜನರು ತೆಂಗಿನ ಮರ ಬೆಳೆಸಿ, ಅದರಲ್ಲಿ ಜೀವನ ಮಾಡುವಂಥವರೂ ಇದ್ದೇವೆ. ಆದ್ದರಿಂದ, ನಾನು ಸರ್ಕಾರದಲ್ಲಿ ವಿನಂತಿ ಮಾಡುವುದು ಇಷ್ಟೆ. ಇವತ್ತೇನು ಈ ಚರ್ಚೆ ಇಷ್ಟು ಮಹತ್ವವನ್ನು ಪಡೆದಿದೆ ಎಂದರೆ, ನೀರಾ ಇಳಿಸುವುದಕ್ಕೆ ಸರ್ಕಾರ ಪರ್ಮಿಷನ್ ಕೊಟ್ಟರೆ, ರೈತನಿಗೆ ಆರ್ಥಿಕವಾಗಿ ಅನುಕೂಲ ಮಾಡುವುದಾದರೆ ರೋಗ ನಿವಾರಣೆಗೆ ವೈಜ್ಞಾನಿಕವಾಗಿ

ಪರೀಕ್ಷೆ ಮಾಡಿಸಿ, ಮಾಡಿಸಬೇಕು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಈ ನೀರಾ ಇಳಿಸುವುದರ ಬಗ್ಗೆ ನಿಮ್ಮ ನಾಯಕರ ನಿಲುವೇನು? ದಯಮಾಡಿ, ಅದನ್ನು ಸ್ವಲ್ಪ ಸ್ಪಷ್ಟ ಮಾಡಿ. ಏಕೆಂದರೆ, ತಮ್ಮ ನಾಯಕರ ಅಭಿಪ್ರಾಯಕ್ಕೆ ವಿಭಿನ್ನವಾದ ಅಭಿಪ್ರಾಯ ನಿಮ್ಮಿಂದ ಬರುತ್ತಾ ಇದೆ. ನೀರಾ ಇಳಿಸುವ ಬಗ್ಗೆ ನಿಮ್ಮ ನಾಯಕರು ಒಪ್ಪಿಲ್ಲ. ಅದಕ್ಕೆ ವಿರುದ್ಧವಾಗಿ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದೀರಿ.

೫-೦೦ ಪಿಎಂ

ಶ್ರೀ ಸಿ.ಚೆನ್ನಿಗಪ್ಪ: ನಮ್ಮ ನಾಯಕರು ನೀರಾವನ್ನು ಇಳಿಸಬಾರದೆಂದು ಹೇಳಿದ್ದಾರೆ. ನಿಮ್ಮ ನಾಯಕರು ಏನು ಹೇಳಿದ್ದಾರೋ ಗೊತ್ತಿಲ್ಲ. ಅದನ್ನು ನೀವು ಹೇಳಬೇಕು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ನಾವು ನಮ್ಮ ನಾಯಕರ ಅಭಿಪ್ರಾಯಕ್ಕೆ ಸಹಮತವನ್ನು ವ್ಯಕ್ತಪಡಿಸಿದ್ದೇವೆ. ಆದರೆ ತಾವು ತಮ್ಮ ನಾಯಕರ ಅಭಿಪ್ರಾಯಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತೀದ್ದೀರಲ್ಲಾ?

ಶ್ರೀ ಸಿ.ಚೆನ್ನಿಗಪ್ಪ: ನಮ್ಮ ನಾಯಕರು ಹೇಳಿರುವ ವಿಷಯ ಬೇರೆ, ಅವರ ನಾಯಕರು ಹೇಳಿರುವ ವಿಷಯ ಬೇರೆ. ಮಾನ್ಯ ಮುದ್ದಹನುಮೇಗೌಡರಿಗೆ ಏನೇ ಆದರೂ ಅವರ ಸರ್ಕಾರದ ಚಾಲನೆಯನ್ನು ಮುಂದೆ ತರಬೇಕೆಂಬ ಆಸೆ ಇದೆ. ಅವರು ಹೇಳಲಿ. ನಾನು ಸ್ವಾಗತ ಮಾಡುತ್ತೇನೆ. ರಾಜ್ಯದಲ್ಲಿನ ತೆಂಗಿನ ಮರಗಳಿಗೇನು ನುಸಿರೋಗ ಮತ್ತು ಕಪ್ಪುತಲೆ ಹುಳುವಿನ ರೋಗವಿದೆ ಅದರ ನಿಯಂತ್ರಣ ಆಗದ ಹೊರತು ರೈತರ ಆರ್ಥಿಕ ಸ್ಥಿತಿ ಉತ್ತಮವಾಗುವುದಿಲ್ಲ. ರೈತರು ಯಾವುದೇ ರೀತಿಯಲ್ಲಿ ಮುಂದುವರೆಯಲು ಸಾಧ್ಯವಾಗುವುದಿಲ್ಲ. ಮಾನ್ಯ ಕೃಷಿ ಸಚಿವರು ಮತ್ತು ನಾನು ನಮ್ಮ ತಾಲ್ಲೂಕಿನಲ್ಲಿ ಸುತ್ತಾಡಿ ನೋಡಿದಾಗ ನೂರಕ್ಕೆ ಅರವತ್ತು ಮರಗಳು ಈ ನುಸಿರೋಗಕ್ಕೆ ತುತ್ತಾಗಿ ನಾರೂ ಸಿಗದಂಥ ಪರಿಸ್ಥಿತಿಯಾಗಿದೆ. ಉತ್ತಮವಾದ ಕಾಯಿ, ಕೊಬ್ಬರಿ ಸಿಗುವುದಿಲ್ಲ. ಆ ತೆಂಗಿನ ಮರದ ಎಳನೀರನ್ನು ಕುಡಿದರೆ ರೋಗ ಬರುತ್ತದೆಂದು ಜನರು ಎಳನೀರನ್ನೂ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ರೈತರಿಗಾಗಿರುವ ತೊಂದರೆ ಹಾಗೂ ಆರ್ಥಿಕ ಹಿನ್ನಡೆಯಿಂದಾಗಿ ಆ ರೋಗವನ್ನು ನಿವಾರಣೆ ಮಾಡಿಕೊಡುವಲ್ಲಿ ವೈಜ್ಞಾನಿಕ ದೃಷ್ಟಿಯಿಂದ ಪ್ರಯತ್ನ ಪಡಬೇಕು. ಇಲ್ಲದಿದ್ದರೆ ಪ್ರಾಯೋಗಿಕವಾಗಿ ಒಂದೆರಡು ವರ್ಷ ನೀರಾವನ್ನು ಇಳಿಸಲು ಅವಕಾಶ ಕೊಡಬೇಕು, ಅದು ಯಶಸ್ವಿಯಾಗದಿದ್ದರೆ ವಾಪಸ್ ತೆಗೆದುಕೊಳ್ಳಬಹುದು. ಈ ಎರಡರಲ್ಲಿ ಯಾವುದಾದರೂ ಒಂದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡು ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕು. ಈ ರೋಗದ ತಡೆಗಾಗಿ ಒಂದು ಜಿಲ್ಲೆಗೆ

ಐವತ್ತರಿಂದ ಅರವತ್ತು ಲಕ್ಷ ರೂಪಾಯಿಗಳ ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಆದರೆ ಈ ಹಣವು ಸಾಕಾಗುವುದಿಲ್ಲ. ಇದನ್ನು ಇನ್ನೂ ಜಾಸ್ತಿ ಮಾಡುವ ಮೂಲಕ ಈ ರೋಗವನ್ನು ನಿವಾರಣೆ ಮಾಡಬೇಕು. ಇಲ್ಲದಿದ್ದರೆ ನೀರಾವನ್ನು ಇಳಿಸಲು ಅವಕಾಶ ಕೊಡಬೇಕೆಂದು ನಾವೆಲ್ಲರೂ ಏನು ಕೇಳುತ್ತಿದ್ದೇವೆ ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ (ತುರುವೇಕೆರೆ): ಮಾನ್ಯ ಉಪಾಧ್ಯಕ್ಷರೆ, ನೀರಾ ಇಳಿಸುವ ವಿಚಾರದಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿರುವುದಕ್ಕೆ ನಾನು ತಮಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ಸದನ ಪ್ರಾರಂಭವಾದಂದಿನಿಂದ ಇದರ ಬಗ್ಗೆ ಚರ್ಚೆ ಮಾಡಲು ನಾವು ಕೇಳಿಕೊಂಡಿದ್ದೆವು. ಸರ್ಕಾರ ಚರ್ಚೆಗೆ ಅವಕಾಶ ಮಾಡಿಕೊಡದಿರುವ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಇತ್ತೀಚೆಗೆ ಬಂದಿರುವ ಕೆಲವು ಲೇಖನಗಳನ್ನು ನಾನು ಶೇಖರಿಸಿ ಇಟ್ಟಿದ್ದೇನೆ. "ತಿಪಟೂರು ಸುತ್ತ ಮುತ್ತ ಜನಪ್ರಿಯವಾಗುತ್ತಿರುವ ನೀರಾ ಮಾರಾಟ, ರೈತರಿಗೆ ನುಸಿ ಪೀಡೆ, ಅಬ್ಕಾರಿಗೆ ನೀರಾ ಪೀಡೆ, ಪೋಲೀಸರಿಗೆ ಯಾವ ಪೀಡೆ? ನಿರಾಶೆ ಮೂಡಿಸಿದ ಕೊಬ್ಬರಿ ಬೆಂಬಲ ಬೆಲೆ, ಕೊಳ್ಳದಿರುವ ಸರ್ಕಾರದ ನೀತಿಯ ಬಗ್ಗೆ ರೈತರ ಆಕ್ರೋಶ" ಇವುಗಳು ಆ ಲೇಖನಗಳಲ್ಲಿ ಮೂಡಿ ಬಂದಿವೆ. ಸರ್ಕಾರದಲ್ಲಿರುವ ಕೃಷಿ ವಿಜ್ಞಾನಿಗಳು, ತಜ್ಞರ ಅಭಿಪ್ರಾಯದ ಮೇಲೆ ರಾಜಕಾರಣಿಗಳು ಚರ್ಚೆ ಮಾಡಿ ಇದರ ಬಗ್ಗೆ ಬೀದಿಗಿಳಿಯುವಂಥ ಸಂದರ್ಭ ಬಂದಿದೆ. ವಿಷಯ ಸಮಿತಿಯಲ್ಲಿ ಎಲ್ಲಾ ಪಕ್ಷದ ಶಾಸಕರುಗಳು ಸೇರಿಕೊಂಡು ಇದರ ಬಗ್ಗೆ ಪ್ರಸ್ತಾಪ ಮಾಡಿ ಕೃಷಿ ವಿಜ್ಞಾನಿಗಳ ಅಭಿಪ್ರಾಯವನ್ನು ಪಡೆದು, ತೆಂಗಿನ ಮರಕ್ಕೇನು ನುಸಿ ರೋಗ ಬರುತ್ತಿದೆ ಆ ರೋಗವನ್ನು ನಿವಾರಣೆ ಮಾಡುವುದಕ್ಕೆ ನೀರಾ ಇಳಿಸುವುದು ಒಂದೇ ದಾರಿಯೆಂದು ಶಿಫಾರಸ್ಸು ಮಾಡಿ ವಿಷಯ ಸಮಿತಿಯ ವರದಿಯಲ್ಲಿ ನೀಡಲಾಗಿದೆ. ಆ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಲಾಗಿದೆ. ಇದರ ಬಗ್ಗೆ ಗಂಭೀರವಾದ ಚಿಂತನೆ ನಡೆಯಬೇಕು. ಗ್ರಾಮಾಂತರ ಪ್ರದೇಶದ ಜನರಿಗೆ ಯಾವುದೇ ಕಾರಣಕ್ಕೂ ನೀರಾವನ್ನು ಕುಡಿಸಲು ಸಿದ್ಧವಿಲ್ಲವೆಂದು ಸರ್ಕಾರ ಹೇಳುತ್ತಿದೆ. ನೀರಾ ಇಳಿಸಿದ ಮೇಲೆ ಅದು ಸೇಂದಿಯಾಗಬಹುದು ಅಥವಾ ಹೆಂಡವಾಗಬಹುದು, ಅದನ್ನು ಕುಡಿಸಲು ಸರ್ಕಾರ ಸಿದ್ಧವಿಲ್ಲವೆಂಬ ಮಾತನ್ನು ಹೇಳುತ್ತಿದೆ. ಇದನ್ನು ಒಪ್ಪಿಕೊಳ್ಳಬೇಕಾದ ವಿಷಯವೇ. ಇವತ್ತು ಹಳ್ಳಿಗಳಲ್ಲಿನ ಅಂಗಡಿಗಳಲ್ಲಿ ಶರಾಬು ಮಾರಾಟ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ, ಆದರಲ್ಲಿತಕ್ಕ ಅಡಲ್ಟ್ರೇಷನ್, ತೊಂಭತ್ತು ಭಾಗ ಸ್ಪಿರಿಟ್‌ನ್ನು ಹಾಕಿ ಜನರಿಗೆ ಕುಡಿಸುತ್ತಿರುವುದನ್ನು ನೋಡಿದಾಗ ಅನೇಕ ಜನರು ಸಾಯುತ್ತಿದ್ದಾರೆ. ಆದರೆ ನೀರಾ ಎನ್ನತಕ್ಕದ್ದು ವಿಭಿನ್ನವಾದದ್ದು. ನೀರಾದಿಂದ ಶರೀರಕ್ಕೆ ಯಾವುದೇ ಹಾನಿಯಾಗುವುದಿಲ್ಲವೆಂದು ಈಗಾಗಲೇ ವಿಜ್ಞಾನಿಗಳು ಸಾಬೀತು

ಮಾಡಿದ್ದಾರೆ. ಆ ದೃಷ್ಟಿಯಿಂದ ನೀರಾವನ್ನು ಇಳಿಸಲು ಅವಕಾಶ ಮಾಡಿಕೊಟ್ಟರೆ ರೋಗವನ್ನು ತಡೆಗಟ್ಟಬಹುದು ಮತ್ತು ರೈತರನ್ನು ಸಂಕಷ್ಟದಿಂದ ಪಾರು ಮಾಡಬಹುದು. ಆ ದೃಷ್ಟಿಯಿಂದ ನೀರಾವನ್ನು ಇಳಿಸಲು ಅವಕಾಶ ಮಾಡಿಕೊಡಬೇಕೆಂದು ನಾವು ಕೇಳಿದ್ದೇವೆಯೇ ಹೊರತು ಬೇರಾದ ಕಾರಣದಿಂದಲೂ ಅಲ್ಲ. ನುಸಿರೋಗವು ಕಳೆದ ಎರಡು ಮೂರು ವರ್ಷಗಳಿಂದ ಬಂದಿದೆ. ಹೋದಸಾರಿ ಈ ಸದನದಲ್ಲಿ ಇದರ ಬಗ್ಗೆ ಚರ್ಚೆಯಾದಂಥ ಸಂದರ್ಭದಲ್ಲಿ, ಜಿಲ್ಲೆ ಇರಬಹುದು, ತಾಲ್ಲೂಕು ಇರಬಹುದು, ಯಾವ ಒಂದು ಔಷಧಿಯನ್ನು ಸಿಂಪಡಣೆ ಮಾಡಲು ಕೊಟ್ಟಿದ್ದಂಥ ವ್ಯವಸ್ಥೆ ಸರಿಯಾಗಿರಲಿಲ್ಲ. ಮತ್ತು ಆ ಕೆಲಸ ಆಗಲಿಲ್ಲ. ಸಮಗ್ರವಾಗಿ ಔಷಧಿಯನ್ನು ಸಿಂಪಡಣೆ ಮಾಡಿದ್ದರೆ ಖಂಡಿತವಾಗಿ ರೋಗ ಹೋಗುತ್ತಿತ್ತು. ನುಸಿರೋಗವನ್ನು ನಿವಾರಣೆ ಮಾಡಲು ಸಾಕಷ್ಟು ಹಣವನ್ನು ಕೊಡುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು. ಆದರೆ ಹೋದಸಲವೂ ಸರಿಯಾಗಿ ಹಣವನ್ನು ಕೊಡಲಿಲ್ಲ. ಇಂದು ಬೆಳಿಗ್ಗೆ ಸಹ ಸಪ್ಲಿಮೆಂಟರಿ ಬಿಲ್ಲನ್ನು ಪಾಸ್ ಮಾಡುವ ಸಂದರ್ಭದಲ್ಲಿ ಇದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಈ ಸಲವೂ ಕೇವಲ ೯ ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಆದರೆ ಒಂದು ತೆಂಗಿನ ಮರಕ್ಕೆ ನುಸಿ ರೋಗದ ನಿವಾರಣೆಗೆ ನಾಲ್ಕರಿಂದ ಐದು ರೂಪಾಯಿಗಳೇನು ಖರ್ಚು ಬರುತ್ತದೆ, ಆದರೆ ಇವತ್ತು ಕೊಟ್ಟಿರುವ ಹಣವು ಒಂದು ಮರಕ್ಕೆ ಮೂವತ್ತು ಪೈಸೆಯೂ ಬರುವುದಿಲ್ಲ. ಸಮಗ್ರವಾಗಿ ಹಣವನ್ನು ಕೊಟ್ಟು ಕೃಷಿ ನೀತಿ ಇರಬಹುದು, ತೋಟಗಾರಿಕಾ ನೀತಿ ಇರಬಹುದು ಇವೆಲ್ಲದರ ಬಗ್ಗೆ ಗಮನಹರಿಸಿದ್ದೇ ಆದರೆ ನುಸಿರೋಗ ಬರುವುದಿಲ್ಲ. ವಿಜ್ಞಾನಿಗಳು ಇದರ ಬಗ್ಗೆ ಹೇಳಿದ್ದಾರೆ. ಆದರೆ ಆ ಕೆಲಸವನ್ನು ಮಾಡಲು ಸರ್ಕಾರ ತಯಾರಿಲ್ಲ. ಹತ್ತು ಕೋಟಿ ಮರಗಳಿಗೆ ಕೇವಲ ೯ ಕೋಟಿ ರೂಪಾಯಿಗಳ ಹಣವನ್ನೇನು ಕೊಟ್ಟಿದ್ದೀರಿ ಅದು ಎರಡು ತಿಂಗಳಿಗೆ ಸಾಕಾಗುವುದಿಲ್ಲ. ರಾಜ್ಯದಲ್ಲಿರುವ ಎಲ್ಲಾ ತೆಂಗಿನ ಮರಗಳಿಗೆ ಸಂಪೂರ್ಣವಾಗಿ ಔಷಧಿ ಯನ್ನು ಸಿಂಪರಣೆ ಮಾಡಲು ಸುಮಾರು ೫೦-೬೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ತಾವು ಸಮಗ್ರವಾಗಿ ಔಷಧಿಯನ್ನು ಸಿಂಪರಣೆ ಮಾಡಿದ್ದೇ ಆದರೆ ಈ ರೋಗವನ್ನು ತಡೆಗಟ್ಟಬಹುದು. ನೀರಾವನ್ನು ಇಳಿಸಲು, ಹೆಂಡವನ್ನು ಕುಡಿಸಲು ರಾಜಕಾರಣಿಗಳಾದ ನಮಗೇನೂ ಭ್ರಮೆಯಿಲ್ಲ. ನಮಗೂ ಇದರ ಬಗ್ಗೆ ಅರಿವಿದೆ. ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಯಾವ ರೀತಿಯಲ್ಲಿ ಬಾಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ನಿಟ್ಟಿನಲ್ಲಿ ನಮಗೂ ಅರಿವಿದೆ. ಕೃಷಿ ನೀತಿಯ ಬಗ್ಗೆ ಹೊರ ದೇಶಗಳಲ್ಲಿ ಯಾವ ನೀತಿಯನ್ನು ಅನುಸರಿಸುತ್ತಿದ್ದಾರೆಂದು ಪತ್ರಿಕೆಯಲ್ಲಿ ಓದಿ ತಿಳಿದಿದ್ದೇನೆ. ತೆಂಗು ಇರಬಹುದು, ಅಡಿಕೆ ಇರಬಹುದು, ಕೃಷಿಯಿಂದ ರೈತನಿಗೆ ತೊಂದರೆಯಾದಂಥ ಸಂದರ್ಭದಲ್ಲಿ ನಷ್ಟವಾದಂಥ ಸಂದರ್ಭದಲ್ಲಿ ಒಂದು ಎಕರೆಗೆ ಎಂಟರಿಂದ ಹತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುವ ವ್ಯವಸ್

ಇಂಗ್ಲೆಂಡ್, ಅಮೇರಿಕಾ ಮತ್ತು ಇನ್ನಿತರ ದೇಶಗಳಲ್ಲಾಗುತ್ತಿದೆ. ಆದರೆ ನಮ್ಮ ಸರ್ಕಾರ ಇದುವರೆಗೆ ಕೃಷಿಗೆ ಒತ್ತು ಕೊಡುವ ಯಾವುದೇ ನೀತಿಯನ್ನು ಹಾಕಿಕೊಂಡಿಲ್ಲ. ಅದಕ್ಕೆ ವಿರುದ್ಧವಾಗಿರುವ ವ್ಯವಸ್ಥೆ ನಮ್ಮಲ್ಲಿದೆ. ತೆಂಗು, ಅಡಿಕೆ ಬೆಳೆಗಾರರಿಗೆ ಆಗಿರುವ ಅನ್ಯಾಯದ ಬಗ್ಗೆ ನಾನು ಸದನ ಪ್ರಾರಂಭವಾದಂದಿನಿಂದ ಹೇಳುತ್ತಿದ್ದೇನೆ. ಮಾರುಕಟ್ಟೆಯಲ್ಲಿ ತೆಂಗಿನ ಕಾಯಿಯ ತುಂಬಿದ ಟ್ರಾಕ್ಟರ್‌ಗಳು ಸುಮಾರು ಮೂರು ದಿವಸಗಳ ಕಾಲ ನಿಂತು ಸರಿಯಾದ ಬೆಲೆ ಇಲ್ಲದೆ ವಾಪಸ್ ಹೋಗಿರುವ ಬಗ್ಗೆ ಫೋಟೋ ಸಮೇತ ನಾನು ಮಾಹಿತಿಯನ್ನು ಕಳುಹಿಸಿದ್ದೆ. ಕಳೆದ ವರ್ಷದಿಂದ ಕೊಬ್ಬರಿಯನ್ನು ಸುಲಿಸದೇ ಬೆಲೆಗಾಗಿ ಕಾಯುತ್ತಾ ರೈತ ನಿರಾಶೆಗೆ ಒಳಪಡುತ್ತಿದ್ದಾನೆ. ಕೊಬ್ಬರಿ ಮಾರುಕಟ್ಟೆಯಲ್ಲಿ ಲಕ್ಷಗಟ್ಟಲೆ ಕೊಬ್ಬರಿ ಚೀಲವು ಮಾರಾಟವಾಗದೆಯೇ ವಾಪಸ್ ಬಂದಿರುವ ಬಗ್ಗೆ ನಿನ್ನೆ ವರದಿಯನ್ನು ತರಿಸಿಕೊಂಡಿದ್ದೇವೆ. ಆವರ್ತ ನಿಧಿಯನ್ನು ೭೫ ಕೋಟಿಯಿಂದ ೧೦೦ ಕೋಟಿಗೆ ಅನಂತರ ೪೦೦ ಕೋಟಿಗೆ ಜಾಸ್ತಿ ಮಾಡಿರುವ ಬಗ್ಗೆ ಮುಖ್ಯಮಂತ್ರಿಯವರು ಮತ್ತು ಕೃಷಿ ಸಚಿವರು ಪ್ರಸ್ತಾಪ ಮಾಡಿದ್ದರ ಬಗ್ಗೆ ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಆದರೆ ಇವತ್ತು ಹೆಚ್ಚುವರಿ ಬಜೆಟ್ ಪಾಸ್ ಮಾಡುವ ಸಂದರ್ಭದಲ್ಲಿ ೨೦೮ ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿದ್ದಾರೆ. ಈ ಬಗ್ಗೆ ನಾನು ತುಂಬಾ ಶ್ಲಾಘನೆ ಮಾಡುತ್ತೇನೆ. ಆದರೆ ಇವತ್ತಿನವರೆಗೂ ತುರುವೇಕೆರೆ, ತಿಪಟೂರು, ಅರಸೀಕೆರೆ, ಹಾಸನ, ಚನ್ನರಾಯಪಟ್ಟಣ, ಗಂಡಸಿ, ಚಿಕ್ಕನಾಯ್ಕನಹಳ್ಳಿ, ಗುಬ್ಬಿ, ತುಮಕೂರು ಯಾವುದೇ ಇರಬಹುದು, ಈ ಸ್ಥಳಗಳಲ್ಲಿ ಮಾರ್ಕೆಟ್‌ಗೆ ಬರುವ ಕೊಬ್ಬರಿಯನ್ನು ೨೦೦೦ ರೂಪಾಯಿಗಳ ಧಾರಣೆಗೂ ಕೊಳ್ಳಲು ಯಾವ ವರ್ತಕನೂ ಮುಂದೆ ಬರುತ್ತಿಲ್ಲ. ರೈತ ಕಂಗಾಲಾಗಿ ಆತ್ಮಹತ್ಯೆಗೆ ಮುಂದಾಗುತ್ತಿದ್ದಾನೆ. ನಫೆಡ್ ಮೂಲಕ ಮಾಡಬಹುದು ಎಂದು ಹಿರಿಯ ಸಚಿವ ಮಾನ್ಯ ಕಾಗೋಡು ತಿಮ್ಮಪ್ಪನವರು ಹೋದ ಸಲವೂ ಹೇಳಿದ್ದರು. ನಾನೂ ಕೂಡ ಒಪ್ಪಿದ್ದೆ. ಎರಡು ಮೂರು ತಿಂಗಳು ಅವಕಾಶ ಮಾಡಿಕೊಟ್ಟಿದ್ದರು, ಆದರೆ ೬ ತಿಂಗಳಾದರೂ ಚೆಕ್‌ಗಳನ್ನು ಕೊಡದೆ, ಕೊಟ್ಟ ಚೆಕ್‌ಗಳು ಬೌನ್ಸಾದುವು. ತೆಂಗಿನ ಕಾಯಿ ಬೆಳೆಯುವ ರೈತ ಏನಾದ ಸ್ವಾಮಿ? ಆತ್ಮಹತ್ಯೆ ಮಾಡಿಕೊಳ್ಳಲು ಹೊರಟ. ಇವತ್ತಿಗೂ ೭೬ ಲಕ್ಷ ರೂಪಾಯಿಗಳ ಹಣ ಕೊಡದೆ ಅದನ್ನು ಪಡೆಯಲು ರೈತ ಹೋರಾಟ ಮಾಡುತ್ತಿದ್ದಾನೆ. ಈ ವ್ಯವಸ್ಥೆಯಲ್ಲಿ ನಾವು ಮಾನ್ಯ ಕೃಷಿ ಸಚಿವರಿಗೆ ಹೇಳಿದೆವು. ಬನ್ನಿ, ನಮ್ಮ ಮಾರ್ಕೆಟ್‌ಗಳಿಗೆ ಹೋಗೋಣ, ಚರ್ಚೆ ಮಾಡೋಣ ಎಂದು. ಮಾನ್ಯ ತೋಟಗಾರಿಕೆ ಸಚಿವರು ಒಂದು ಸಲ ಸಭೆ ಕರೆದರು. ಅಲ್ಲಿ ಸರಿಯಾದ ಮಾತುಕತೆ ನಡೆಯಲಿಲ್ಲ, ಸಭೆ ವಿಫಲವಾಯಿತು. ಕೊಬ್ಬರಿಗಳನ್ನು ತುಂಬಲಿಕ್ಕೆ ವೇರ್‌ಹೌಸ್‌ಗಳಿಲ್ಲ ಸ್ವಾಮಿ. ಇವತ್ತು ಅದನ್ನು ಪುರಭವನ, ಛತ್ರಗಳಲ್ಲಿ ತುಂಬಿರುವುದನ್ನು ನೋಡುತ್ತಿದ್ದೇವೆ. ಅಲ್ಲಿಗೆ ಇಲಿ ಹೆಗ್ಗಣಗಳು ಬಿದ್ದಿವೆ. ಇದುವರೆಗೂ ಅಲ್ಲಿಂದ ರವಾನೆ ಮಾಡಲು ಸಾಧ್ಯವಾಗುತ್ತಿಲ್ಲ. ಇಂಥ ಪರಿಸ್ಥಿತಿ ಬಂದಿದೆ. ಅದಕ್ಕೇ,

ಸರ್ಕಾರ ಯಾವರೀತಿ ಚಿಂತನೆ ಮಾಡುತ್ತಿದೆ? ಸ್ವಾಮಿ ೪೦, ೫೦ ವರ್ಷಗಳಿಂದ ಇಂಥ ಆಘಾತ ತೆಂಗು ಬೆಳೆಗಾರರಿಗೆ ಆಗಿರಲಿಲ್ಲ. ಮಾನ್ಯ ರೇಷ್ಮೆ ಸಚಿವರೂ ನಾನು ಹೇಳುವುದನ್ನು ಗಾಢವಾಗಿ ಕೇಳುತ್ತಿದ್ದಾರೆ, ಅವರೂ ಹೇಳಿದರು. ಲಕ್ಷ್ಮೀನಾರಾಯಣರವರೇ ನನ್ನದು ಎರಡು ಸಾವಿರ ತೆಂಗಿನ ಗಿಡಗಳು ಇದೆ, ನುಸಿಗೆ ತುತ್ತಾಗಿದೆ ಎಂದು ನೊಂದು ಹೇಳಿದರು. ಆಗ ನನಗೆ ಬಹಳ ನೋವಾಯಿತು, ಏಕೆಂದರೆ ಮಾನ್ಯ ಸಚಿವರ ತೋಟಕ್ಕೂ ಈ ರೀತಿ ಆಘಾತವಾಯಿತಲ್ಲಾ ಎಂದು.

ಶ್ರೀ ಎಂ.ಮಹಾದೇವ್: ನುಸಿರೋಗಕ್ಕೆ ಸಚಿವರ ತೋಟವಾದರೇನು? ಗವರ್ನರ್ ತೋಟವಾದರೇನು? ಎಲ್ಲರ ತೋಟಕ್ಕೂ ಅದು ಅಂಟುತ್ತದೆ!

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ನಿಮ್ಮ ತೋಟಕ್ಕೆ ನುಸಿ ತಗುಲಿದ್ದು ನನಗೆ ನೋವಿನ ಸಂಗತಿ. ಅದಕ್ಕಾಗಿ ತಾವೆಲ್ಲಾ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದನೆ ಮಾಡಿ, ೯ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಸಾಕಾಗುವುದಿಲ್ಲ. ಇದರ ಬಗ್ಗೆ ಗಾಢವಾಗಿ ವಿಚಾರ ಮಾಡಬೇಕಾಗಿದೆ. ಅದಕ್ಕಾಗಿಯೇ ಮಾನ್ಯ ಕೃಷಿ ಸಚಿವರೂ ಮತ್ತು ಮಾನ್ಯ ತೋಟಗಾರಿಕೆ ಸಚಿವರೂ ಸೇರಿ ಜಂಟಿಯಾಗಿ ಪ್ರವಾಸ ಮಾಡಲಿ. ತೆಂಗು ಬೆಳೆದಿರುವ ರೈತರ ಸಭೆಗಳನ್ನು ಮಾಡಿ ಯಾವ ರೀತಿ ಇದನ್ನು ನಿವಾರಣೆ ಮಾಡಲು ಅವರು ಒಂದು ನಿರ್ಧಾರಕ್ಕೆ ಬರಬೇಕು. ಇನ್ನು ನೀರಾ ಇಳಿಸುವ ಬಗ್ಗೆ ಸದನದಲ್ಲಿ ಎರಡು ವಿಭಿನ್ನ ಚರ್ಚೆಗಳಾಯಿತು; ನಿಯಮ ೬೯ರ ಅಡಿ ನಮಗೆ ಚರ್ಚೆಗೆ ೧೫ ದಿವಸಗಳ ಹಿಂದೆ ಅವಕಾಶ ಕೊಟ್ಟರೂ, ಇವತ್ತೂ ಕೂಡ ಧರಣಿ ಮಾಡಿ ಸಮಯವನ್ನು ತೆಗೆದುಕೊಳ್ಳುವುದು ನಮಗೇನೋ ಸಮಾಧಾನಕರ ಎನಿಸಲಿಲ್ಲ. ವಿರೋಧ ಪಕ್ಷದವರು ಹೇಳುವುದನ್ನು ಕೇಳಿ ಅದಕ್ಕೆ ತಕ್ಕಂತೆ ಸ್ಪಂದಿಸುವುದು ಸರ್ಕಾರದ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಆದರೆ ರೈತರ ಬಗ್ಗೆ ಮಾತನಾಡಲು ಧರಣಿ ಮಾಡಿ ಅವಕಾಶ ಪಡೆದದ್ದು ವಿಷಾದನೀಯವೆಂದು ಹೇಳಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹಸಚಿವರು): ಚರ್ಚೆಗೆ ಯಾರೂ ಅಡ್ಡಿ ಬಂದಿಲ್ಲ. ನಾವು ಒಪ್ಪಿಕೊಳ್ಳುತ್ತಿರಲಿಲ್ಲ. ನೋಡೋಣ, ಐದೂವರೆಯಾದ ಮೇಲೆ ಚರ್ಚೆ ಪ್ರಾರಂಭವಾದ ಮೇಲೆ ನಿಮ್ಮ ನಿಯತ್ತು ಹೇಗಿರುವುದೋ ನೋಡೋಣ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಹಿರಿಯ ಸಚಿವರಾದ ನಿಮಗೆಲ್ಲಾ ಗೊತ್ತಿದೆ. ನಿಜವಾಗಲೂ ನಮಗೆ ಅದರ ಬಗ್ಗೆ ಕಾಳಜಿ ಇಲ್ಲ. ಮೊನ್ನೆ ಮಾನ್ಯ ಅಧ್ಯಕ್ಷರಿಗೆ ನಾನೊಂದು ಪತ್ರ ಕೊಟ್ಟೆ. ಇಲ್ಲಿ ತೋರಿಸಬೇಕೆಂದು ನೀರಾ ಬಾಟಲ್ ತಂದೆ, ನಮ್ಮ ಕ್ಷೇತ್ರದಲ್ಲಿ ರೈತರು ನೀರಾ ಮಾರುತ್ತಿರುವ ಕಡೆಯಿಂದ ಸ್ವಲ್ಪ ತಂದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀರಾ ಇಳಿಸುವುದಕ್ಕೆ ನಾವು ಅಡ್ಡಿ ಬರಬೇಕೆಂದು

ಉದ್ದೇಶ ಇಲ್ಲ. ಸ್ವಲ್ಪ ಪ್ರಾಕ್ಟಿಕಲ್ಲಾಗಿ ಹೇಳಿ. ತಾವೇ ಹೇಳಿದಂತೆ ರಾಜ್ಯದಲ್ಲಿ ೯ ಕೋಟಿ ತೆಂಗಿನ ಗಿಡಗಳಿವೆ. ಅದರಲ್ಲಿ ನುಸಿಗೆ ತುತ್ತಾಗಿರುವುದು ಸುಮಾರು ೨ ಕೋಟಿ, ತಲಾ ಒಂದು ಗಿಡದಿಂದ ದಿನಕ್ಕೆ ಒಂದೂವರೆ ಲೀಟರ್‌ನಂತೆ ೩ ಕೋಟಿ ಲೀಟರ್ ಆಯಿತು. ಅರ್ರ್ಯಾಕ್, ಬೀರು ಐಎಂಎಫ್ ಎಲ್ಲಾ ಖರ್ಚಾಗುವುದು ನಮ್ಮಲ್ಲಿ ವರ್ಷಕ್ಕೆ ೧೭ ಕೋಟಿ ಲೀಟರ್ ಮಾತ್ರ. ಆದರೆ ಒಂದು ದಿನಕ್ಕೆ ನೀರಾವನ್ನು ಮೂರು ಕೋಟಿ ಲೀಟರ್ ಇಳಿಸುತ್ತೀರಿ. ಆಗ ಮಕ್ಕಳಿಂದ ಹಿಡಿದು ದೊಡ್ಡವರೆಲ್ಲರಿಗೂ ನೀರಾ ಕುಡಿಯಲೇಬೇಕೆಂದು ಕಂಪಲ್ಸರಿ ಮಾಡ ಬೇಕಾಗುತ್ತದೆ. ಎರಡು ಕೋಟಿ ಹೋಗಿ ಮೂರು ಕೋಟಿಗೆ ಬಂದರೆ ಒಂದು ಕೋಟಿ ಎಕ್ಸೆಸ್ ಆಗಿಬಿಡುತ್ತದೆ. ರೇಷನ್‌ಕಾರ್ಡ್‌ನಲ್ಲಿ ಸಕ್ಕರೆ, ಸೀಮೆಎಣ್ಣೆ ಹೇಗೆ ಕಡ್ಡಾಯವಾಗಿ ಖರೀದಿಸುವರೋ ಹಾಗೆ ದಿನಕ್ಕೆ ಒಬ್ಬರಿಗೆ ಒಂದು ಲೀಟರ್ ನೀವು ಕೊಳ್ಳಲೇಬೇಕು ಎಂದು ಕಡ್ಡಾಯ ಮಾಡಿದಾಗ ಈ ಸಮಸ್ಯೆಗೆ ಪರಿಹಾರ ಸಿಗುವುದು. ನೀವು ಇನ್ನೊಂದು ಮಾತು ಹೇಳಿದಿರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕಾಗಿ ಕೊಟ್ಟಂತಹ ಹಣ ಕಡಿಮೆಯಿದೆ, ತಲಾ ಗಿಡಕ್ಕೆ ೧೫ ರೂಪಾಯಿಗಳನ್ನು ಖರ್ಚು ಮಾಡಲು ರೈತನಿಂದ ಆಗುವುದಿಲ್ಲ. ಅದಕ್ಕಾಗಿ ೯ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ನೀವು ೨೦, ೩೦, ೫೦ ಕೋಟಿ ರೂಪಾಯಿಗಳನ್ನು ಕೇಳಿ, ಆಗ ಅದನ್ನು ಸರ್ಕಾರ ಏನಾದರೂ ಕನ್‌ಸಿಡರ್ ಮಾಡಬಹುದು. ಆದರೆ ಯಾವುದೂ ಪ್ರಾಕ್ಟಿಕಲ್ಲಾಗಿ ಇಲ್ಲ. ಅದರ ಬಗ್ಗೆ ನಮಗೆ ಗೊತ್ತಿದ್ದೂ ಹಠ ಹಿಡಿದು ಕೇಳುತ್ತೇವೆಂದರೆ ಇದರಿಂದ ಯಾರೂ ಕನ್ವಿನ್ಸ್ ಆಗುವುದಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರು ಏನು ಹೇಳಿದರೋ ಅದನ್ನು ಸ್ವಲ್ಪ ಮಾರ್ಪಾಡು ಮಾಡಬೇಕೆಂದು ನನ್ನ ಅನಿಸಿಕೆ. ಏಕೆಂದರೆ ಇವತ್ತು ನೀರಾ ಇಳಿಸಬೇಕೆನ್ನಲು ಕಾರಣ ಈ ನುಸಿರೋಗವನ್ನು ತಡೆಗಟ್ಟಬೇಕೆಂಬುದಷ್ಟೆ. ನುಸಿರೋಗ ಹೋಗುತ್ತದೆಂದರೆ ಒಂದೆರಡು ತಿಂಗಳನಂತರ ನೀರಾ ಇಳಿಕೆ ಪ್ರಮಾಣ ಕಡಿಮೆಯಾಗುತ್ತದೆ. ನುಸಿರೋಗ ತಡೆಗಟ್ಟಿದಾಗ ನೀರಾ ಇಳಿಸುವ ಅವಶ್ಯಕತೆ ಇರುವುದಿಲ್ಲ. ನೀರಾವನ್ನು ಉಪಯೋಗಿಸಲೇಬೇಕೆಂದು ಇವತ್ತು ಕಂಪಲ್‌ಷನ್ ಇಲ್ಲ, ನೀರಾ ಇಳಿಸಲು ರೈತನಿಗೆ ನೀವು ಪರವಾನಗಿ ಕೊಟ್ಟರೆ ಕನಿಷ್ಟ ಪಕ್ಷ ತೆಂಗಿನ ಗಿಡವನ್ನಾದರೂ ಉಳಿಸಿಕೊಳ್ಳಲು ಅವನಿಗೆ ಪರವಾನಗಿ ಕೊಟ್ಟಂತಾಗುವುದು. ನಾಳೆ ನೀರಾ ಇಳಿಸಲು ನೀವು ಅನುಮತಿ ಕೊಟ್ಟರೆ, ನೀವು ನೀರಾವನ್ನು ಕೊಳ್ಳಿರಿ ಎಂದು ಜನರನ್ನಾಗಲೀ, ಸರ್ಕಾರವನ್ನಾಗಲೀ ಯಾರೂ ಬಲಾತ್ಕಾರ ಮಾಡುವುದಿಲ್ಲ. ಸರ್ಕಾರದ ಉತ್ಪನ್ನವನ್ನು ಹೇಗೆ ವಿತರಿಸುವುದು ಎಂಬ ಧಾಟಿಯಲ್ಲಿ ತಾವು ಮಾತನಾಡಿದರೆ ಸರಿಯಲ್ಲ. ಏಕೆಂದರೆ ಇವತ್ತೊಂದು ರಾಂಗ್ ಸಿಗ್ನಲ್ ಹೋಗುತ್ತಿದೆ. ಏನೆಂದರೆ ನೀರಾ ಇಳಿಸಲು ಅನುಮತಿ ಕೊಟ್ಟರೆ ಹಾಗೆ ಇಳಿಸಿದ ನೀರಾವನ್ನು

ವಿತರಿಸಲು ತೊಂದರೆಯಾಗುತ್ತದೆ, ಆಗ ಮತ್ತೆ ರೈತರಲ್ಲಿ ಗೊಂದಲ ಉದ್ಭವಿಸುವುದು ಎಂಬ ಭಾವನೆ ಬರಬಾರದು. ನೀರಾ ಇಳಿಸಬೇಕೆನ್ನುವ ನಮ್ಮ ಬೇಡಿಕೆ ನುಸಿರೋಗವನ್ನು ತಡೆಗಟ್ಟಬೇಕು ಅನ್ನುವುದಕ್ಕೆ ಮಾತ್ರ, ಮತ್ತೆ ನುಸಿ ರೋಗವನ್ನು ತಡೆಗಟ್ಟಿದ ತಕ್ಷಣ ನೀರಾ ಇಳಿಸುವುದೂ ನಿಲ್ಲುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ನಾನು ಹೇಳಿದ್ದನ್ನು ತಪ್ಪು ತಿಳಿದಿರಿ. ಅರ್ರ್ಯಾಕನ್ನು ಕುಡಿದರೆ ಆರೋಗ್ಯ ಕೆಡುವುದೆಂದು ಮಾನ್ಯ ಲಕ್ಷ್ಮೀನಾರಾಯಣ್‌ರವರೇ ಅದನ್ನು ಪ್ರಸ್ತಾಪಿಸಿದ್ದು. ಆಗ ನಾನು, ಇದು ಒಳ್ಳೆಯದು ಎಂದು ನಾವು ಭಾವನೆ ಮಾಡುವುದರಿಂದ ಇಷ್ಟು ಗಿಡಗಳಿಂದ ಇಷ್ಟು ಕೋಟಿ ಲೀಟರ್ ಉತ್ಪಾದನೆಯಾಗುವುದು, ಇದನ್ನು ಯಾವುದೇ ರೈತ ಎಲ್ಲಿಗೆ ಒಯ್ದು ಮಾರುವುದೆಂದು ಹೇಳಿದೆ. ಅದಕ್ಕೊಂದು ಕಂಪಲ್‌ಸರಿ ಆ್ಯಕ್ಟ್ ಏನಾದರೂ ಮಾಡಬೇಕಾ ಎನ್ನತಕ್ಕ ಪ್ರಶ್ನೆ ಬಂದಿದೆ. ಅದಕ್ಕೆ ನೀವು ಅದನ್ನು ಬೇರೆ ಕಡೆಗೆ ಡೈವರ್ಟ್ ಮಾಡುವುದು ಬೇಡ. ಅವರು ಹೇಳಿದ್ದನ್ನು ನಾನು ಹೇಳಿದೆ.

ಉಪಾಧ್ಯಕ್ಷರು: ಲಕ್ಷ್ಮೀನಾರಯಣರವರೇ, ಮುಗಿಸಿಬಿಡಿ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಮುಗಿಸಿಬಿಡುತ್ತೇನೆ ಮಾನ್ಯ ಉಪಾಧ್ಯಕ್ಷರೇ, ಏಕೆಂದರೆ ಇದೊಂದು ಗಂಭೀರವಾದಂಥ ವಿಷಯ.

ಉಪಾಧ್ಯಕ್ಷರು: ಗಂಭೀರವಾದ ವಿಷಯವನ್ನು ಬೇರೆಯವರೂ ಮಾತನಾಡುತ್ತಾರೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಹಿರಿಯ ಸಚಿವರು ಹೇಳಿರತಕ್ಕ ಮಾತಿಗೆ ಹೆಂಡ ಕುಡಿದರೆ ಆರೋಗ್ಯ ಕೆಡುತ್ತದೆ ಎನ್ನತಕ್ಕದ್ದು ಅಷ್ಟೆ. ಮೊನ್ನೆ ನಾನು ಮಾನ್ಯ ಅಧ್ಯಕ್ಷರಿಗೊಂದು ಪತ್ರವನ್ನು ಬರೆದೆ. ನಾನು ಇಲ್ಲಿಗೆ ಬರುವಂಥ ಸಂದರ್ಭದಲ್ಲಿ ರೈತರೇ ನೀರಾ ಇಳಿಸತಕ್ಕದ್ದನ್ನು ನೋಡಿ ನನಗೊಂದು ಬಾಟಲ್ ಕೊಟ್ಟು ಕಳುಹಿಸಿದರು. ನಾನು ಅದನ್ನು ವಿಧಾನಸೌಧದವರೆಗೂ ತೆಗೆದುಕೊಂಡು ಬಂದೆ. ಅದರ ಪರ್ಮಿಷನ್‌ಗೆ ಲೆಟರ್ ಮೂಲಕ ನಾನು ಕೊಟ್ಟಿದ್ದೇನೆ. ಅದನ್ನು ತೋರಿಸುತ್ತೇನೆ. ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ನೀವು ತರುವ ಹೊತ್ತಿಗೆ ಅದು ಸೇಂದಿಯಾಗಿ ಹೋಗಿತ್ತು. ನೀವು ಮುಂಜಾನೆ ತಂದಿಲ್ಲ, ಆರು ಗಂಟೆಗೆ ತಂದಿದ್ದೀರಾ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ನಾನು ಹತ್ತೂವರೆಗೆ ಅದನ್ನು ತಂದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಹತ್ತೂವರೆಗೆ ತಂದಿರಿ ಅದರ ಕತೆ ಮುಗಿದು ಹೋಗಿತ್ತು.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ನಿನ್ನೆ ತಾನೆ ಸರ್ಕಾರ ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡಿದೆ, ಯಾವುದಕ್ಕೂ ಅವಕಾಶ ಕೊಡುವುದಿಲ್ಲವೆಂದು ಹೇಳಿ, ಪತ್ರಿಕೆಯಲ್ಲಿ ಬಂದಿರುವುದನ್ನೇ ಒಂದು ಮಾಹಿತಿಯಾಗಿ ತೆಗೆದುಕೊಂಡು ಸನ್ಮಾನ್ಯ ತೋಟಗಾರಿಕಾ ಸಚಿವರೇ ಇದನ್ನು ಹೇಳಿದ್ದಾರೆ. ಸಿಎಫ್‌ಟಿಆರ್ಐಗೆ ನಾವು ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೇವೆ, ಅದು ಬಂದನಂತರ ಪರಿಶೀಲನೆ ಮಾಡುತ್ತೇವೆಂದು ಪತ್ರಿಕೆಯಲ್ಲಿ ವರದಿ ಇದೆ. ಏಕೆಂದರೆ ನಮ್ಮ ರೈತರ ಬಗ್ಗೆ ಇರತಕ್ಕ ಕಾಳಜಿ ಮೇಲೆ ತಾವು ಸದನದಲ್ಲಿ ಕೊಟ್ಟಿರತಕ್ಕದ್ದು ಮತ್ತು ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕದ್ದು ಈಗಾಗಲೇ ನಾವು ವಿಜ್ಞಾನಿಗಳಿಗೆ ತನಿಖೆಗೆ ಕಳುಹಿಸಿದ್ದೇವೆ. ಅದು ಬಂದ ನಂತರ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥದ್ದು. ಆ ದೃಷ್ಟಿಯಿಂದ ನಾನು ಮಾತನಾಡಿದ್ದೇನೆಯೇ ಹೊರತು ಇವತ್ತು ನೀರಾ ಇಳಿಸತಕ್ಕ ಉದ್ದೇಶ ರೈತರಿಗೆ ಕುಡಿಸುವುದಕ್ಕಲ್ಲ. ವಿಜ್ಞಾನಿಗಳು ಹೇಳಿರುವ ಪ್ರಕಾರ ನುಸಿ ಪೀಡೆಯನ್ನು ಕಳೆಯುವುದಕ್ಕೆ ನೀರಾ ಇಳಿಸತಕ್ಕ ಒಂದು ಪದ್ಧತಿ ಇದೆ ಎಂದು ಹೇಳಿದ ಮೇಲೆ ಇಡೀ ರಾಜ್ಯದಲ್ಲಿ ವಾತಾವರಣ ಕಲುಷಿತವಾಗಿರತಕ್ಕದ್ದು. ಈಗಾಗಲೇ ಬಹುತೇಕ ಕಡೆಗಳಲ್ಲಿ ನೀರಾ ಇಳಿಸುತ್ತಿದ್ದಾರೆ. ನಮ್ಮ ಅಧಿಕಾರಿಗಳೆಲ್ಲ ಮೂಕಪ್ರೇಕ್ಷಕರಾಗಿ ಕುಳಿತುಬಿಟ್ಟಿದ್ದಾರೆ. ಯಾರೂ ಕೂಡ ರೈತರ ಬಳಿ ಹೋಗುವುದಕ್ಕೆ ಆಗುತ್ತಿಲ್ಲ. ಆ ದೃಷ್ಟಿಯಲ್ಲಿ ಈಗಾಗಲೇ ಅನೇಕ ಕಡೆಗಳಲ್ಲಿ ನೀರಾ ಇಳಿಸುತ್ತಿದ್ದಾರೆ. ನಮ್ಮ ತುಮಕೂರು ಕಡೆಯಿಂದಲೂ ಸಾಕಷ್ಟು ವರದಿ ಬರುತ್ತಿದೆ, ಅಲ್ಲಿ ನೀರಾ ಇಳಿಸುತ್ತಿದ್ದಾರೆ, ಇಲ್ಲಿ ಇಳಿಸುತ್ತಿದ್ದಾರೆ ಎಂದು ಹೇಳಿ. ಪತ್ರಿಕೆಯಲ್ಲೂ ಸಹಾ ಇದು ಪ್ರಕಟವಾಗುತ್ತಿರತಕ್ಕಂಥಾದ್ದು ಇದೆ. ಆ ದೃಷ್ಟಿಯಿಂದ ರೈತ ಬೆಳೆದ ಪದಾರ್ಥಗಳಿಗೆ ಬೆಲೆ ಇಲ್ಲದೆ ಕಂಗಾಲಾಗಿರತಕ್ಕಂಥ ಸಂದರ್ಭದಲ್ಲಿ ಅವನಿಗೆ ದಿವಸಕ್ಕೆ ಕಡಿಮೆಯೆಂದರೆ ೩೦-೪೦ ರೂಪಾಯಿಗಳು ಒಂದು ಮರದಿಂದ ದುಡ್ಡು ಬರುವ ಸಂದರ್ಭದಲ್ಲಿ ಅವನಿಗೆ ಖರ್ಚಿಗೆ ಆಗತಕ್ಕ ವ್ಯವಸ್ಥೆಗೋಸ್ಕರ ಈ ನೀರಾ ಇಳಿಸುವುದು ಒಂದು ಪದ್ಧತಿಯಾಗಬೇಕೆನ್ನುವುದು ನಮ್ಮ ಆಗ್ರಹ ಇದೆ. ಅದಕ್ಕೋಸ್ಕರ ನಾನು ಏನು ಹೇಳಿದೆ, ಹೊರದೇಶಗಳಲ್ಲಿರುವ ಒಂದು ಪದ್ಧತಿಯಂತೆ ಆ ರೈತ ಹಾಕಿರತಕ್ಕ ಬೆಳೆ ಯಾವುದೇ ಆಗಿರಲಿ, ಲಾಸ್ ಆಗಿದ್ದಂಥ ಸಂದರ್ಭದಲ್ಲಿ ಎಕರೆಗೆ ಎಂಟರಿಂದ ಹತ್ತು ಸಾವಿರ ರೂಪಾಯಿಗಳಷ್ಟು ಹಣವನ್ನು ನೀಡುವಂಥಾದ್ದು, ಸರ್ಕಾರ ಇದಕ್ಕೆ ತಕ್ಷಣ ಮುಂದಾಗತಕ್ಕಂಥಾದ್ದು ಅವಶ್ಯಕ. ಇಂಥ ವಿಚಾರಧಾರೆಗಳನ್ನು ತೆಗೆದುಕೊಂಡು ನಮ್ಮ ಸರ್ಕಾರ ಏಕೆ ರೈತರ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ? ಇದಕ್ಕೆ ಈ ರೀತಿಯಾಗಿ ಖಂಡಿತವಾಗಿಯೂ ಸ್ಪಂದಿಸಬೇಕು. ಇದನ್ನು ನಾವು ಆಗ್ರಹ ಮಾಡುತ್ತಿರತಕ್ಕಂಥಾದ್ದು ಮಾನ್ಯ ಉಪಾಧ್ಯಕ್ಷರೆ. ಅದಕ್ಕೋಸ್ಕರ ಕೃಷಿ ಮಂತ್ರಿಗಳು ಇಲ್ಲಿ ಇದ್ದಾರೆ, ಇವತ್ತು ಎರಡು ವಿಷಯಗಳು ಏನಿದೆ ಅದರಲ್ಲಿ ಕೊಬ್ಬರಿ ಬಗ್ಗೆಯೂ ತೀರ್ಮಾನವಾಗಬೇಕು. ಇದರ ಬಗ್ಗೆ ಕೂಡ ರೈತ ಕಂಗಾಲಾಗಿರತಕ್ಕದ್ದು ಇದೆ. ಕಡಲೆಕಾಯಿ ವಿಷಯದಲ್ಲಿ ಶಿರಾದಲ್ಲಿ ಒಂದು ಘಟನೆಯಾಗಿ ಐದಾರು ಜನರು ಸತ್ತಿರತಕ್ಕ ಸಂದರ್ಭದಲ್ಲಿ ನಮ್ಮ ತಿಪಟೂರು,

ತುರುವೇಕೆರೆ, ಅರಸೀಕೆರೆ ಮಾರುಕಟ್ಟೆಗಳು ಇರಬಹುದು, ಈ ಕಡೆ ಕೂಡ ಇದೇ ರೀತಿ ತಕ್ಷಣ ಆಗುವ ವ್ಯವಸ್ಥೆ ಇದೆ. ಅದಕ್ಕೋಸ್ಕರ ನಾನು ಮಾನ್ಯ ಕೃಷಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಮಾನ್ಯ ತೋಟಗಾರಿಕಾ ಸಚಿವರೂ ಕೂಡ ಇಲ್ಲಿ ಇದ್ದಾರೆ, ಮಾನ್ಯ ಕೃಷಿ ಮಂತ್ರಿಗಳು ಅವರು ಜಿಲ್ಲಾ ಮಂತ್ರಿಗಳೂ ಕೂಡ ಇದ್ದಾರೆ. ದಯಮಾಡಿ ಶೀಘ್ರವೇ ನಮ್ಮ ತಿಪಟೂರು, ತುರುವೇಕೆರೆಗೆ ಆಗಮಿಸಿ ರೈತರ ಕಷ್ಟ ಏನಿದೆ ಎನ್ನುವುದನ್ನು ವಿಚಾರಣೆ ಮಾಡಿ ಅವರಿಗೆ ಅನುಕೂಲಕರವಾದ ವಾತಾವರಣವನ್ನು ಮಾಡಿಕೊಡಬೇಕು. ಸರ್ಕಾರ ಈಗಾಗಲೇ ೨೦೮ ಕೋಟಿ ರೂಪಾಯಿಗಳನ್ನು ಆವರ್ತ ನಿಧಿಯನ್ನು ತೆಗೆದಿದೆ ಎನ್ನುವುದನ್ನು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೋಸ್ಕರ ಸರ್ಕಾರದಲ್ಲಿ ಹಣ ಇರುವ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ನಫೆಡ್ ಬಗ್ಗೆ ವಿಚಾರಿಸಿ ಎಂದು ಹೇಳಿದರು. ನಾನು ಹೇಳುವುದಿಷ್ಟೆ, ಕರ್ನಾಟಕ ಸರ್ಕಾರ ಕರ್ನಾಟಕದ ಜನತೆಗೆ ಏನಾದರೂ ಉಪಕಾರ ಮಾಡುವಲ್ಲಿ ವಿಫಲವಾಗಿರತಕ್ಕದ್ದು, ಅದಕ್ಕೋಸ್ಕರ ದಯಮಾಡಿ ಶೀಘ್ರವೇ ನಾಳೆಯಿಂದಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಕ್ರಮ ತೆಗೆದುಕೊಂಡು ಕೊಬ್ಬರಿ ಬೆಳೆಗಾರರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳಿ ನೀರಾ ಇಳಿಸುವುದಕ್ಕೆ ಅನುಮತಿ ನೀಡಬೇಕೆಂದು ನಾನು ಆಗ್ರಹ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಬೈರೇಗೌಡ (ವೇಮಗಲ್): ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಬಹಳ ಮುಖ್ಯವಾದ ವಿಚಾರ ರೈತರ ದೃಷ್ಟಿಯಿಂದ ನಡೆಯುತ್ತಿದೆ. ರೈತ ಕೇವಲ ಒಂದೇ ಬೆಳೆಯನ್ನು ಬೆಳೆದರೆ ಅವನ ಆರ್ಥಿಕ ಸ್ಥಿತಿ ಸುಧಾರಣೆಯಾಗುವುದಕ್ಕೆ ಸಾಧ್ಯವೇ ಇಲ್ಲ. ಅನೇಕ ಬೆಳೆಗಳನ್ನು ಬೆಳೆಯಬೇಕಾಗುತ್ತದೆ. ಹಣ್ಣು ಬೆಳೆಯುತ್ತಾರೆ, ತರಕಾರಿಯನ್ನು ಬೆಳೆಯುತ್ತಾರೆ, ಮತ್ತೆ ದವಸಧಾನ್ಯಗಳನ್ನು ಬೆಳೆಯುತ್ತಾರೆ, ತೆಂಗು ಬೆಳೆಯುತ್ತಾರೆ, ಹೀಗೆ ಅನೇಕ ಬೆಳೆಗಳನ್ನು ಬೆಳೆಯುತ್ತಾರೆ. ಯಾವ ಬೆಳೆಯೂ ಕೂಡ ರೋಗಮುಕ್ತವಾಗಿರತಕ್ಕಂಥಾದ್ದು ಯಾವುದೂ ಇಲ್ಲ. ಎಲ್ಲಾ ಬೆಳೆಗಳೂ ಕೂಡ ಒಂದಲ್ಲ ಒಂದು ರೋಗದಿಂದ ನರಳುತ್ತಿರತಕ್ಕಂಥಾದ್ದು ಪ್ರಕೃತಿಯಲ್ಲಿ ಬಂದಿರತಕ್ಕಂಥ ವಿಚಾರ ಇದು. ಏಕೆಂದರೆ ಪ್ರಕೃತಿಯಲ್ಲಿ ಬರೀ ಮನುಷ್ಯನೇ ಇಲ್ಲ. ಪರಿಸರದಲ್ಲಿ ಬರೀ ಮನುಷ್ಯನೇ ಇಲ್ಲ. ಗಿಡ, ಸಸ್ಯ, ಮರ, ಪ್ರಾಣಿ ಹೀಗೆ ಅನೇಕ ವಿಧವಾದಂಥಾದ್ದು ಇವೆಲ್ಲವೂ ಕೂಡ ಇದ್ದಾವೆ. ಇವೆಲ್ಲಕ್ಕೂ ಕೂಡ ಒಂದು ಸಮತೋಲನವನ್ನು ಕಾಪಾಡಿಕೊಳ್ಳತಕ್ಕ ಒಂದು ವ್ಯವಸ್ಥೆ ಪ್ರಕೃತಿಯಲ್ಲಿ ಇದೆ. ಆದರೆ ಜನಸಂಖ್ಯೆ ಹೆಚ್ಚಾದ ಹಾಗೆ ನಾವು ಸ್ವಾಭಾವಿಕವಾಗಿರತಕ್ಕ ವಿಧಾನಗಳನ್ನು ಮರೆತು ನಾವು ರೈತರಾಗಿತಕ್ಕಂಥವರು ಕೃಷಿ ಮಾಡತಕ್ಕ ವಿಧಾನವನ್ನು ಬಳಸಿದಾಗ ಪ್ರಕೃತಿಯಲ್ಲಿ ಒಂದು ಸಮತೋಲನ ಕೆಡತಕ್ಕಂಥ, ಸಮತೋಲನ ಇಲ್ಲದೇ ಇರುವ ಪರಿಸ್ಥಿತಿ ಉಂಟಾದಾಗ ಕೆಲವು ರೋಗಗಳು, ಕೆಲವು ಕೀಟಗಳು ಇವೆಲ್ಲವೂ ಕೂಡ ಹೆಚ್ಚಾಗುತ್ತದೆ. ಅದೇ

ಪರಿಸ್ಥಿತಿಯನ್ನು ಇವತ್ತಿನ ದಿವಸ ನಾವು ನೋಡುತ್ತಿದ್ದೇವೆ. ಮೊದಲು ನಾವು ಸಣ್ಣವರಾಗಿದ್ದಾಗ ಈ ರೋಗವೇ ನಮಗೆ ಕಾಣುತ್ತಿರಲಿಲ್ಲ. ಔಷಧಿಯನ್ನೇ ನಾವು ಉಪಯೋಗಿಸುತ್ತಿರಲಿಲ್ಲ. ನೀವು ಯಾವುದೇ ಬೆಳೆಯನ್ನು ಬೆಳೆಯಿರಿ, ಆಲೂಗೆಡ್ಡೆ ಬೆಳೆಯಿರಿ, ಕೋಸು ಬೆಳೆಯಿರಿ, ಏನೇ ಬೆಳೆ ಬೆಳೆದರೂ ಕೂಡ ಔಷಧಿ ಇಲ್ಲದೇ ಬೆಳೆಯುತ್ತಿರತಕ್ಕ ದಿನಗಳೂ ಕೂಡ ಇದ್ದವು. ಆ ದಿನಗಳನ್ನು ನಾನು ಚಿಕ್ಕವನಿದ್ದಾಗ ಕಂಡಿದ್ದೇನೆ. ಕಾರಣವೇನೆಂದರೆ ಆಗ ಬೆಳೆ ಬೆಳೆಯತಕ್ಕವರು ಕೆಲವರೇ ಇರುತ್ತಿದ್ದರು. ಮತ್ತೆ ಸೀಜನ್ ಏನು ಇದೆ, ಯಾವ ಸೀಜನ್‌ನಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು, ಆ ಬೆಳೆಯನ್ನು ಬೆಳೆದರೆ ರೋಗರುಜಿನಗಳು ಕಡಿಮೆಯಾಗುತ್ತವೆ. ಏಕೆಂದರೆ ಆ ರೋಗರುಜಿನಗಳನ್ನು ಕೂಡ ತಹಬಂದಿಗೆ ತರತಕ್ಕಂಥ, ಕಂಟ್ರೋಲ್ ಮಾಡತಕ್ಕ ಶಕ್ತಿ ವಾತಾವರಣದಲ್ಲೂ ಇದೆ. ಬೇಸಿಗೆಯಲ್ಲಿ ಇದ್ದಂಥ ಹುಳ-ಹುಪ್ಪಟೆ, ರೋಗ ಮುಂತಾದವುಗಳು ಚಳಿಗಾಲದಲ್ಲಿ ಬರುವುದಿಲ್ಲ ಚಳಿಗಾಲದಲ್ಲಿರತಕ್ಕಂಥವು ಮಳೆಗಾಲದಲ್ಲಿ ಬರುವುದಿಲ್ಲ. ಈ ರೀತಿಯಾಗಿ ಅದನ್ನು ಸ್ಥಿಮಿತದಲ್ಲಿಡತಕ್ಕ ಪರಿಸ್ಥಿತಿ ವಾತಾವರಣದಲ್ಲೂ ಕೂಡ ಇದೆ. ಆದರೆ ಈಚೆಗೆ ನಾನು ಹೇಳಿದ ಹಾಗೆ ಹೈಬ್ರಿಡ್ ತಳಿಗಳು ಬಂದವು. ಅಂದರೆ ನಮಗೇನಾಯಿತು, ಆ ವಾತಾವರಣವನ್ನು, ಈ ಪರಿಸರದಲ್ಲಿ ಇದ್ದಂಥ ಸಮತೋಲನವನ್ನು ಕೆಡಿಸತಕ್ಕಂಥ ಪ್ರಯತ್ನ ನಮ್ಮ ಮನುಷ್ಯರಲ್ಲಿ ನಡೆದಾಗ ಅದಕ್ಕೆ ತಕ್ಕಂತೆ ರೋಗರುಜಿನಗಳು ಕೂಡ, ಪ್ರಾಣಿಗಳು ಇವೆಲ್ಲವೂ ಕೂಡ ಹೆಚ್ಚಿಗೆ ಆಗಿರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಯಾವುದೇ ಒಂದು ಜೀವ ಇರುವ ಅದು ಮರ ಇರಬಹುದು, ಗಿಡ ಇರಬಹುದು, ಕೀಟ ಇರಬಹುದು, ಬ್ಯಾಕ್ಟೀರಿಯಾ ಇರಬಹುದು, ಫಂಗಸ್ ಇರಬಹುದು ಅಥವಾ ವೈರಸ್ ಇರಬಹುದು, ಇವೆಲ್ಲವೂ ಕೂಡ ಪ್ರತಿಯೊಂದೂ ಬದುಕಬೇಕು, ತಾನು ಬದುಕುವುದಲ್ಲದೇ ತನ್ನ ಸಂತತಿಯನ್ನು ಕೂಡ ವೃದ್ಧಿ ಮಾಡಬೇಕು. that is the essence of life. Whether it is a plant or animal, the essence of life is generation. That is the main motto of life. ಅಂದರೆ ಮುಂದಿನ ಸಂತತಿಯನ್ನು ಮುಂದುವರಿಸಿಕೊಂಡು ಹೋಗಬೇಕು. ಆದರಿಂದ ಈ ಗಿಡಗಳೇ ಆಗಲೀ, ಕೀಟಗಳೇ ಆಗಲೀ, ಇವೆಲ್ಲವೂ ಕೂಡ ನಾವು ಎವಲ್ಯೂಷನ್‌ನನ್ನು ತೆಗೆದುಕೊಂಡರೆ ಅನೇಕ ಬದಲಾವಣೆಗಳಾಗಿರತಕ್ಕಂಥಾದ್ದನ್ನು ನೋಡುತ್ತಿದ್ದೇವೆ, ಸಾವಿರಾರು ವರ್ಷಗಳಿಂದಲ್ಲ, ಕೋಟಿ ಕೋಟಿ ವರ್ಷಗಳಿಂದಲೂ ಕೂಡ ಎವಲ್ಯೂಷನ್ ಬಂದಿರತಕ್ಕದ್ದು, ಈ ಜೀವ ವೈವಿಧ್ಯತೆ ಮತ್ತು ಎವಲ್ಯೂಷನ್ ಎನ್ನುವುದನ್ನು ನಾವು ಕಂಡಿದ್ದೇವೆ. ಅದೇ ರೀತಿ ಕೀಟಗಳಲ್ಲೂ ಕೂಡ ಮತ್ತೆ ರೋಗರುಜಿನಗಳಲ್ಲೂ ಕೂಡ ಎವಲ್ಯೂಷನನ್ನು ನಾವು ನೋಡುತ್ತಿದ್ದೇವೆ. ಅದಕ್ಕೆ ಹೊಂದಿಕೊಂಡಂಥ ರೀತಿಯಲ್ಲಿ, ನಾವು ರೈತರು ಇವೆಲ್ಲಕ್ಕೂ ಕೂಡ ಹೊಂದಿಕೊಂಡು ತಮ್ಮ ಬೆಳೆಯನ್ನು ತಮ್ಮ ಜೀವನವನ್ನು ಸಾಗಿಸಬೇಕಾಗಿರತಕ್ಕಂಥ ಒಂದು ದೊಡ್ಡ

ಪ್ರಯಾಸವನ್ನು ಮಾಡುತ್ತಾ ಬಂದಿದ್ದಾರೆ. ಈ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ನಾವು ನುಸಿರೋಗವನ್ನು ನೋಡಬೇಕಾಗುತ್ತದೆ. ಇದಕ್ಕೆ ನಾನಂತೂ ಇಂಥಾದ್ದೇ ಪರಿಹಾರ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಪ್ರಪಂಚಾದ್ಯಂತ ವಿಜ್ಞಾನಿಗಳಾಗಿರತಕ್ಕಂಥವರು ಇದರ ಬಗ್ಗೆ ತಲೆ ಕೆಡಿಸಿಕೊಂಡು ನೋಡಿದ್ದಾರೆ. ಹಾಗೆ ನೋಡಿ ಅದರ ಬಗ್ಗೆ ವಿಜ್ಞಾನಿಗಳು ಹೇಳಿರುವ ಪ್ರಕಾರ ಈ ಐಪಿಎಂ ಎನ್ನತಕ್ಕಂಥಾದ್ದು ಅಂದರೆ ಸಮಗ್ರ ಕೀಟ ಅಥವಾ ಸಮಗ್ರ ರೋಗ ನಿವಾರಣೆ ಎನ್ನುವ ಒಂದು ವ್ಯವಸ್ಥೆಯನ್ನು ಅವರು ಪ್ರತಿಪಾದನೆ ಮಾಡುತ್ತಿದ್ದಾರೆ. ಇಂಟಿಗ್ರೇಟೆಡ್‌ಪೆಸ್ಟ್ ಮ್ಯಾನೇಜ್‌ಮೆಂಟ್ ಎನ್ನತಕ್ಕದ್ದು ಅದು.

೫.೩೦ ಪಿಎಂ

ಇದರಲ್ಲಿ ಇಂತಹದು ಒಂದೇ ಎಂದು ಹೇಳುವುದಿಲ್ಲ. ಅಲ್ಲಿ ಔಷಧಿಯನ್ನೂ ಕೂಡ ಉಪಯೋಗಿಸಬೇಕಾಗುತ್ತದೆ. ಬೇರೆ ಬೇರೆ ಗಿಡಗಳನ್ನು ಸಸಿಗಳನ್ನು ಬೆಳೆಸಿ, ಅಲ್ಲಿ ಕ್ರಿಮಿಕೀಟಗಳ ಮೇಲೆ ಬದುಕತಕ್ಕಂತಹ, ಅಲ್ಲಿ ಹೋಗತಕ್ಕದ್ದು ಇದೆ. ಅದನ್ನು ಬೇರೆ ಕಡೆಗೆ ಕಳುಹಿಸತಕ್ಕಂತಹ ಪ್ರಯತ್ನ ಮತ್ತು ಈ ರೀತಿಯಾಗಿ ಎಲ್ಲಾ ವಿಧಾನಗಳನ್ನು ಉಪಯೋಗಿಸಿ ಬೆಳೆಗಳನ್ನು ರಕ್ಷಣೆ ಮಾಡತಕ್ಕದ್ದು ಆಗುತ್ತದೆ.

ಡಾ|| ಜಿ.ಪರಮೇಶ್ವರ್: ಮಾನ್ಯ ಉಪಾಧ್ಯಕ್ಷರೆ, ೫.೩೦ಕ್ಕೆ ನಮ್ಮ ಬಿಲ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ೫.೩೦ ಆಯಿತು. ದಯಮಾಡಿ ಸ್ವಲ್ಪ ಅವಕಾಶ ಮಾಡಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ: ನಾವೆಲ್ಲಾ ಇನ್ನೂ ಮಾತನಾಡುವುದು ಇದೆ. ಮಾನ್ಯ ಭೈರ್ಯೇಗೌಡರು ಬಹಳ ವಿಷಯಗಳನ್ನು ಬಹಳ ಗಂಭೀರವಾಗಿ ಹೇಳುತ್ತಿದ್ದಾರೆ. ಇದನ್ನು ತಿಳಿದುಕೊಳ್ಳಬೇಕು. ಬಿಲ್ ಬೇಕಾದರೆ ನಾಳೆ ಪಾಸ್ ಮಾಡಿಕೊಡೋಣ, ಏನೂ ತೊಂದರೆ ಇಲ್ಲ. ಇವತ್ತು ರೈತರು ಕಂಗಾಲಾಗಿರುವಂತಹ ಈ ಸಮಯದಲ್ಲಿ ಕೂಡ ರೈತರ ವಿಚಾರ ಮಾತನಾಡುವುದು ಬೇಡವೇ? ನೀವು ಬಿಲ್ ಪಾಸ್ ಮಾಡಿಕೊಳ್ಳಿ, ನಮ್ಮದೇನೂ ಅಭ್ಯಂತರ ಇಲ್ಲ. ಇದು ಬಹಳ ಮುಖ್ಯವಾದಂತಹದು.

ಡಾ: ಜಿ.ಪರಮೇಶ್ವರ್: ಅದು ತೀರ್ಮಾನ ಆಗಿದೆ.

(ಗೊಂದಲ)

ಉಪಾಧ್ಯಕ್ಷರು: ನೀವೆಲ್ಲರೂ ಸೇರಿ ಚರ್ಚಿಸಿದ ಪ್ರಕಾರ......

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಬೈರೇಗೌಡರು ತಮ್ಮ ಭಾಷಣವನ್ನು ಮುಗಿಸದಿದ್ದರೆ ನಾಳೆಗೆ ಅವಕಾಶ ಕೊಡುತ್ತೇವೆ. ಆ ಬಗ್ಗೆ ಪ್ರಶ್ನೆ ಇಲ್ಲ. ನೀವೆಲ್ಲರೂ ಮಾತನಾಡಿದ ಪ್ರಕಾರ ಚರ್ಚೆಯನ್ನು ೫.೩೦ಕ್ಕೆ ಕ್ಲೋಸ್ ಮಾಡಿ ವಿಶ್ವವಿದ್ಯಾನಿಲಯದ ಬಿಲ್ ಬಗ್ಗೆ ಮಾತನಾಡಬೇಕು, ತೆಗೆದುಕೊಳ್ಳಬೇಕು ಎಂದು ಹೇಳಿದಿರಿ. ನಿಮ್ಮ ವಾದವನ್ನು ನಾನು ಇಲ್ಲಿ ಇಡುತ್ತಿದ್ದೇನೆ ಅಷ್ಟೇ. ಈಗ ಮಾನ್ಯ ಬೈರೇಗೌಡರು ಮುಗಿಸಿ ಬಿಡಲಿ. ಅವರು ಮುಗಿಸಿದ ನಂತರ ೬.೦೦ ಗಂಟೆಗೆ ತೆಗೆದು ಕೊಳ್ಳೋಣ. ನಾಳೆಗೂ ಕೂಡ ಅವಕಾಶ ಇದೆ.

ಶ್ರೀ ಎಚ್.ಸಿ.ಬಸವರಾಜ್: ವಿಶ್ವವಿದ್ಯಾನಿಲಯದ ಬಿಲ್ ನಾಳೆ ತೆಗೆದುಕೊಳ್ಳಬಹುದು.

(ಗೊಂದಲ)

ಉಪಾಧ್ಯಕ್ಷರು: ಈ ವಿಷಯವನ್ನು ನಾಳೆಗೂ ತೆಗೆದುಕೊಳ್ಳಬಹುದು. ವಿಶ್ವವಿದ್ಯಾನಿಲಯದ ಬಿಲ್ ಇವತ್ತು ತೆಗೆದುಕೊಳ್ಳೋಣ. ಈಗ ಈ ಚರ್ಚೆಯನ್ನು ನಾಳೆಗೆ ಮುಂದುವರಿಸುವುದು ಎಂದು ಹೇಳಿ ಎಲ್ಲಾ ನಾಯಕರು ಮಾತನಾಡಿದ್ದಾರೆ. ಆ ಪ್ರಕಾರವೇ ಹೋಗಲಿ. ಅದನ್ನು ಮತ್ತೆ ವಯಲೇಟ್ ಮಾಡುವುದು ಬೇಡ. ಮಾನ್ಯ ಬೈರೇಗೌಡರು ಬೇಕಾದರೆ ೬.೦೦ ಗಂಟೆಯವರೆಗೆ ಮಾತನಾಡಲಿ. ಆರು ಗಂಟೆಗಾದರೂ ಆ ಬಿಲ್ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಕೇಳಿ, ಅವರೂ ಮಾತನಾಡಲಿ, ನಮಗೂ ಇಲ್ಲಿ ಅವಕಾಶ ಕೊಡಿ.

ಉಪಾಧ್ಯಕ್ಷರು: ಮಾತನಾಡುವುದಕ್ಕೆ ನಾಳೆ ಅವಕಾಶ ಕೊಡುತ್ತೇವೆ.

ಡಾ:ಜಿ.ಪರಮೇಶ್ವರ್: ಮಾನ್ಯ ಶ್ರೀನಿವಾಸ ಗೌಡರೇ, ಎಲ್ಲಾ ತೀರ್ಮಾನ ಆಗಿದೆ. ಎಲ್ಲಾ ವಿರೋಧ ಪಕ್ಷದ ನಾಯಕರ ಜೊತೆಗೆ ಮಾತನಾಡಿ ಇದು ತೀರ್ಮಾನ ಆಗಿದೆ.ಮತ್ತೆ ನೀವು ಏನೂ ಮಧ್ಯದಲ್ಲಿ ಹೇಳುವುದು ಬೇಡ. ಎಲ್ಲದಕ್ಕೂ ಒಂದು ಮಿತಿ ಇದೆ, ದಯವಿಟ್ಟು ಮತ್ತೆ ಹೇಳುವುದು ಬೇಡ, ಒಪ್ಪಂದ ಆಗಿದೆ.

ಉಪಾಧ್ಯಕ್ಷರು: ಮಾನ್ಯ ಬೈರೇಗೌಡರಿಗೆ ಈಗ ಸಮಯ ಜಾಸ್ತಿ ಬೇಕು ಎಂದರೆ........

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ: ನಾವು ರೈತರ ವಿಚಾರ ಹೇಳಬೇಕೇ ಬೇಡವೇ? ಅದಕ್ಕೂ ನೀವು ಅವಕಾಶ ಕೊಡುವುದಿಲ್ಲ ಎಂದರೆ ಇದು ಯಾವ ನ್ಯಾಯ? ಒಪ್ಪಂದ ಆಗಿರಬಹುದು. ಒಂದು ಹಂತಕ್ಕೆ ಇದನ್ನು ಕ್ಲೋಸ್ ಮಾಡಿ ಬಿಡೋಣ. ಆಮೇಲೆ ಬಿಲ್ ತೆಗೆದುಕೊಳ್ಳಿ.

ಡಾ: ಜಿ. ಪರಮೇಶ್ವರ್: ಅದೆಲ್ಲಾ ಆಗುವುದಿಲ್ಲ.

ಉಪಾಧ್ಯಕ್ಷರು: ಇದೇ ವಿಚಾರವನ್ನು ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಮಾತನಾಡಿ ಆಗಿದೆ. ಎಲ್ಲಾ ಮುಖಂಡರೂ ಸಹ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ೫.೩೦ವರೆಗೆ ಮಾತನಾಡುವುದು. ೫.೩೦ಕ್ಕೆ ಇದನ್ನು ಮುಗಿಸಿ ಬಿಲ್ ತೆಗೆದುಕೊಳ್ಳುವುದು. ಇದು ಮುಗಿಯಲಿಲ್ಲ ಅಂದರೆ ನಾಳೆಗೆ ಮುಂದುವರಿಸುವುದು. ಇದರಲ್ಲಿ ಏನು ವ್ಯತ್ಯಾಸ ಇದೆ? ಮಾನ್ಯ ಬೈರೇಗೌಡರು ಈಗ ಮಾತನಾಡದಿದ್ದರೆ ಬೇಡ, ನಾಳೆಗೆ ಮಾತನಾಡಲಿ ಆಪ್ಷನ್ ಇದೆ.

ಶ್ರೀ ಸಿ. ಬೈರೇಗೌಡ: ನಾನು ಐಪಿಎಂ ಬಗ್ಗೆ ಮಾತನಾಡುತ್ತಿದ್ದೆ. ಐಪಿಎಂನಲ್ಲಿ ಒಂದೇ ವಿಧಾನ ಅಲ್ಲ. ಅನೇಕ ವಿಧಾನಗಳೂ ಕೂಡ ಇದ್ದಾವೆ. ಅದರಲ್ಲಿ ಈಗ ನಮ್ಮ ಮುಂದೆ ಇರತಕ್ಕ ವಿಚಾರ ಎಂದರೆ ಈ ನೀರಾ ಇಳಿಸತಕ್ಕದ್ದು. ನೀರಾ ಇಳಿಸತಕ್ಕದ್ದು ಸಹ ಐಪಿಎಂನಲ್ಲಿ ಒಂದು ಭಾಗ. ಇದೇ ಅಯ್ಯರು ಉತ್ತರ ಎನ್ನತಕ್ಕ ವಾದವನ್ನು ನಾನು ಇಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾನು ಸ್ವಲ್ಪ ವಿಷಯವನ್ನು ತಿಳಿದುಕೊಂಡಿರತಕ್ಕವನು. ಈ ಇಲಾಖೆಯನ್ನು ಸ್ವಲ್ಪ ದಿವಸ ನಡೆಸಿರತಕ್ಕವನು. ಒಬ್ಬ ರೈತನಾಗಿರುವ ಕಾರಣದಿಂದ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂತಹದೇ ಸರಿಯಾದಂತಹ ಮಾರ್ಗ ಇಲ್ಲದೇ ಇರುವ ಕಾರಣದಿಂದ ವಿಜ್ಞಾನಿಗಳು ಐಪಿಎಂ ವಿಚಾರ ಹೇಳುತ್ತಿದ್ದಾರೆ. ಈ ನುಸಿರೋಗದ ಬಾಧೆ ನಮ್ಮ ದೇಶಕ್ಕೆ ಬಂದಿದ್ದು ಮೆಕ್ಸಿಕೋ ದೇಶದಿಂದ. ಮೆಕ್ಸಿಕೋ ದೇಶದಿಂದ ಬಂದದ್ದು ಭಾರತದಲ್ಲಿ ಪ್ರಪ್ರಥಮವಾಗಿ ಕೇರಳದಲ್ಲಿ ಕಾಣಿಸಿಕೊಂಡಿತು. ಕೇರಳದಲ್ಲಿ ಕಾಣಿಸಿಕೊಂಡಂತಹ ರೋಗ ನಮ್ಮ ರಾಜ್ಯದ ಅದರಲ್ಲೂ ಸಹ ಬೆಂಗಳೂರು ಸುತ್ತ ಮುತ್ತ ಮತ್ತು ಕೋಲಾರ ಜಿಲ್ಲೆಗಳಲ್ಲಿ ಕಾಣಿಸಿಕೊಂಡಿರತಕ್ಕದ್ದು. ನಮ್ಮ ರಾಜ್ಯಕ್ಕೆ ಕೇರಳದಿಂದ ನೇರವಾಗಿ ಬಂದಂತಹ ಈ ಕೀಟಾಣುಗಳು ಗಾಳಿಯಲ್ಲಿ ಎಷ್ಟು ದೂರ ಬೇಕಾದರೂ ಹೋಗುತ್ತವೆ. ಗಾಳಿಯ ಜೊತೆಯಲ್ಲಿ ಇದು ಹೋಗುತ್ತದೆ. ಆದ್ದರಿಂದ ಇದಕ್ಕೇನೂ ಸೈನಿಕರು ಬರದೇ ಇರಲಿ ಎಂದು ಹೇಳಿ 'ಗ್ರೇಟ್ ವಾಲ್ ಆಫ್ ಚೈನಾ' ಕಟ್ಟಿದ ಹಾಗೆ ಗ್ರೇಟ್ ವಾಲ್ ಆಫ್ ಚೈನಾ ತರಹ ಇಲ್ಲಿ ಗೋಡೆ ಕಟ್ಟಿದರೂ ಕೂಡ ಇದೇನೂ ನಿಲ್ಲುವುದಿಲ್ಲ. ಇದು ಗಾಳಿಯಲ್ಲಿ ಬರತಕ್ಕಂತಹದು. ಅದು ಪ್ರಥಮವಾಗಿ ನಮ್ಮ ಕೋಲಾರ ಜಿಲ್ಲೆ ಹಾಗೂ ಬೆಂಗಳೂರು ಸುತ್ತಮುತ್ತ ಕಾಣಿಸಿಕೊಂಡಿತು. ದುರಾದೃಷ್ಟವಶಾತ್ ಆ ಸಂದರ್ಭದಲ್ಲಿ

ನಾನು ಸಂಬಂಧಪಟ್ಟ ಇಲಾಖೆಯ ಮಂತ್ರಿ ಆಗಿದ್ದೆ. ತತ್‌ಕ್ಷಣ ಅನೇಕ ತೋಟಗಳಿಗೆಲ್ಲಾ ಹೋದೆ. ಅಲ್ಲೆಲ್ಲಾ ಹೋಗಿ ನೋಡಿ, ನಮ್ಮ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನು ಅಲ್ಲಿ ಕಳುಹಿಸಿ, ಏನು ವಿಚಾರ ಇದೆ ಎನ್ನತಕ್ಕದ್ದನ್ನು ನೋಡಿ ಎಂದು ಹೇಳಿದೆ. ಮತ್ತೆ ಅವತ್ತು ರೈತರ ಹತ್ತಿರ ಕೂಡ ವಿಜ್ಞಾನಿಗಳು ಆಗಿರತಕ್ಕವರು, ತೋಟಗಾರಿಕಾ ಇಲಾಖೆಯವರು ಎಲ್ಲರೂ ಕೂಡ ಸೇರಿ ಅವರೇನು ನಿವಾರಣಾ ಕ್ರಮವನ್ನು ಅದನ್ನು ಬರದಂತೆ ತಡೆಗಟ್ಟುವ ಕ್ರಮವನ್ನು ಏನು ಮಾಡಬೇಕು ಎನ್ನತಕ್ಕದ್ದನ್ನು ರೈತರಿಗೆ ತಿಳುವಳಿಕೆ ಕೊಡಬೇಕು ಎನ್ನತಕ್ಕ ಮಾತನ್ನೂ ಕೂಡ ಹೇಳಿದ್ದೆ. ಅದರ ಜೊತೆಯಲ್ಲಿಯೇ ವಿಜ್ಞಾನಿಗಳು ನನಗೂ ಸಹ ಹೇಳಿದರು. ಏನು ಇದರ ಕಥೆ ಎಂದು ಹೇಳಿದ ತಕ್ಷಣ ನಾನು ಅಧಿಕಾರಿಗಳಿಗೆ ಏನು ಸೂಚನೆ ಕೊಟ್ಟಿದ್ದೆ ಅಂದರೆ ಇದನ್ನು ಫಲ್ಸ್ ಫೋಲಿಯೋ ಕಾರ್ಯಕ್ರಮವನ್ನು ಯಾವರೀತಿ ನಡೆಸುತ್ತಾರೋ ಆ ರೀತಿಯಾಗಿ ಎಲ್ಲೆಲ್ಲಿ ರೋಗ ಇದೆ, ರೋಗ ಇರಲಿ, ಇರದಿರಲಿ ಎಲ್ಲಾ ಮರಗಳಿಗೂ ಕೂಡ ಔಷಧಿಯನ್ನು ಸಿಂಪಡಿಸಬೇಕು ಎನ್ನತಕ್ಕ ಸೂಚನೆಯನ್ನು ಕೊಟ್ಟಿದ್ದೆ ಮತ್ತು ಔಷಧಿ ಯನ್ನು ಕೇವಲ ಸಿಂಪಡಿಸತಕ್ಕದ್ದು ಅಲ್ಲದೇ, ಇಂಜಕ್ಷನ್ ಮೂಲಕ ಕೊಡತಕ್ಕದ್ದು ಮತ್ತು ಬೇರಿನ ಮೂಲಕ ಕೊಡತಕ್ಕದ್ದು, ಈ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳಬೇಕು ಎನ್ನತಕ್ಕ ಸೂಚನೆಯನ್ನು ನೀಡಿದ್ದೆ. ಅದನ್ನು ಪೂರ್ತಿ ಯಶಸ್ವಿಯಾಗಿ ಮಾಡತಕ್ಕ ಅದೇ ಸಮಯದಲ್ಲಿ ಚುನಾವಣೆಗಳು ಬಂದವು. ಚುನಾವಣೆ ಬಂದ ಮೇಲೆ ಇಲ್ಲಿ ರಾಜಕೀಯ ಬದಲಾವಣೆಗಳೂ ಕೂಡ ಆದವು. ಆಮೇಲೆ ಉಳಿದಿರತಕ್ಕದ್ದು ಈಗಿನ ಸರ್ಕಾರ ಅದನ್ನು ಯಾವ ರೀತಿ ನಿಭಾಯಿಸುತ್ತಿದೆ ಎನ್ನತಕ್ಕ ವಿಚಾರ. ಇವತ್ತಂತೂ ಸಹ ತೆಂಗು ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಬೆಳಯುತ್ತಿದ್ದಾರೆ ಹಾಗೆ ಬೆಳೆಯುತ್ತಿರತಕ್ಕ ಎಲ್ಲಾ ಪ್ರದೇಶದಲ್ಲೂ ಕೂಡ ಇವತ್ತು ರೋಗ ಹರಡಿದೆ. ಕೇವಲ ಈ ರಾಸಾಯನಿಕ ವಸ್ತುಗಳನ್ನು ಬಳಸಿ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯ ಇದೆ ಎಂದು ಖಂಡಿತವಾಗಿ ನಾನೂ ಸಹ ಭಾವಿಸಿಲ್ಲ. ಕಾರಣ ಏನು ಅಂದರೆ ನಾನು ಆಗಲೇ ಹೇಳಿದೆ, ಈ ಪ್ರಕೃತಿಯಲ್ಲಿ ಅದನ್ನು ಮೆಟ್ಟತಕ್ಕ ರೀತಿಯಲ್ಲಿ ಏನಾದರೂ ಒಂದು ಔಷಧಿಯನ್ನು ನಾವು ಕಂಡು ಹಿಡಿದು ಔಷಧಿಯನ್ನು ಕೀಟದ ಮೇಲೆ ಪ್ರಯೋಗ ಮಾಡಿದರೆ ಅದು ಕೀಟಗಳೇ ಇರಬಹುದು, ಅಥವಾ ರೋಗ ರುಜಿನಗಳೇ ಇರಬಹುದು ಅಥವಾ ಫಂಗಸ್ಸೇ ಇರಬಹುದು ಇದಕ್ಕೆ ಅದು ಪ್ರತಿರೋಧಕವನ್ನು ವ್ಯಕ್ತಪಡಿಸತಕ್ಕ ಗುಣ ಇದೆ. ಅಂದರೆ ರೆಸಿಸ್ಟೆನ್ಸ್ ಸ್ವಾಭಾವಿಕವಾಗಿ ಅದರಲ್ಲಿ ಬರುತ್ತದೆ. ಈಗ ಮೊದಲು ನಮ್ಮ ದೇಶದಲ್ಲಿ ಪೆನ್ಸಿಲಿನ್ ಬಂತು. ಜ್ವರ ಬಂತು ಎಂದು ಹೇಳಿ ಪೆನ್ಸಿಲಿನ್ ಇಂಜಕ್ಷನ್ ಕೊಟ್ಟರೆ ಜ್ವರ ವಾಸಿ ಆಗುತ್ತಿತ್ತು. ಆದರೆ ಇವತ್ತು ಪೆನ್ಸಿಲಿನ್‌ನಲ್ಲೇ ಅದೆಷ್ಟು ವಿಧ ಇದೆ? ಸಾವಿರಾರು ವಿಧ ಇದೆಯೋ ಏನೋ ಗೊತ್ತಿಲ್ಲ. ಅಷ್ಟೆಲ್ಲಾ ಇದ್ದರೂ ಕೂಡ ಪೆನ್ಸಿಲಿನ್ ಇದ್ದರೂ ಕೂಡ ಅನೇಕ ಖಾಯಿಲೆಗಳು ಪೆನ್ಸಿಲಿನ್ ಕೊಟ್ಟರೂ ಸಹ ಅದು ವಾಸಿ ಆಗದೇ ಇರತಕ್ಕಂಥಸ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಕಾರಣ ಏನು ಎಂದರೆ

ಇಮ್ಯುನಿಟಿ ಎನ್ನತಕ್ಕದ್ದು. ಅದು ಸ್ವಾಭಾವಿಕವಾಗಿ ಶರೀರದಲ್ಲಿಯೇ ಮತ್ತು ಪ್ರಕೃತಿ ಆ ರೀತಿಯಾದಂಥ ಒಂದು ಗುಣವನ್ನು ಈ ಜೀವರಾಶಿಗೆ ಕೊಟ್ಟಿರತಕ್ಕಂತಹ ಕಾರಣದಿಂದ ನಮ್ಮ ಸ್ನೇಹಿತರು ಯಾರೋ ಹೇಳುತ್ತಿದ್ದರು, ಹಳೇ ಮಾನೋಕ್ರೋಟೋಫಾಸ್ ಅನ್ನು ಕೊಟ್ಟರು ಅದು ಏನೂ ಕೆಲಸ ಮಾಡಲಿಲ್ಲ ಎನ್ನತಕ್ಕದ್ದು ಇದೆ. ಅದು ನನ್ನ ಪ್ರಕಾರ ವೈಜ್ಞಾನಿಕವಾಗಿ ಹೇಳಬೇಕಾಗಿದ್ದರೆ ಅದು ಔಷಧಿಯಲ್ಲಿ ತಪ್ಪಿಲ್ಲ. ಅದು ಸರಿ ಇದೆ ಎಂದು ನಾನು ವಾದ ಮಾಡುತ್ತಿಲ್ಲ. ಅದು ಕ್ವಾಲಿಟಿ ಔಷಧಿಯೇ ಅಥವಾ ಗುಡ್ ಕ್ವಾಲಿಟಿ ಔಷಧಿ ಎಂದೋ ಅಥವಾ ಅದರ ಗುಣಮಟ್ಟ ಸರಿಯಾಗಿದೆ ಎಂದು ನಾನು ಹೇಳುತ್ತಿಲ್ಲ. ಒಳ್ಳೆಯ ಗುಣಮಟ್ಟದ ಔಷಧಿಯನ್ನು ಬಳಸಿದರೂ ಸಹ ಆ ಕೀಟ ಇಮ್ಯುನಿಟಿ ಡೆವಲಪ್ ಮಾಡಿಕೊಂಡಿರುವ ಕಾರಣ ಅದು ಸಾಯುವುದಿಲ್ಲ. ಅನೇಕ ರೈತರು ಬಹಳ ಕಡೆ ಇನ್‌ವೇರಿಯೇಬ್ಲಿ ಏನು ಹೇಳುತ್ತಾರೆ ಎಂದರೆ, ನಾನು ಔಷಧಿಯಲ್ಲೇ ತೆಗೆದುಕೊಂಡು ಹೋಗಿ ಆ ಹುಳವನ್ನು ಹಾಕಿದೆ ಅದು ಸಾಯಲಿಲ್ಲ. ಈ ಔಷಧಿಯಲ್ಲಿ ಏನೂ ಕೂಡ ಪವರ್ ಇಲ್ಲ ಎಂದು ರೈತರು ಸಾಮಾನ್ಯವಾಗಿ ಹೇಳತಕ್ಕ ಮಾತನ್ನು ಒಂದಲ್ಲ ಅನೇಕ ಕಡೆ ನಾನು ಕೇಳಿದ್ದೇನೆ. ಅದು ಔಷಧಿ ತಪ್ಪಲ್ಲ ಎಂದು ನಾನಂತೂ ಕೂಡ ಹೇಳುತ್ತೇನೆ. ಆದರೆ ಬಾಡಿಯಲ್ಲಿತಕ್ಕಂತಹ ಕ್ರಿಮಿಕೀಟಗಳಿಗೆ ರೆಸಿಸ್ಟೆನ್ಸ್ ಪವರ್ ಬಂದಿರುವ ಕಾರಣದಿಂದ ಅದು ಸಾಯುವುದಿಲ್ಲ. ನಮ್ಮ ಸಾಮಾನ್ಯ ರೈತರಲ್ಲಿ ಕೂಡ ಈ ಜ್ಞಾನ ಇರಬೇಕಾಗಿರತಕ್ಕದ್ದು ಅತೀ ಅವಶ್ಯಕತೆ ಇದೆ. ಆದ್ದರಿಂದ ಇವತ್ತಿನ ದಿವಸ ತೆಂಗಿಗೆ ಕೇವಲ ಇದೊಂದೇ ರೋಗ ಬರುತ್ತದೆ ಎಂದು ತಿಳಿದುಕೊಳ್ಳಬೇಡಿ ನುಸಿಯಿಂದ ಮಾತ್ರ ತೆಂಗಿಗೆ ಬಾಧೆ ಇದೆ ಎಂದು ತಿಳಿದುಕೊಳ್ಳಬೇಡಿ. ಕಪ್ಪು ತಲೆಹುಳು ರೋಗ ಎಂದು ಇದೆ. ಅದನ್ನು ನೋಡಿದರೆ ತೆಂಗಿನ ಮರ ಹಸಿರಾಗಿ ಕಾಣಬೇಕಾಗಿರತಕ್ಕದ್ದು ಗರಿ ಎಲ್ಲಾ ಕೂಡ ಒಣಗಿ ಕರ್ರಗೆ ಆಗಿ ಇರತಕ್ಕ ದೃಶ್ಯವನ್ನೂ ಕೂಡ ನಾವು ನೋಡುತ್ತಿದ್ದೇವೆ. ಅದೇ ರೀತಿ ಪಕ್ಕದ ರಾಜ್ಯವಾಗಿರತಕ್ಕ ಕೇರಳದಲ್ಲಿ ಇನ್ನೂ ಭೀಕರವಾದಂತಹ ರೋಗ ಇದೆ. ನಾವು ನುಸಿ ರೋಗಕ್ಕೇ ಇಷ್ಟು ಹೆದರುತ್ತಿದ್ದೇವೆ. ಮತ್ತೆ ಕಪ್ಪು ತಲೆಹುಳಕ್ಕೇ ಇಷ್ಟು ಹೆದರುತ್ತಿದ್ದೇವೆ. ಕೇರಳದಲ್ಲಿ ಇದೆಲ್ಲವನ್ನೂ ಕೂಡ ಮೀರಿಸತಕ್ಕ ರೋಗ ಇವತ್ತು ಇದೆ, ಅದೂ ಕೂಡ ಹರಡುತ್ತಿದೆ. ಅದೂ ಸಹ ಹೊರ ದೇಶದಿಂದ ಬಂದಿರತಕ್ಕದ್ದು ರೂಟ್ ಕ್ರಬ್ ಎಂದು ಅದನ್ನು ಕರೆಯುತ್ತಾರೆ. ಇದು ಬಂದರೆ ಮರದಲ್ಲಿ ಗರಿ ಎಲ್ಲಾ ದೊಡ್ಡ ಪ್ರಮಾಣದಲ್ಲಿ ಬರಬೇಕಾಗಿರತಕ್ಕದ್ದು ಸಣ್ಣ ಪ್ರಮಾಣದಲ್ಲಿ ಆಗುತ್ತದೆ. ಒಂದು ಮಾರುದ್ದ ಇರಬೇಕಾಗಿರತಕ್ಕಂತಹದು ಒಂದು ಮೊಳದುದ್ದ ಆಗಿ ಆ ಕಾಯಿ ಕೂಡ ಬಿಡತಕ್ಕದ್ದು ಕಡಿಮೆ ಆಗುತ್ತದೆ. ಗುಣಮಟ್ಟದ ಕಾಯಿಯೂ ಬಿಡುವುದಿಲ್ಲ. ಅದರಲ್ಲೂ ಆರೋಗ್ಯವಾಗಿರುವ ಮರದಲ್ಲಿ ಎಷ್ಟು ಪ್ರಮಾಣದಲ್ಲಿ ಕಾಯಿ ಬಿಟ್ಟು, ಕೊಬ್ಬರಿ ಬರುತ್ತದೋ ಆ ಪ್ರಮಾಣದಲ್ಲಿ ಬರಲು ಸಾಧ್ಯವಿಲ್ಲ. ಕೇರಳ ರಾಜ್ಯದ ಏಳೆಂಟು ಜಿಲ್ಲೆಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಈ ರೋಗ ಹರಡುತ್ತಿದ್ದು, ಕೇಂದ್ರ ಸರ್ಕಾರ

ಈ ಕುರಿತು ಕೈಗೊಂಡ ಮೊದಲ ಕ್ರಮವೇನೆಂದರೆ, ರೋಗಕ್ಕೆ ತುತ್ತಾದ ಮರವನ್ನು ತಕ್ಷಣವೇ ಕಡಿದುಹಾಕುವುದು. ಇದೊಂದು ಮಾರ್ಗವೇ ವಿನಾ ಔಷಧಿ ನೀಡುವುದಾಗಲೀ ಇನ್ನಾವುದೇ ಕ್ರಮಗಳನ್ನು ತೆಗೆದುಕೊಂಡರೂ ರೋಗ ಹೋಗುವುದಿಲ್ಲ. ಹೀಗಾಗಿ ಆ ರಾಜ್ಯದಲ್ಲಿ ರೋಗವನ್ನು ನಿಯಂತ್ರಿಸಲು ಒಂದು ಮರಕ್ಕೆ ಇಂತಿಷ್ಟು ಹಣವೆಂದು ಕೇಂದ್ರ ಸರ್ಕಾರ ನೀಡಿದ ಸೌಲಭ್ಯವನ್ನು ಉಪಯೋಗಿಸಿಕೊಂಡ ಅಲ್ಲಿನ ಸರ್ಕಾರದವರು ಕಾಗದದ ಮೇಲೆ ರೋಗಕ್ಕೆ ತುತ್ತಾದ ಮರಗಳನ್ನು ಕಡಿದರೇ ಹೊರತು ವಾಸ್ತವವಾಗಿ ಕಡಿಯಲಿಲ್ಲ. ಇದರಿಂದಾಗಿ ಮುಂದಿನ ೧೫-೨೦ವರ್ಷಗಳಲ್ಲಿ ಕೇರಳ ರಾಜ್ಯದಲ್ಲಿ ತೆಂಗು ಬೆಳೆ ಇಲ್ಲದಿರುವ ಪರಿಸ್ಥಿತಿಯುಂಟಾಗಬಹುದು. ಇದರ ಪರಿಣಾಮ ಪಕ್ಕದಲ್ಲಿರುವ ನಮ್ಮ ರಾಜ್ಯದ ಮೇಲಾಗುವ ಅಪಾಯವಿದೆ. ಆದಕಾರಣ, ನಾನು ಮಾನ್ಯ ಮಂತ್ರಿಗಳಿಗೆ ತಿಳಿಸುವುದೇನೆಂದರೆ, ತಾವು ಕೇರಳ ರಾಜ್ಯಕ್ಕೆ ಹೋಗಿ ಖುದ್ದಾಗಿ ಅಧ್ಯಯನ ಮಾಡಿ ಪರಿಶೀಲಿಸಿ ಬರಬೇಕು. ತೆಂಗಿನ ಮರಗಳಿಗೆ ಈ ರೋಗ .ಬಂದರೆ ವಾಸಿಯಾಗುವುದಿಲ್ಲ, ಯಾವುದೇ ಔಷಧಿಗಳಿಗೂ ಜಗ್ಗುವುದಿಲ್ಲ. ಇದಕ್ಕೆ ಈಗಲೇ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆಯಿದೆ. ತೆಂಗಿನ ಮರಗಳಿಂದ 'ನೀರಾ' ಇಳಿಸುವ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೆ ಕೊಡಬೇಕೆಂದು ಏಕೆ ಹೇಳುತ್ತಿದ್ದೇನೆಂದರೆ, ಐ.ಪಿ.ಎಂ. ಕುರಿತು ಪ್ರಪಂಚದಲ್ಲಿರುವ ಎಲ್ಲಾ ವಿಜ್ಞಾನಿಗಳೂ ಕೂಡ ಪ್ರತಿಪಾದಿಸಿದ್ದಾರೆ. ಐ.ಪಿ.ಎಂ.ನಲ್ಲಿ 'ನೀರಾ' ಇಳಿಸುವುದು ಒಂದು ಭಾಗವಾಗಿರುವುದರಿಂದ ನೀರಾ ಇಳಿಸಲು ಸರ್ಕಾರ ಅವಕಾಶ ಕಲ್ಪಿಸಿಕೊಡಬೇಕು. 'ರಾಜ್ಯದಲ್ಲಿ ಕೋಟಿಗಟ್ಟಲೆ ಸಂಖ್ಯೆಯಲ್ಲಿ ತೆಂಗಿನ ಮರಗಳಿರುವುದರಿಂದ, ಇವುಗಳಿಂದ ನೀರಾ ಇಳಿಸಿದಲ್ಲಿ ಕುಡಿಯುವವರು ಯಾರು?' ಎಂದು ಗೃಹ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಶ್ನಿಸಿದ್ದಾರೆ. ಎಲ್ಲಾ ರೈತರು ತೆಂಗಿನ ಮರಗಳಿಂದ ನೀರಾ ಇಳಿಸುವುದಿಲ್ಲ. ತಮಗೆ ಹೇಳಬೇಕೆಂದರೆ, ನಾನೇ ಸ್ವತಃ ೨-೩ ಕಡೆಗಳಿಗೆ ಹೋಗಿ ತೆಂಗಿನ ಮರಗಳಿಗೆ ಗಡಿಗೆಗಳನ್ನು ಕಟ್ಟುವ ಮೂಲಕ ಕಾನೂನನ್ನು ಉಲ್ಲಂಘಿಸಿ ಬಂದಿದ್ದೇನೆ. ಇದನ್ನು ಸದನದಲ್ಲಿ ನೇರವಾಗಿ ಹೇಳಬಯಸುತ್ತೇನೆ. ತೆಂಗಿನ ಮರಗಳಿಂದ ನೀರಾ, ಹೆಂಡ ಇಳಿಸಲು ಕಾನೂನಿನಲ್ಲಿ ನಿರ್ಬಂಧವಿದ್ದರೂ ಕೂಡ ನಾನು ಆ ಕೆಲಸ ಮಾಡಿ ಬಂದಿದ್ದೇನೆ. ಕಾರಣವೇನೆಂದರೆ, ರಾಜ್ಯದ ರೈತರನ್ನು ಕಾಪಾಡುವ ಸಲುವಾಗಿ ನಾನು ಆ ಕೆಲಸ ಮಾಡಿದ್ದೇನೆ. ಇವೊತ್ತು ರಾಜ್ಯದಲ್ಲಿ ರೈತ ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ? ರೈತರ ಆತ್ಮಹತ್ಯೆಗೆ ಕಾರಣವೇನೆಂದು ಪತ್ತೆ ಹಚ್ಚಲು ತಜ್ಞರ ಸಮಿತಿ ರಚಿಸಬೇಕೆಂದು ಏಕೆ ನಾವು ಒತ್ತಾಯ ಮಾಡಿದ್ದೇವೆ? ಇಂದು ರೈತನ ಪರಿಸ್ಥಿತಿ ಅಧೋಗತಿಗಿಳಿದಿದೆ. ನಾನಾ ರೀತಿಯ ಬಾಧೆಗಳಿಂದ ಪೀಡಿತವಾಗಿದ್ದಾನೆ. ಪರಿಸ್ಥಿತಿ ಹೀಗಿರುವಾಗ ಸ್ವಲ್ಪಮಟ್ಟಿಗಾದರೂ ಆತನಿಗೆ ರಕ್ಷಣೆ ಸಿಗಬೇಕಾದ ಅವಶ್ಯಕತೆಯಿದೆ. ನೀರಾ ಮಾರಾಟ ಮಾಡುವುದಕ್ಕೆ ತೊಂದರೆ ಇದೆಯೆಂದು ನೀವು ಹೇಳಿದಿರಿ. ಆದರೆ,

ನಿಮ್ಮ ಉದ್ದೇಶ ಒಳ್ಳೆಯದಲ್ಲ, ಉದ್ದೇಶ ಬೇರೆಯೇ ಇದೆ. ಒಳ ಉದ್ದೇಶ ಒಂದಾದರೆ ಹೊರ ಉದ್ದೇಶ ಬೇರೆಯದಾಗಿದೆಯೆಂದು ನಾವು ಹೇಳಲೇಬೇಕಾಗಿದೆ. ಏಕೆಂದರೆ, ಅಬ್ಕಾರಿ ಬಗ್ಗೆ ನಾನು ಹೆಚ್ಚಿಗೆ ತಿಳಿದುಕೊಂಡವನಾಗಿದ್ದು, ರಾಜ್ಯದಲ್ಲಿ ಕಳೆದ ಹತ್ತಾರು ವರ್ಷಗಳಿಂದಲೂ ಏನೇನು ನಡೆದಿದೆಯೆಂಬ ಪರಿಚಯ ನನಗೂ ಇದೆ. ಅನೇಕ ಸಂದರ್ಭಗಳಲ್ಲಿ ನಾವು ವಿಧಾನಸಭೆಯಲ್ಲಿ ಕುಳಿತು ಇಷ್ಟೆಲ್ಲಾ ಚರ್ಚೆ ಮಾಡಿ, ಒಬ್ಬರ ಮೇಲೊಬ್ಬರು ವಾಗ್ದಾಳಿ ನಡೆಸುತ್ತೇವೆ. ಆದರೆ, ನಿಜ ಹೇಳಬೇಕೆಂದರ ನಮ್ಮೆಲ್ಲರ ಲಗಾಮು ಹಿಡಿದಿರುವವರು ಬೇರೆಯೇ ಇದ್ದಾರೆ. ಈ ರೀತಿ ಲಗಾಮು ಹಿಡಿದಿರುವವರಲ್ಲಿ ಅಬ್ಕಾರಿ ವಲಯದಲ್ಲಿರುವವರಲ್ಲಿ ಕೂಡ ಒಬ್ಬರು. ಇದನ್ನು ನಾವ್ಯಾರೂ ಕೂಡ ಅಲ್ಲಗಳೆಯಲಿಕ್ಕಾಗುವುದಿಲ್ಲ. ಆದರೂ ಸರ್ಕಾರ ಏಕೆ ಇದನ್ನು ವಿರೋಧಿಸುತ್ತಿದೆ? ಸರ್ಕಾರ ಸಾರಾಯಿ ಲಾಬಿಗೆ ಮಣಿದು ತೆಂಗಿನ ಮರಗಳಿಂದ ನೀರಾ ಇಳಿಸುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂಬುದು ಸಾಮಾನ್ಯ ಜನರ ಅಭಿಪ್ರಾಯವಾಗಿದೆ. ಒಬ್ಬರಿಂದಲ್ಲ, ಸಾವಿರಾರು ಜನರ ಬಾಯಿಯಿಂದ ಈ ಮಾತು ಕೇಳಿದ್ದೇನೆ. ಅವರ ಅಭಿಪ್ರಾಯಕ್ಕೆ ನಾನೂ ಸಹ ಧ್ವನಿಗೂಡಿಸುತ್ತಿದ್ದೇನೆ. ನೀರಾ ಇಳಿಸಲು ಅನುಮತಿ ನೀಡಿದರೆ ಪ್ರಪಂಚವೇನೂ ಮುಳುಗುವುದಿಲ್ಲ. ರಾಜ್ಯದಲ್ಲಿ ಹೆಂಡವನ್ನು ನಿಷೇಧಿಸಬೇಕೆಂದು ಧ್ವನಿ ಎತ್ತಿರುವವರಲ್ಲಿ ನಾನು ಮೊದಲಿಗನಾಗಿದ್ದೇನೆ. ಇದು ಸದನದ ದಾಖಲೆಯಲ್ಲಿದೆ. ಕ್ಲೋರಲ್ ಹೈಡ್ರೇಟ್ ಬೆರೆಸಿರುವ ನೀರನ್ನು ಹೆಂಡವೆಂದು ಹೇಳಿ ಮಾರಾಟ ಮಾಡುವುದನ್ನು ರದ್ದುಗೊಳಿಸಬೇಕು, ಅದು 'ವಿಷ'ವೆಂದು ಹೇಳಿದ್ದೇನೆ.

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಹೆಂಡ ಕುರಿತ ಚರ್ಚೆ ನಿನ್ನೆ ಮೊನ್ನೆಯದಲ್ಲ. ನಿಮಗಿಂತಲೂ (ಬೈರೇಗೌಡ) ಮೊದಲೇ ಇದರ ವಿರುದ್ಧವಾಗಿ ಮೊದಲು ಮಹಾತ್ಮಗಾಂಧಿಯವರು ಧ್ವನಿ ಎತ್ತಿದ್ದಾರೆ. ೧೯೪೭ನೇ ಇಸವಿಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ತರುವಾಯದ ಒಂದೇ ದಿವಸದಲ್ಲಿ ದಿವಂಗತ ಮೊರಾರ್ಜಿ ದೇಸಾಯಿಯವರು ಅಂದಿನ ಬೊಂಬಾಯಿ ಪ್ರಾಂತ್ಯದಲ್ಲಿ ಇದನ್ನು ನಿಷೇಧಿಸಿ ಟೆನೆನ್ಸಿಯನ್ನು ಜಾರಿಗೆ ಕೊಡುವ ಮೂಲಕ ಗೇಣಿದಾರರಿಗೆ ಮಾಲೀಕತ್ವವನ್ನು ಖಾಯಂಗೊಳಿಸಲಾಯಿತು. ಮದ್ಯಪಾನ ನಿಷೇಧ ಕುರಿತಂತೆ ಧ್ವನಿ ಎತ್ತಿದವರಲ್ಲಿ ನಾನೇ ಮೊದಲಿಗ ಎಂದು ಮಾನ್ಯ ಭೈರೇಗೌಡರು ಹೇಳಿದರೆ ಹೇಗೆ? ೧೯೪೮ರಿಂದ ೧೯೬೮ರವರೆವಿಗೂ ಮೈಸೂರು ಹಾಗೂ ಹೈದರಾಬಾದ್-ಕರ್ನಾಟಕ ಪ್ರಾಂತ್ಯದಲ್ಲಿ ಇದು ಇರಲಿಲ್ಲವೆಂದು ಕಾಣುತ್ತದೆ. ಈ ಹಿನ್ನಲೆಯಲ್ಲಿಯೇ ೧೯೬೮ರಲ್ಲಿ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದ ಶ್ರೀಮತಿ ಯಶೋಧರಮ್ಮನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಅಬ್ಕಾರಿ ಮಂತ್ರಿಗಳಾಗಿದ್ದರು. ನಾನು ಅತ್ತ ಕಡೆ ಕುಳಿತಿದ್ದೆ,

ಮದ್ಯಪಾನದ ಮೇಲಿನ ನಿಷೇಧವನ್ನು ತೆಗೆದುಹಾಕಿದಾಗ ಬೆಂಗಳೂರು ನಮ್ಮ ಮೈಸೂರು ನಗರಗಳಲ್ಲಿ ಹೆಂಡ ಮತ್ತು ಸಾರಾಯಿ ಲಭ್ಯವಿತ್ತು. ಇದರಿಂದಾಗಿ ಬೇಸರಪಟ್ಟು ಶ್ರೀಮತಿ ಯಶೋಧರಮ್ಮನವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿರುವುದು ಸದನದ ನಡವಳಿಕೆಯಲ್ಲಿದೆ. ಅವರ ಭಾಷಣವನ್ನು ತಾವು ಓದಬೇಕು. ಮದ್ಯಪಾನ ನಿಷೇಧಕ್ಕೆ ಮಾನ್ಯ ನಿಜಲಿಂಗಪ್ಪನವರು ಒಪ್ಪಿದರೂ, ಪುನಃ ೧೯೬೭ರಿಂದ ಜಾರಿಗೆ ಬಂದಾಗ ಹೆಂಡವನ್ನು ನಿಷೇಧಿಸಬೇಕೆಂದು ಹೇಳಿದರು. ಸಾರಾಯಿ ಲಾಬಿ ಜಾಸ್ತಿಯಿರಬಹುದು, ಹೆಂಡದ ಲಾಬಿ ಕಡಿಮೆ ಇರಬಹುದು. ಆದುದರಿಂದ ನಿಮಗಿಂತಲೂ ಮುಂಚಿತವಾಗಿ ಇದರ ವಿಚಾರದಲ್ಲಿ ಧ್ವನಿಯೆತ್ತಿರುವವರು ಇರುವುದರಿಂದ ಇದರ ಸೂತ್ರಧಾರಿಗಳು ನೀವಲ್ಲ. ದಿವಂಗತ ಶ್ರೀಮತಿ ಯಶೋಧರಮ್ಮನವರು ಇದಕ್ಕಾಗಿ ದೊಡ್ಡ ತ್ಯಾಗ ಮಾಡಿರುವುದು ನನಗೆ ಗೊತ್ತಿದೆ. ಯಾವ್ಯಾವ ಹೆಂಡದ ಗುತ್ತಿಗೆದಾರರು ಇಲ್ಲಿಗೆ ಬರುವಾಗ ಎಷ್ಟೆಷ್ಟು ಬಾಕಿ ಕೊಡಬೇಕಾಗಿತ್ತು? ಯಾರ್ಯಾರಿಗೆ ಅದನ್ನು ಬಿಡುಗಡೆ ಮಾಡಿದರು ಎಂಬುದೆಲ್ಲಾ ನನಗೆ ಗೊತ್ತಿದೆ. ಈ ಕುರಿತಂತೆ ಅಂದು ಸದನದಲ್ಲಿ ಜರುಗಿದ ಕಲಾಪಗಳೆಲ್ಲವೂ ನಡವಳಿಕೆಯಲ್ಲಿರುವುದರಿಂದ ತಾವು ದಯಮಾಡಿ ಓದಬೇಕು. ಅಬ್ಕಾರಿ ಲಾಬಿ ಹಿಂದೆ ಇರಲಿಲ್ಲ. ಅಬ್ಕಾರಿ ಗುತ್ತಿಗೆದಾರರು ಸರ್ಕಾರದಿಂದ ಬಹಳ ದೂರ ಇರುತ್ತಿದ್ದರು. ದಿವಂಗತ ವೆಂಕಟಸ್ವಾಮಿಯವರಾಗಲಿ, ಗುರುಸ್ವಾಮಿಯವರಾಗಲಿ ಅವರುಗಳು ಅಬ್ಕಾರಿ ವಲಯದಲ್ಲಿ ದೊಡ್ಡ ಗುತ್ತಿಗೆದಾರರಾಗಿದ್ದರು. ಸರ್ಕಾರದಿಂದ ದೂರ ಇದ್ದಂಥವರು ಇವೊತ್ತು ಯಾವುದೋ ಕಾರಣದಿಂದ ಅವರೆಲ್ಲರೂ ಹತ್ತಿರ ಬಂದಿದ್ದಾರೆ. ಅದರ ಗುತ್ತಿಗೆ ಮಾಡುವವರಿಗೂ ಕಾಂಗ್ರೆಸ್ ಸದಸ್ಯತ್ವದಲ್ಲಿ ಅವಕಾಶ ಕೊಡುತ್ತಿರಲಿಲ್ಲ, ಬರ್ತಾಬರ್ತಾ ಅದರಲ್ಲಿ ಸಡಿಲವಾಗಿ ಅವರು ಅಭ್ಯರ್ಥಿಗಳೂ ಆಗಿದ್ದಾರೆ, ಮಂತ್ರಿಗಳೂ ಆಗಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ: ಮೊದಲು ಅಬ್ಕಾರಿಯಿಂದ ರಾಜಕೀಯ ದೂರವಿತ್ತು. ಆದರೆ ಈಗ ಅಬ್ಕಾರಿ ಇಲ್ಲದೆಯೇ ರಾಜಕೀಯವನ್ನೇ ಮಾಡಲು ಆಗುವುದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಅದು ತಮಗೆ ಹೊರತಾಗಿತ್ತೆ? ತಮಗೂ ಇಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ನಾನೂ ಅದರಲ್ಲಿ ಸೇರಿಕೊಂಡು ಮಾತನಾಡುತ್ತಿದ್ದೇನೆ. ಇದರಲ್ಲಿ ಮುಚ್ಚಿಡುವುದೇನೂ ಇಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಗಾಜಿನ ಮನೆಯಲ್ಲಿ ವಾಸ ಮಾಡುವವರು ಇನ್ನೊಬ್ಬರ ಮನೆಗೆ ಕಲ್ಲನ್ನು ಎಸೆಯಲೇಬಾರದು.

ಶ್ರೀ ಕೆ.ಶ್ರೀನಿವಾಸಗೌಡ: ನಾನು ಹೇಳುತ್ತಿರುವುದೂ ಅದನ್ನೇ!

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ರಂಗನಾಥ್‌ರವರು ಹೇಳಿದ ಮಾತಿಗೆ ನಮ್ಮ ಬೇರೆ ಮಾತು ಇಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಇದನ್ನು ಮಾಡಿದರೆ ಬಡವರಿಗೆ ಅನ್ಯಾಯವಾಗುತ್ತದೆಂದು ಹೋರಾಟ ಮಾಡಿದ್ದಾರೆ ಇಲ್ಲವೆಂದು ಹೇಳುವುದಿಲ್ಲ. ಇವತ್ತು ತಾವು ರಾಜ್ಯದಲ್ಲಿ ಪಾನ ನಿರೋಧವನ್ನು ಜಾರಿಗೆ ತಂದರೆ ನಾವು ಇದರ ಬಗ್ಗೆ ಏನನ್ನೂ ಹೇಳುವುದಿಲ್ಲ. ಆದರೆ ತಾವು ಅದನ್ನು ಮಾಡುತ್ತಿಲ್ಲ. ಒಂದು ಕಡೆ ಪಾನ ಮಾಡಲು ಅವಕಾಶ ಕೊಟ್ಟಿದ್ದೀರಿ. ಈ ದೃಷ್ಟಿಯಿಂದ ರೈತರಿಗೇಕೆ ಅನ್ಯಾಯ ಮಾಡುತ್ತೀರಿ ಎಂಬುದು ನಮ್ಮ ಪ್ರಶ್ನೆ.

ಶ್ರೀ ಕೆ.ಹೆಚ್.ರಂಗನಾಥ್: ಇವತ್ತು ರಾಜಕೀಯವಾಗಿ ಮಾತನಾಡಲು ಇದನ್ನು ಬಳಸಬೇಡಿ. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ಇದನ್ನು ಸಮರ್ಥನೆ ಮಾಡಿದವರು ಅಂದಿನ ಹಣಕಾಸು ಮತ್ತು ಅಬ್ಕಾರಿ ಸಚಿವರಾಗಿದ್ದಂಥ ಮಾನ್ಯ ರಾಮಕೃಷ್ಣ ಹೆಗಡೆಯವರು.

ಶ್ರೀ ಎಸ್.ಎಸ್.ಪಾಟೀಲ್: ಆ ಕಾಲಕ್ಕೆ ಮಾಡಿದ್ದರು, ನಾನು ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ನಿಜಲಿಂಗಪ್ಪನವರೂ ಸಹ 'ತಪ್ಪು ಮಾಡಿದೆವು' ಎಂದರು. ಆದರೆ ಇವತ್ತು ಮದ್ಯಪಾನ ಜಾರಿಯಲ್ಲಿದೆ. ಆದರೆ ನೀರಾವನ್ನು ಇಳಿಸಲು ಸರ್ಕಾರ ವಿರೋಧ ಮಾಡಲು ಬರುವುದೇ ಇಲ್ಲ. ಮತ್ತು ಬರುವುದೇನಿದೆ ಅದನ್ನು ಮಾತ್ರ ಜಾರಿ ಮಾಡಬಾರದೆಂದಿದೆ, ನೀರಾವನ್ನು ಇಳಿಸಿದರೆ ಏಕೆ ಅಡ್ಡಿ ಮಾಡಲು ಹೋಗುವಿರಿ? ಅದು ಹೆಂಡವಾಗಿದ್ದರೆ ಕೇಸನ್ನು ಹಾಕಿ. ನೀರಾವನ್ನು ಇಳಿಸಲು ಏಕೆ ಅಡ್ಡಿ ಮಾಡುತ್ತೀರಿ? ಅದು ತಪ್ಪು.

ಶ್ರೀ ಕೆ.ಹೆಚ್.ರಂಗನಾಥ್: ತಾವು ಆಕ್ರೋಶದಿಂದೇಕೆ ಮಾತನಾಡುತ್ತೀರಿ? ಸದಸ್ಯರೊಬ್ಬರು ಮಾತನಾಡುತ್ತಿರುವಾಗ ಬಾಟಲಿಯಲ್ಲಿ ನೀರಾ ತಂದೆಯೆಂದು ಹೇಳಿದರು. ಆರು ಗಂಟೆಯಾದ ನಂತರ ಈಸ್ಟ್ ಫಾರಂ ಆಗುತ್ತದೆ, ಫರ್ಮೆಂಟೇಷನ್ ಜಾರಿಯಾಗುತ್ತದೆ, ಅದು ಬರುವಾಗ ಹೆಂಡವಾಗುತ್ತದೆ. ದೋಸೆ ಹಿಟ್ಟು ಹೀಗೆ ಹುಳಿಯಾಗುತ್ತಿ ಬರುತ್ತದೋ ಹಾಗೆ ಇದೂ ಸಹ, ಸಿಹಿ ಇದ್ದಾಗ ನೀರಾ, ಹುಳಿಯಾಗುತ್ತಾ ಬಂದಾಗ ಹೆಂಡ. ಹತ್ತು ಗಂಟೆಗೆ ನೀರಾ ಬಾಟಲ್ ತಂದೆ ಎಂದಾಗ ಅದು ನೀರಾ ಅಲ್ಲವೆಂದು ಮಾನ್ಯ ಗೃಹ ಸಚಿವರು ಹೇಳಿದರು.

ಶ್ರೀ ಎಸ್.ಎಸ್.ಪಾಟೀಲ್: ರೈತರು ನೀರಾವನ್ನು ಇಳಿಸಿಕೊಡುತ್ತಾರೆ. ಮುಂದೆ ಏನಾಗುತ್ತದೋ ಅದು ಬೇರೆ ಮಾತು. ರೈತರು ಇಳಿಸುವ ನೀರಾವನ್ನು ತಡೆಗಟ್ಟಲು ಸರ್ಕಾರಕ್ಕೆ ಅಧಿಕಾರವಿಲ್ಲ, ಯಾವ ಕಾಯ್ದೆಯಲ್ಲೂ ಅವಕಾಶವಿಲ್ಲ.

ಶ್ರೀ ಸಿ.ಬೈರೇಗೌಡ: ಹಿರಿಯರಾದಂಥ ಮಾನ್ಯ ರಂಗನಾಥ್‌ರವರು ಪಾನ

ನಿರೋಧದ ಬಗೆಗಿನ ಚರಿತ್ರೆಯನ್ನು ನೆನಪಿಸಿದ್ದಾರೆ, ಅದಕ್ಕೆ ಧನ್ಯವಾದಗಳು. ಯಾವ್ಯಾವ ಘಟ್ಟದಲ್ಲಿ ಏನೇನು ಆಯಿತು ಎಂಬುದನ್ನು ತಿಳಿಸಿದ್ದಾರೆ. ಮೊದಲು ಸಾರಾಯಿ, ಹೆಂಡ ವಿಸ್ಕಿ ಮತ್ತೊಂದು ಇತ್ತು. ಹೆಂಡ, ಸಾರಾಯಿ ಎರಡೂ ಇದ್ದಂಥ ಕಾಲದಲ್ಲಿ ಹೆಂಡವನ್ನು ಕೊಡುವುದಕ್ಕೆ ಬದಲಾಗಿ ಕ್ಲೋರೋ ಹೈಡ್ರೈಡನ್ನು ನೀರಿಗೆ ಬೆರೆಸಿ ವಿಷವನ್ನು ಕೊಡುತ್ತಿದ್ದಂಥ ಪರಿಸ್ಥಿತಿ ಬಂತು. ಆಗ ನಿಜವಾದಂಥ ಹೆಂಡವನ್ನು ಕೊಡುತ್ತಿರಲಿಲ್ಲ.

ಶ್ರೀ ಕೆ.ಎಚ್.ರಂಗನಾಥ್: ನಾವೆಲ್ಲರೂ ಸಾರ್ವಜನಿಕ ಹಿತಕ್ಕಾಗಿ ಸದಸ್ಯರಾಗಿ ಇಲ್ಲಿಗೆ ಬಂದಿದ್ದೇವೆ. ನಾವು ತೆಂಗಿನ ಮರದ ಬಗ್ಗೆ ಪ್ರಶ್ನೆ ಮಾಡುತ್ತಿರುವಾಗ, ಅದರ ಮಾಲೀಕರಾಗಿ ಸಣ್ಣ ರೈತರಾಗಿಯೋ, ದೊಡ್ಡ ರೈತರಾಗಿಯೋ ನಮ್ಮ ಸ್ವಂತ ಹಿತದಿಂದ ಮಾತನಾಡುತ್ತಿದ್ದೇವೆ. ಕ್ಲೋರೋಹೈಡ್ರೈಡನ್ನು ಮಿಕ್ಸ್ ಮಾಡಿ ಹೆಂಡದ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದುದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ, ಕಣ್ಣು ಹೋಗುತ್ತದೆ ಎಂಬ ಕಾರಣದಿಂದ ಪಾನ ನಿರೋಧ ಜಾರಿಗೆ ತರಬೇಕೆಂದು ಸಾರ್ವಜನಿಕ ಹಿತದೃಷ್ಟಿಯಿಂದ ಆ ಒಂದು ವಿಚಾರಧಾರೆ ಇತ್ತು. ಆದರೆ ಇವತ್ತು ಈ ನೀರಾ ಹೆಂಡವಾಗಿ ಪರಿವರ್ತನೆಯಾಗುವುದಿಲ್ಲವೆಂಬುದಕ್ಕೆ ಏನು ಗ್ಯಾರಂಟಿ? ನಾಳೆ ಎಲ್ಲಾ ಮರಗಳಿಂದ ನೀರಾವನ್ನು ಇಳಿಸಿದರೆ ಸುಮಾರು ಒಂದು ಕೋಟಿ ಲೀಟರ್ ನೀರಾ ಉಳಿಯುತ್ತದಂತೆ, ಅದನ್ನು ತೆಗೆದುಕೊಂಡು ಹೋಗಿ ಚರಂಡಿಗೆ ಚೆಲ್ಲುತ್ತೀರಾ? ಅಥವಾ ಎಲ್ಲರೂ ಅದನ್ನು ಕುಡಿಯಬೇಕೆಂದು ಕಡ್ಡಾಯ ಮಾಡುತ್ತೀರಾ? ಇದರ ಬಗ್ಗೆ ನಾವೆಲ್ಲಾ ಯೋಚನೆ ಮಾಡಬೇಕು. ಮಾನ್ಯ ಪಾಟೀಲರಿಗೆ ನೀರಾ ಕುಡಿಯಿರಿ ಎಂದು ಹೇಳಲು ಆಗುತ್ತದೆಯೇ? ನಾಳೆ ದಿವಸ ಕ್ಲೋರೋಹೈಡ್ರೈಡನ್ನು ಮಿಕ್ಸ್ ಮಾಡುವುದಿಲ್ಲ, ಅದು ಹೆಂಡವಾಗುವುದಿಲ್ಲವೆಂಬುದಕ್ಕೆ ಏನು ಗ್ಯಾರಂಟಿ? ನಾಳೆ ದಿವಸ ಇನ್ನೊಂದು ಲಾಬಿ ಪ್ರಾರಂಭವಾಗಿ ರೈತರ ಹೆಸರಿನಲ್ಲಿ ಹೆಂಡ ಮರು ಪ್ರವೇಶವಾದರೆ ಏನು ಮಾಡಬೇಕು? ಆ ರೀತಿ ಆಗುವುದಿಲ್ಲವೆಂಬುದಕ್ಕೆ ಯಾವ ಗ್ಯಾರಂಟಿ ಇದೆ?

ಶ್ರೀ ಸಿ.ಭೈರೇಗೌಡ: ಕ್ಲೋರೋಹೈಡ್ರೈಡ್‌ನ್ನು ಮಿಕ್ಸ್ ಮಾಡಿ ಮಾರುತ್ತಿದ್ದವರ ಬಗ್ಗೆ ನಾನು ಹಿಂದೆ ಧ್ವನಿಯೆತ್ತಿದ್ದೆ. ಅದರ ಬಗ್ಗೆ ಮಾತ್ರ ನಾನು ಹೇಳಲು ಬಯಸುತ್ತೇನೆ. ಒತ್ತಾಯದ ಮೇರೆಗೆ ರಾಜ್ಯ ಸರ್ಕಾರ ಆಗ ಹೆಂಡವನ್ನು ನಿಷೇಧ ಮಾಡತಕ್ಕ ತೀರ್ಮಾನವನ್ನು ತೆಗೆದುಕೊಂಡಿತು.

ಶ್ರೀ ಕೆ.ಹಚ್.ರಂಗನಾಥ್: ಆ ರೀತಿ ಮಾಡಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಇಡೀ ಸಮುದಾಯದ ಹಿತದೃಷ್ಟಿಯಿಂದ. ಆದರೆ ನಾವು ಇವತ್ತು ಮಾತನಾಡುತ್ತಿರುವುದೇನು? ನನಗೆ ನಾಲ್ಕು ರೂಪಾಯಿ ಬರುತ್ತದೆ, ಹತ್ತು ರೂಪಾಯಿ ಬರುತ್ತದೆ, ತೊಂದರೆಯಾಗಿದೆ ನನ್ನ ಮರವನ್ನು ಉಳಿಸಿಕೊಳ್ಳಬೇಕು ಎಂಬ

ದೃಷ್ಟಿಯಿಂದ ಮಾತನಾಡುತ್ತಿದ್ದೇವೆ. ಈ ಚರ್ಚೆ ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡುತ್ತಿಲ್ಲ. ನಮ್ಮ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆ. ನನಗೂ ೨೫೦-೨೬೦ ತೆಂಗಿನ ಮರಗಳಿವೆ. ನನ್ನ ಮರಗಳಿಗೂ ನುಸಿರೋಗ ಬಂದಿದೆ. ಆದರೆ ನಮ್ಮ ಪ್ರಯತ್ನ, ನಮ್ಮ ದೃಷ್ಟಿಯಿಂದ ಮಾತನಾಡುತ್ತಿದ್ದೇವೆ. ಇಡೀ ಸಾರ್ವಜನಿಕರ ದೃಷ್ಟಿಯಿಂದ ಮಾತನಾಡುತ್ತಿಲ್ಲ. ನಮ್ಮ ಉದ್ದಿಮೆಗಾಗಲಿ, ವ್ಯವಸಾಯ ಮಾಡತಕ್ಕ ಬಡಜನರೇನಿದ್ದಾರೆ ಅವರ ದೃಷ್ಟಿಯಿಂದ ನಾವು ವಿಚಾರ ಮಾಡುತ್ತಿದ್ದೇವೆಯೇ? ಕೇವಲ ನಮ್ಮ ದೃಷ್ಟಿಯಿಂದ ಮಾಡುತ್ತಿದ್ದೇವೆ. ನನ್ನ ಭೂಮಿ, ನನಗಿರುವ ಆದಾಯ ಕಡಿಮೆಯಾಗುತ್ತಿದೆ ಎಂಬ ದೃಷ್ಟಿಯಿಂದ ನೀರಾ ಬೇಕೆಂದು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಸಿ.ಭೈರೇಗೌಡ: ಮಾನ್ಯ ರಂಗನಾಥ್‌ರವರು ಹೇಳಿರುವ ವಿಚಾರವನ್ನು ಸಂಪೂರ್ಣವಾಗಿ ನಾನು ತಳ್ಳಿ ಹಾಕುವುದಿಲ್ಲ. ಅವರ ವಾದದಲ್ಲೂ ಅರ್ಥವಿದೆ. ತೆಂಗಿನ ಮರವಿರುವವರು ನೀರಾ ಇಳಿಸಲು ಅನುಮತಿ ಕೊಡಬೇಕೆಂದು ಹೇಳುತ್ತಿರುವುದು ನಿಜ. ಆದರೆ ಇವರುಗಳು ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂಬ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಇವರುಗಳ ಆರ್ಥಿಕ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದು ನಿಂತಿದೆ ಎಂಬ ಬಗ್ಗೆಯೂ ನಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್: ಹೈಡ್ರೋ-ಕ್ಲೋರೈಡ್ ಮಿಶ್ರಣ ಮಾಡುವುದಿಲ್ಲವೆಂಬುದಕ್ಕೆ ಏನು ಗ್ಯಾರಂಟಿ?

ಮಾನ್ಯ ಸದಸ್ಯರೊಬ್ಬರು: ನೀರಾ ಬೇಕೆಂದು ಯಾರೂ ಕೇಳುತ್ತಿಲ್ಲ. ತೆಂಗಿಗೆ ಬೆಂಬಲ ಬೆಲೆಯನ್ನು ಕೊಡಿಯೆಂದು ಕೇಳುತ್ತಿದ್ದೇವೆ.

ಶ್ರೀ ಸಿ.ಭೈರೇಗೌಡ: ಹಿಂದೆ ವ್ಯವಸ್ಥಿತವಾದ ರೀತಿಯಲ್ಲೇನು ಕ್ಲೋರೋಹೈಡ್ರೈಡ್‌ನ್ನು ಮಿಶ್ರಣ ಮಾಡಿ ಮಾರಾಟ ಮಾಡುವ ಪ್ರಯತ್ನವಾಯಿತೋ ಆ ಮಟ್ಟದಲ್ಲಿ ಹೋಗಬೇಕಾದ ಅವಶ್ಯಕತೆ ಇಲ್ಲ. ನುಸಿರೋಗದ ಬಾಧೆ ಕಡಿಮೆಯಾಗುವವರೆಗೆ ಎರಡು, ಮೂರು ವರ್ಷಗಳವರೆಗೆ ಮಾತ್ರ ನೀರಾವನ್ನು ಇಳಿಸಲು ಅನುಮತಿ ಕೊಡಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಈ ವಿಚಾರದಲ್ಲಿ ಈ ಮೊದಲು ವಿರೋಧ ವ್ಯಕ್ತಪಡಿಸಿ ಧ್ವನಿಯೆತ್ತಿದವರಲ್ಲಿ ಮೊದಲಿಗನು ನಾನು ಎಂದು ಆಗಲೇ ಹೇಳಿದ್ದೇನೆ. ಈಗ ಮೊದಲಿಗನಾಗಿ ನಾನೇ ಹೇಳುತ್ತಿದ್ದೇನೆ, ರೈತರ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ ನೀರಾವನ್ನು ಇಳಿಸಲು ಅವಕಾಶ ಕೊಡಬೇಕು. ಇದು ಹೆಂಡವಾಗುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿಯೆಂದು ಮಾನ್ಯ ರಂಗನಾಥ್‌ರವರು ಕೇಳಿದ್ದಾರೆ. ತಾವು ಹೇಳುವುದು ನಿಜ. ಇದು ಹೆಂಡವಾಗುವುದಿಲ್ಲ, ನೀರಾವನ್ನು ಕುಡಿಯುವವರು ಕೇವಲ ನೀರಾವನ್ನೆ ಕುಡಿಯುತ್ತಾರೆ ಎಂದು ಮುರ್ಖರು ಹೇಳಬೇಕೆ

ಏನಹ ಬೇರೆಯವರು ಹೇಳಲು ಹೋಗುವುದಿಲ್ಲ. ನೀರಾವನ್ನು ಬಳಸುವವರು ಬಳಸುತ್ತಾರೆ, ಹೆಂಡ ಮಾಡಿಕೊಂಡು ಬಳಸುವವರೂ ಇದ್ದಾರೆ. ನಮ್ಮ ದೇಶದಲ್ಲಿ ಯಾವುದಾದರೂ ಕಾನೂನನ್ನು ಮಾಡಿದರೆ ಎಲ್ಲರೂ ಸೈನಿಕರ ರೀತಿಯಲ್ಲಿ ಪಾಲನೆ ಮಾಡುತ್ತಾರೆ ಎಂಬುದಕ್ಕೆ ಯಾವುದೇ ಗ್ಯಾರೆಂಟಿ ಇಲ್ಲ. ದುರಪಯೋಗ ಆಗಿಯೇ ಆಗುತ್ತದೆ. ಯಾವ ಕಾರಣದಿಂದ ಇದನ್ನು ಸಹಿಸಿಕೊಳ್ಳಬೇಕೆಂದು ಹೇಳುತ್ತಿದ್ದೇವೆಂದರೆ, ಇವತ್ತು ರೈತರ ಪರಿಸ್ಥಿತಿ ಬಹಳ ಆತಂಕಕಾರಿಯಾಗಿದೆ, ಚಿಂತಾಜನಕವಾಗಿದೆ. ಆದ್ದರಿಂದ ನೀರಾವನ್ನು ಇಳಿಸಲು ಅವಕಾಶವನ್ನು ಮಾಡಿ ಕೊಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಕೆಲವು ದಿನಗಳ ಮಟ್ಟಿಗೆ ಸಾರಾಯಿ ಲಾಬಿಯನ್ನು ದೂರವಿಟ್ಟು ರೈತರ ಕಡೆ ನೋಡಬೇಕಾದ ಅವಶ್ಯಕತೆ ಇದೆ. ಸಾರಾಯಿಯ ಲಾಬಿಗೆ ಮಣಿದು ರೈತರಿಗೆ ನೀರಾವನ್ನಿಳಿಸಲು ಸರ್ಕಾರ ಅವಕಾಶ ಕೊಡುತ್ತಿಲ್ಲವೆಂದು ಜನರು ನೇರವಾಗಿ ಆಪಾದನೆ ಮಾಡುತ್ತಿದ್ದಾರೆ.

೬.೦೦ ಪಿಎಂ

ಇವತ್ತು ಸಿ.ಎಫ್.ಟಿ.ಆರ್.ಐ.ನವರು ನೀರಾವನ್ನು ನೀರಾ ಆಗಿಯೇ ಯಾವ ರೀತಿ ಇಟ್ಟುಕೊಳ್ಳುವುದು ಎಂಬ ಬಗ್ಗೆ ವೈಜ್ಞಾನಿಕವಾಗಿ ಪ್ರಯೋಗಗಳನ್ನು ನಡೆಸಿ ರಿಸರ್ಚ್ ನಡೆಸುತ್ತಿದ್ದಾರೆ. ಅವರು ಏನಾದರೂ ಒಂದು ಪರಿಹಾರ ಒದಗಿಸಬಹುದು. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಬಂದಿದ್ದಾರೆ. ಸಿ.ಎಫ್.ಟಿ.ಆರ್.ಐ.ಯಿಂದ ಶ್ರೀ ಎ.ಎಸ್.ಭಾವ ಎಂಬುವವರು ಮಾನ್ಯ ಮಂತ್ರಿಗಳಿಗೆ ಬರೆದಿರುವ ಪತ್ರದ ನಕಲು ನನ್ನ ಬಳಿ ಇದೆ. ಆ ಪತ್ರದ ಸ್ವಲ್ಪ ಭಾಗವನ್ನು ನಾನು ಇಲ್ಲಿ ಓದುತ್ತೇನೆ.

"With reference to the discussions held with the Hon'ble Minister of State for Horticulture, Government of Karnataka, Sri Allam Veerabhadrappa, during his visit to Defence Food Research Laboratory, Mysore on 7th July, 2001, I wish to inform that we have already started preliminary work on Neera Sample provided by the farmers for its preservation, to extend shelf life and maintain nutritive value. A detailed project indicating the funds required etc will be submitted shortly."

ನೀವು ಅವರಿಗೆ, ಅವರು ತಮಗೆ ಏನು ಸೌಕರ್ಯ ಮತ್ತು ಹಣ ಬೇಕೆಂದು ಕೇಳುತ್ತಿದ್ದಾರೋ ಅದನ್ನು ಒದಗಿಸಿಕೊಟ್ಟು ನೀರಾವಿನ ಶೆಲ್ಫ್ ಲೈಫ್ ಅನ್ನು ಜಾಸ್ತಿ ಮಾಡುವುದಕ್ಕೆ ಅವಕಾಶವನ್ನು ಒದಗಿಸಿ ರೈತರನ್ನು ಇವತ್ತು ನೀವು ಉಳಿಸಬೇಕಾಗಿದೆ.

ಇವತ್ತು ರೈತ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪ್ರಸಂಗಗಳು ಪ್ರತಿನಿತ್ಯ ನಡೆಯುತ್ತಿವೆ. ಈ ಕಾಲದಲ್ಲಿ ರೈತರನ್ನು ಉಳಿಸತಕ್ಕಂಥ ದೃಷ್ಟಿಯಿಂದ ಸಾರಾಯಿಯವರನ್ನು ದೂರ ಇಟ್ಟು ರೈತರ ಕಡೆ ನೀವು ನೋಡಬೇಕು ಎಂಬ ಮನವಿಯನ್ನು ನಾನು ಮಾಡುತ್ತಾ ನೀರಾ ಇಳಿಸಲು ಅವಕಾಶ ಮಾಡಿಕೊಡಿ ಎಂದು ಮತ್ತೊಮ್ಮೆ ಒತ್ತಾಯಿಸುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಸನ್ಮಾನ್ಯ ಅಧ್ಯಕ್ಷರು (ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ನೀರಾ ಬಗೆಗಿನ ಚರ್ಚೆ ಸದ್ಯಕ್ಕೆ ಮುಗಿಯಿತು. ನಾಳೆ ಇದನ್ನು ಮುಂದುವರೆಸೋಣ. ಉಳಿದವರಿಗೆ ಮಾತನಾಡಲು ನಾಳೆ ಅವಕಾಶ ಮಾಡಿಕೊಡಲಾಗುವುದು. ನಮ್ಮ ಛೇಂಬರ್‌ನಲ್ಲಿ ಆದ ಒಪ್ಪಂದದಂತೆ ೫.೩೦ ಗಂಟೆಯವರೆಗೆ ನೀರಾ ಬಗ್ಗೆ ಚರ್ಚೆ ಮುಗಿಸಿ ನಂತರ ಯೂನಿವರ್ಸಿಟಿ ಆ್ಯಕ್ಟ್ ಬಗ್ಗೆ ಚರ್ಚೆ ಕೈಗೆತ್ತಿಕೊಳ್ಳಬೇಕಾಗಿತ್ತು. ಮಾನ್ಯ ಹಿರಿಯ ಸದಸ್ಯರಾದ ಭೈರೇಗೌಡರು ಮಾತನಾಡುತ್ತಿದ್ದುದ್ದರಿಂದ ೫.೩೦ ಗಂಟೆಯಾದರೂ ಅವರನ್ನು ಡಿಸ್ಟರ್ಬ್ ಮಾಡುವುದು ಬೇಡ ಎಂದು ಸುಮ್ಮನಿದ್ದೆ. ಈಗ ಅವರ ಭಾಷಣ ಮುಗಿದಿದೆ. ಆದ್ದರಿಂದ ಈಗ ಯೂನಿವರ್ಸಿಟಿ ಆ್ಯಕ್ಟ್ ಬಗ್ಗೆ ಚರ್ಚೆ ಆರಂಭವಾಗಲಿ.